## 23ರ ಹೊಸ್ತಿಲಲ್ಲಿ

# ದೆಹಲಿ ಕರ್ನಾಟಕ ಸಂಘದ ಅಭಿಮತ

ಅಕ್ಟೋಬರ್ 2012
ಬೆಲೆ ರೂ. 1



# ಬೆಳ್ಳಿ ರಥವೇರಿದ ದೆಹಲಿ ಗಣಪ

ಅಭಿನಂದನೆ

# ಕರ್ನಾಟಕ ಸರ್ಕಾರದ ವ್ಯವಹಾರಗಳ ಸಮನ್ವಯಕಾರರಾಗಿ ಶ್ರೀ ಬೈಕೆರೆ ನಾಗೇಶ್



ಕರ್ನಾಟಕ ಸರ್ಕಾರದ ದೆಹಲಿಯ ಹೆಚ್ಚುವರಿ ವಿಶೇಷ ಪ್ರತಿನಿಧಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ ಬೈಕೆರೆ ನಾಗೇಶ್ ಅವರು ಇದೀಗ ಕರ್ನಾಟಕ ಸರ್ಕಾರದ ವ್ಯವಹಾರಗಳ ಸಮನ್ವಯಕಾರರಾಗಿ ನೇಮಕಗೊಂಡಿದ್ದಾರೆ. ಅವರಿಗೆ ಕ್ಯಾಬಿನೆಟ್ ದರ್ಜೆ ಸ್ಥಾನಮಾನ ನೀಡಿ ಸರ್ಕಾರ ಆದೇಶ ನೀಡಿದೆ. ಹೆಚ್ಚುವರಿ ವಿಶೇಷ ಪ್ರತಿನಿಧಿಯಾಗಿ ಪರಿಣಾಮಕಾರಿಯಾಗಿ ಸೇವೆಯನ್ನು ಸಲ್ಲಿಸಿದ ನಾಗೇಶ್ ಅವರು ಭಾರತ್ ನಿರ್ಮಾಣ್ ಮತ್ತು ಫ್ಲಾಗ್‌ಶಿಫ್ ಯೋಜನೆಗಳ ಅನುಷ್ಠಾನದ ಮಾಹಿತಿಗಳನ್ನೊಳಗೊಂಡ ಕನ್ನಡ ಮತ್ತು ಇಂಗ್ಲಿಷ್‌ನ ಕೈಪಿಡಿಯ 3 ಭಾಗಗಳನ್ನು ಹೊರತಂದಿದ್ದಾರೆ. ನಾಗೇಶ್ ಅವರು ಕೇಂದ್ರ ಮತ್ತು ರಾಜ್ಯ ಸಚಿವಾಲಯಗಳು ಮತ್ತು ಇಲಾಖೆಗಳೊಂದಿಗೆ ಸಮಾಲೋಚನೆ ಮಾಹಿತಿಯನ್ನು ಕಲೆ ಹಾಕಿ ಸಿದ್ಧಪಡಿಸಿದ ಕೈಪಿಡಿ ಗ್ರಾಮೀಣ ಪ್ರದೇಶಗಳಲ್ಲಿ ಪರಿಣಾಮಕಾರಿಯಾಗಿ ಮಹತ್ತರ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ಸಹಕಾರಿಯಾಗಿದೆ. 2011–12ರ ಸಾಲಿನ ಆರ್ಥಿಕ ವರ್ಷದಲ್ಲಿ ಕರ್ನಾಟಕ ರಾಜ್ಯಕ್ಕೆ 22,230 ಕೋಟಿ ರೂಪಾಯಿಗಳ ಅನುದಾನ ದೊರಕಿಸಿ ಕೊಡುವಲ್ಲಿ ಈ ಯೋಜನೆ ಯಶಸ್ವಿಯಾಗಿದೆ.

*ಕರ್ನಾಟಕ ಸರ್ಕಾರದ ವ್ಯವಹಾರಗಳನ್ನು ರಾಷ್ಟ್ರದ ರಾಜಧಾನಿಯಲ್ಲಿ ಅತ್ಯಂತ ಯಶಸ್ವಿಯಾಗಿ ನಿರ್ವಹಿಸುತ್ತಿರುವ ಶ್ರೀ ಬೈಕೆರೆ ನಾಗೇಶ್ ಅವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾಗೂ ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾರ್ದಿಕ ಅಭಿನಂದನೆಗಳು.*

# ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತಕ್ಕೆ ಮೊದಲ ಪದಕ ಬೆಳ್ಳಿಗೆ ಜಂಪ್ ಮಾಡಿದ ಕನ್ನಡಿಗ ಗಿರೀಶ್

## ಹೈಜಂಪ್‌ನಲ್ಲಿ ಭಾರತಕ್ಕೆ ಪ್ರಥಮ ಪದಕ

ಕನ್ನಡದ ಕುವರ ಗಿರೀಶ್ ಹೊಸನಗರ ನಾಗರಾಜೇಗೌಡ ಲಂಡನ್ ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತಕ್ಕೆ ಚೊಚ್ಚಲ ಪದಕ ತಂದುಕೊಟ್ಟ ಇತಿಹಾಸ ನಿರ್ಮಿಸಿದ್ದಾರೆ.

ಹಾಸನ ಜಿಲ್ಲೆಯ ಅರಕಲಗೂಡು ತಾಲೂಕಿನ ಹೊಸನಗರದ ನಿವಾಸಿ ಗಿರೀಶ್ ಪುರುಷರ ಎಫ್–42 ವಿಭಾಗದ ಹೈಜಂಪ್ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಜಯಿಸುವ ಮೂಲಕ ಈ ಸಾಧನೆ ಮಾಡಿದರು. ಇದು ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತಕ್ಕೆ ಒಲಿದ 8ನೇ ಹಾಗೂ ಹೈಜಂಪ್‌ನಲ್ಲಿ ಬಂದ ಮೊದಲ ಪದಕವಾಗಿದೆ.

ಲಂಡನ್ ಕ್ರೀಡಾಗ್ರಾಮದಲ್ಲಿ ನಡೆದ ಸ್ಪರ್ಧೆಯಲ್ಲಿ ಸುಮಾರು 80 ಸಾವಿರಕ್ಕೂ ಅಧಿಕ ಪ್ರೇಕ್ಷಕರ ಸಮ್ಮುಖದಲ್ಲಿ ಗಿರೀಶ್ ಈ ಸಾಹಸಗೈದರು. ಎಡಗಾಲಿನ ಪಾದದ ಅಂಗವೈಕಲ್ಯಕ್ಕೆ ಗುರಿಯಾಗಿರುವ 24 ವರ್ಷದ ಯುವಕ ಗಿರೀಶ್ 1.74 ಮೀ. ಜಿಗಿದು ಐತಿಹಾಸಿಕ ಸಾಧನೆ ಮೆರೆದರು.

ಕೃಷಿಕರಾದ ನಾಗರಾಜೇಗೌಡ ಮತ್ತು ಜಯಮ್ಮ ದಂಪತಿಯ ಪುತ್ರ ಗಿರೀಶ್ ಹುಟ್ಟಿನಿಂದಲೇ ಕಾಣಿಸಿಕೊಂಡ ಅಂಗವೈಕಲ್ಯದ ನಡುವೆಯೂ ಕ್ರೀಡಾಪಟುವಾಗಿ ಗುರುತಿಸಿಕೊಂಡಿದ್ದರು. ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಉತ್ತಮ ಪ್ರದರ್ಶನ ನೀಡುತ್ತಿದ್ದ ಗಿರೀಶ್ ಹಣಕಾಸಿನ ತೀವ್ರ ಮುಗ್ಗಟ್ಟಿನ ನಡುವೆಯೂ ಪ್ಯಾರಾಲಿಂಪಿಕ್ಸ್‌ನಲ್ಲಿ ಉತ್ತಮ ಪ್ರದರ್ಶನ ನೀಡುವ ಗುರಿ ಹೊಂದಿದ್ದರು. ವಿದ್ಯಾಭ್ಯಾಸದ ಹಂತದಿಂದಲೇ ಕ್ರೀಡಾ ಚಟುವಟಿಕೆಗಳಲ್ಲಿ ತನ್ನನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳುವ ಮೂಲಕ ಶಾಲಾ, ಕಾಲೇಜು ಮಟ್ಟದ ಸ್ಪರ್ಧೆಗಳಲ್ಲಿ ಹೆಸರು ಮಾಡಿದ್ದರು.

2006ರಲ್ಲಿ ಪಿಯುಸಿ ಓದುವಾಗ ಹೈಜಂಪ್ ಸ್ಪರ್ಧೆಯಲ್ಲಿ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದ ಅವರು ಆ ಬಳಿಕ ಮೈಸೂರು ಮಟ್ಟದ ಕ್ರೀಡಾಕೂಟದಲ್ಲಿ ಸಾಮಾನ್ಯರ ಜೊತೆ ಎರಡು ಬಾರಿ ಕಂಚು ಮತ್ತು ಎರಡು ಬಾರಿ ಚಿನ್ನ ಗೆದ್ದ ಸಾಧನೆ ಮಾಡಿದ್ದರು. ಹಿತೈಷಿಯೊಬ್ಬರು ನೀಡಿದ ಸಲಹೆ ಮೇರೆಗೆ ಅಂಗವಿಕಲರ ಕ್ರೀಡಾಕೂಟದಲ್ಲಿ ಪಾಲ್ಗೊಳ್ಳುವ ನಿರ್ಧಾರ ಮಾಡಿದ ಗಿರೀಶ್ ವಿದ್ಯಾಭ್ಯಾಸದ ಅನಂತರ ಹೊಟ್ಟೆ ಪಾಡಿಗೆ ಕೆಲಸ ಅರಸುವ ಜತೆಗೆ ತನ್ನ ಮೆಚ್ಚಿನ ಕ್ರೀಡೆಯನ್ನು ಪ್ರೀತಿಯಿಂದಲೇ ಅಭ್ಯಸಿಸತೊಡಗಿದರು. ದೇಶೀಯವಾಗಿ ನಡೆದ ಬಹುತೇಕ ಎಲ್ಲ ಕ್ರೀಡಾ ಕೂಟಗಳಲ್ಲಿ ಪದಕಗಳನ್ನು ಕೊರಳಿಗೆ ಹಾಕಿಕೊಂಡ ಗಿರೀಶ್ ಐಯರ್‌ಲ್ಯಾಂಡ್‌ನಲ್ಲಿ ನಡೆದ ಪ್ರಮುಖ ಕೂಟದಲ್ಲಿ ಕಂಚು, ಮಲೇಷ್ಯಾದಲ್ಲಿ ಕಂಚು ಕುವೈತ್‌ನಲ್ಲಿ ಚಿನ್ನ ಹಾಗೂ ಏಶ್ಯನ್ ಗೇಮ್ಸ್‌ನಲ್ಲಿ ಚಿನ್ನದ ಪದಕಗಳನ್ನು ಬೇಟೆಯಾಡಿದರು.

ಲಂಡನ್‌ನ ಪ್ಯಾರಾಲಿಂಪಿಕ್ಸ್ ಗೆ ನಡೆದ ಆಯ್ಕೆ ಶಿಬಿರದಲ್ಲಿ ಅತ್ಯುತ್ತಮವೆನಿಸುವ ಸಾಧನೆ ಗೈದ ಗಿರೀಶ್ ಈಗ ಬೆಳ್ಳಿಯ ಹುಡುಗನಾಗಿ ಅವತರಿಸಿರುವುದು ನಿಜಕ್ಕೂ ಹೆಮ್ಮೆಯ ಸಂಗತಿಯಾಗಿದೆ.



*ಕನ್ನಡಿಗರ ಹೆಮ್ಮೆಯನ್ನು ಹೆಚ್ಚಿಸಿದ ಗಿರೀಶ್ ಅವರಿಗೆ ದೆಹಲಿ ಕರ್ನಾಟಕ ಸಂಘ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಅಭಿನಂದನೆಗಳು. ತಮ್ಮ ಛಲದಿಂದ ಮತ್ತಷ್ಟು ಸಾಧನೆಯ ಕೀರ್ತಿ ಶಿಖರವನ್ನೇರಲಿ ಎಂದು ಶುಭ ಹಾರೈಸುತ್ತೇವೆ.*

ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 23 ಸಂಚಿಕೆ 1

ಅಕ್ಟೋಬರ್ 2012, ಬೆಲೆ ರೂ. 1

ಪ್ರಧಾನ ಸಂಪಾದಕರು

ಉಷಾ ಭರತಾದ್ರಿ

ಸಂಪಾದಕ ಮಂಡಳಿ

ಚೆನ್ನು ಎಸ್. ಮಠದ

ರೇಣುಕಾ ಎಸ್. ನಿಡಗುಂದಿ

ಸಂತೋಷ್ ಕುಮಾರ್ ಉಪಾಧ್ಯಾಯ

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ

ಅಧ್ಯಕ್ಷರು

ಡಾ. ವೆಂಕಟಾಚಲ ಜಿ. ಹೆಗಡೆ

ಉಪಾಧ್ಯಕ್ಷರು

ಉಷಾ ಭರತಾದ್ರಿ

ಬಿ.ಕೆ. ಬಸವರಾಜು

ಪ್ರಧಾನ ಕಾರ್ಯದರ್ಶಿ

ಸಿ.ಎಂ. ನಾಗರಾಜ

ಖಜಾಂಚಿ

ಕೆ.ಆರ್. ರಾಮಮೂರ್ತಿ

ಜಂಟಿ ಕಾರ್ಯದರ್ಶಿಗಳು

ಎನ್.ಆರ್. ಶ್ರೀನಾಥ್

ರೇಣುಕಾ ಎಸ್. ನಿಡಗುಂದಿ

ಸಮಿತಿ ಸದಸ್ಯರು

ಆಂಜನಿ ಗೌಡ

ಎಸ್.ಸಿ. ಹೇಮಲತ

ಟಿ.ಎಂ. ಮೈಲಾರಪ್ಪ

ಪಿ.ಸಿ. ಶ್ರೀನಿವಾಸ

ಸಿ.ಆರ್. ಶ್ರೀನಿವಾಸ

ಜಿ.ಬಿ. ಹೆಗಡಿ

ಆನಂದ ಈಶ್ವರಪ್ಪ ಮುರಗೋಡ

ಬಿ. ನಾರಾಯಣ

ಆರ್. ರೇಣುಕುಮಾರ್

ಎಸ್. ಕೃಷ್ಣ ಭಟ್

ಶಶಿಕಾಂತ್ ಪಾಟೀಲ್

ಮುಖಪುಟ ಚಿತ್ರ ವಿನ್ಯಾಸ

ಕಲಾವಿದ ಸುಧೀರ್ ಘಡ್ನೀಸ್

**DELHI KARNATAKA SANGHA**

Rao Tularam Marg, Sector-12, R K Puram,

New Delhi-110022.

Phone: 011-26109615. 011-65643615

email:dksangha@gmail.com

website : www.delhikarnatakasangha.com

# ಮನದ ಮಾತು

ಇದು ದೆಹಲಿ ಕರ್ನಾಟಕ ಸಂಘದ ಮುಖಪತ್ರಿಕೆ, ನಿಮ್ಮೆಲ್ಲರ ಪ್ರೀತಿಯ 'ಅಭಿಮತ'ದ 23ನೇ ವರ್ಷದ ಮೊದಲ ಸಂಚಿಕೆ. ದೆಹಲಿ ಕನ್ನಡಿಗರ ಸಂವೇದನೆಗಳಿಗೆ, ದೂರದ ನಮ್ಮ ನಾಡು ನುಡಿಗಳ ಬಗೆಗಿನ ಸ್ಪಂದನಕ್ಕೆ ಸೂಕ್ತ ವೇದಿಕೆ ನಿರ್ಮಿಸಲು ನಮ್ಮ ಹಿರಿಯರು 'ಅಭಿಮತ' ಪತ್ರಿಕೆಯನ್ನು ಸಣ್ಣ ಪ್ರಮಾಣದಲ್ಲಿ ಪ್ರಾರಂಭಿಸಿದರು. ಅಂದಿನಿಂದ ಇಂದಿನವರೆಗೆ ನಾಡು ನುಡಿಗಳ ಸಂಗತಿಗಳನ್ನು ದೆಹಲಿ ಕನ್ನಡಿಗರಿಗೆ, ದೆಹಲಿ ಕನ್ನಡಿಗರ ಮನದಾಳದ ಮಾತುಗಳನ್ನು ನಾಡಿನ ಬಾಂಧವರಿಗೆ ತಲುಪಿಸಲು, ದೆಹಲಿ ಕರ್ನಾಟಕ ಸಂಘ ಅವಿರತವಾಗಿ ನಡೆಸಿಕೊಂಡು ಬರುತ್ತಿರುವ ಕನ್ನಡ ಚಟುವಟಿಕೆಗಳನ್ನು ಸಮರ್ಥವಾಗಿ ಬಿಂಬಿಸಲು 'ಅಭಿಮತ' ಸೂಕ್ತ ಮಾಧ್ಯಮವಾಗಿ ಪರಿಣಮಿಸಿದೆ. ಇದಕ್ಕೆ ಮುಖ್ಯ ಕಾರಣ–ನಿಮೆಲ್ಲರ ಪ್ರೀತಿ ಹಾಗು ಬೆಂಬಲ. ಈ ಪ್ರೀತಿ, ಬೆಂಬಲಗಳು 'ಅಭಿಮತ'ಕ್ಕೆ ನಿರಂತರವಾಗಿ ಲಭಿಸಲಿ ; ಭವಿಷ್ಯದ ದಿನಗಳಲ್ಲಿ ಅದು ಮತ್ತಷ್ಟು ಸಬಲಗೊಳ್ಳಲಿ ಎಂಬುದು ನಮ್ಮ ಕಳಕಳಿಯ ಆಶಯ.

ನಮ್ಮ ರಾಜ್ಯ ಕರ್ನಾಟಕದಿಂದ ಬರುವ ಸುದ್ದಿಗಳು ಆತಂಕ ತರುವಂತವು. ಬಹುಶಃ ನಾವು ನಮ್ಮ ಅಗತ್ಯಗಳನ್ನು ಸ್ಪಷ್ಟವಾಗಿ, ನಿಖರವಾಗಿ ಸಾದರ ಪಡಿಸದ ಕಾರಣ ಕೇಂದ್ರ ಹಾಗೂ ಸರ್ವೋಚ್ಚ ನ್ಯಾಯಾಲಯ ಕಾವೇರಿ ನೀರಿನ ಹಂಚಿಕೆ ಬಗ್ಗೆ ರಾಜ್ಯದ ಹಿತಾಸಕ್ತಿಗೆ ಮಾರಕವಾಗುವಂತಹ ತೀರ್ಪು ನೀಡಿವೆ. ನಿಜ ಹೇಳಬೇಕೆಂದರೆ ಕಾವೇರಿ ನೀರಿನ ಹಂಚಿಕೆ ವಿವಾದ ಇಂದು ನಿನ್ನೆಯದಲ್ಲ. ಇತಿಹಾಸದ ಆಳದಾಳದಲ್ಲಿ ಬೇರು ಬಿಟ್ಟಿರುವಂತಹದ್ದು. ಪ್ರತಿವರ್ಷ ಮಳೆಗಾಲದ ಶುರುವಿನಲ್ಲಿ ಈ ವಿವಾದ ಹೊಗೆಯಾಡುತ್ತಿತ್ತು. ಆನಂತರ ಧಾರಾಕಾರ ಮಳೆ ಸುರಿದು ನೀರು ತಂತಾನೇ ಹರಿದು ಹೋಗುತ್ತಿತ್ತು. ವರುಣ ಕೃಪೆ ತೋರಿದಾಗ ನಾವೆಂದೂ ಜಿಪುಣತನ ಮಾಡಿಲ್ಲ, ಮಾಡುವುದೂ ಇಲ್ಲ. ಆದರೆ ಈ ಸಲದ ಸ್ಥಿತಿ ಚಿಂತಾಜನಕ. ಅಗತ್ಯಕ್ಕೆ ತಕ್ಕಂತಹ ಮಳೆಯಾಗದೆ ನಾವು ತತ್ತರಿಸಿದ್ದೇವೆ. ನಮ್ಮ ಜಲಾಶಯಗಳಲ್ಲಿ ಇರುವ ನೀರು ನಮ್ಮ ಅಗತ್ಯಗಳಿಗೇ ಎಟಕುತ್ತಿಲ್ಲ. ಸಾವಿರಾರು ಹೆಕ್ಟೇರ್ ಭೂಮಿ, ಮೈಸೂರು ಸುತ್ತಮುತ್ತ ಹಾಗೂ ಬೆಂಗಳೂರಿಗೆ ನೀರುಣಿಸುವ ಕಾವೇರಿ ತಾಯಿ ಈ ಬಾರಿಯ ಮಳೆಯ ಕೊರತೆಯಿಂದಾಗಿ ಸೊರಗಿದ್ದಾಳೆ. ಇಂತಲ್ಲಿ ನಮಗೇ ಸಾಕಾಗದ ನೀರನ್ನು ಪರ ರಾಜ್ಯಕ್ಕೆ ನೀಡುವುದಾದರೂ ಹೇಗೆ? ನಮ್ಮ ರಾಜ್ಯದ ಎಲ್ಲ ರಾಜಕೀಯ ಪಕ್ಷಗಳು ಪಕ್ಷಭೇದ ಮರೆತು ಒಕ್ಕೊರಲಿನಿಂದ ಕೇಂದ್ರ ಹಾಗೂ ಸರ್ವೋಚ್ಚ ನ್ಯಾಯಾಲಯಗಳಿಗೆ ಈ ಬಗ್ಗೆ ಮನದಟ್ಟು ಮಾಡಿಕೊಡಬೇಕು. ರಾಜ್ಯದ ಹಿತಾಸಕ್ತಿ ಎದುರು ವೈಯಕ್ತಿಕ ರಾಜಕೀಯ ಲಾಭ ನಷ್ಟಗಳು ಗೌಣವಾಗಬೇಕು. ನಮ್ಮ ರಾಜಕಾರಣಿಗಳಿಗೆ ಈ ನಿಟ್ಟಿನಲ್ಲಿ ಸದ್ವಿವೇಕ ಮೂಡಲಿ ಎಂಬುದು ನಮ್ಮ ಅಭಿಲಾಷೆ ಹಾಗೂ ಹಾರೈಕೆ. ಇವೆಲ್ಲಕ್ಕಿಂತ ಹೆಚ್ಚಾಗಿ ಹತ್ತಾರು ವರ್ಷಗಳಿಗೊಮ್ಮೆ ಸಂಭವಿಸುವ 'ಬರಗಾಲ'ಕ್ಕೆ ಹೊಂದಿಕೊಳ್ಳುವಂತೆ ಶಾಶ್ವತ ನೀತಿ ಸಂಹಿತೆಯನ್ನು ಜಾರಿಗೊಳಿಸುವಂತೆ ಹಕ್ಕೊತ್ತಾಯ ಮಾಡಬೇಕು. ಆಗ ವಿವಾದಕ್ಕೆ ಶಾಶ್ವತ ತೆರೆ ಎಳೆದಂತಾಗುತ್ತದೆ.

ನಮ್ಮ ನಾಡು ಇತಿಹಾಸದ ಪುಟಗಳಲ್ಲಿ ತನ್ನದೇ ಆದ ದಾಖಲೆಗಳನ್ನು ನಿರ್ಮಿಸಿದೆ. ನಮ್ಮ ಅನೇಕ ನಗರಗಳು, ಪಟ್ಟಣಗಳು ಮೈನವಿರೇಳಿಸುವಂತಹ ಐತಿಹಾಸಿಕ ಸ್ಮಾರಕಗಳನ್ನು ಹೊಂದಿವೆ. ಪ್ರವಾಸಿಗರಾಗಿ ನಾವು ಟೆಲ್ ಅವೀವ್, ಸೈಂಟ್ ಪೀಟರ್ಸ್ ಬರ್ಗ್ ಅಥವಾ ವೆನೀಸ್ ನಗರಗಳಿಗೆ ಹೋದಾಗ ಸಿಗುವ ಅಚ್ಚರಿಗಳು ನಮ್ಮಲ್ಲಿಯೂ ಇವೆ. ಆದರೆ ಆ ಊರುಗಳಲ್ಲಿರುವ ರಸ್ತೆ, ನೀರು, ಶುಚಿತ್ವ ಮೊದಲಾದ ಅಗತ್ಯ ಸೌಲಭ್ಯ, ಸವಲತ್ತುಗಳು ನಮ್ಮಲ್ಲಿ ಲಭ್ಯವಿಲ್ಲ. ಕಿರಿದಾದ ಕೊಳಕು ರಸ್ತೆಗಳನ್ನು ದಾಟಿ ಸ್ಮಾರಕಗಳನ್ನು ಮುಟ್ಟಿದರೆ ಅಲ್ಲಿಯೂ ಕಸದ ರಾಶಿ. ಹೇಳುವವರಿಲ್ಲ, ಕೇಳುವವರಿಲ್ಲ. ಹಂಪಿ ಬಿಟ್ಟರೆ ಬೇರೆಡೆ ಎಲ್ಲೂ ಪ್ರವಾಸಿಗರಿಗೆ ಸ್ಪಂದಿಸುವ ಪರಿಸರವಿಲ್ಲ. ಸಂತೋಷದ ಸಂಗತಿ ಎಂದರೆ ತಡವಾದರೂ ಸರ್ಕಾರ ಈಗ ಎಚ್ಚೆತ್ತಿದೆ. ಐತಿಹಾಸಿಕ ಸ್ಥಳಗಳಾದ ಬೀದರ್, ಗುಲ್ಬರ್ಗಾ, ಬಿಜಾಪುರ, ಬಾದಾಮಿ, ಮೈಸೂರು ಹಾಗೂ ಶ್ರೀರಂಗಪಟ್ಟಣಗಳನ್ನು 'ವೆನೀಸ್' ಮಾದರಿಯಲ್ಲಿ ಅಭಿವೃದ್ಧಿಗೊಳಿಸಲು ಯೋಜನೆ ಸಿದ್ಧವಾಗಿದೆ. ಇದಕ್ಕಾಗಿ 1400 ಕೋಟಿ ರೂಪಾಯಿಗಳನ್ನು ಮೀಸಲಿಡಲು ನಿರ್ಧಾರವಾಗಿದೆ. ಈ ಯೋಜನೆ ಕಾರ್ಯಗತಗೊಂಡರೆ ಈ ನಮ್ಮ ಊರುಗಳು ಪರಂಪರೆಗಳ ಪಟ್ಟಣಗಳ ಸಾಲಿಗೆ ಸೇರುತ್ತವೆ. ಕೇಂದ್ರದ ನಗರಾಭಿವೃದ್ಧಿ ಸಚಿವಾಲಯ ಈಗಾಗಲೇ ಇದಕ್ಕೆ ಹಸಿರು ನಿಶಾನೆ ತೋರಿರುವುದು ಸ್ವಾಗತಾರ್ಹ. ಈಗ ಕೇಂದ್ರ ಅರ್ಥ ಸಚಿವಾಲಯ ಹೌದು ಎನ್ನುವುದು ಮಾತ್ರ ಬಾಕಿ ಇದೆ. ಈ ಯೋಜನೆ ಕ್ಷಿಪ್ರ ಗತಿಯಲ್ಲಿ ಅನುಷ್ಠಾನಗೊಳ್ಳಲಿ, ತನ್ಮೂಲಕ ಈ ಎಲ್ಲ ಊರುಗಳಲ್ಲಿ ಪ್ರವಾಸಿಗರಿಗೆ ಪ್ರಿಯವಾಗುವ ಸವಲತ್ತುಗಳು ಸಿಗಲಿ, ನಮ್ಮ ರಾಜ್ಯದ ಹಿರಿಮೆ ಜಗತ್ತಿಗೆ ವೇದ್ಯವಾಗಲಿ ಎಂಬುದು ನಮ್ಮ ಕಳಕಳಿಯ ಬಯಕೆ.

ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ಕರ್ಣ ಕಠೋರ ಗದ್ದಲಗಳ ನಗರಗಳ ಪಟ್ಟಿ ತಯಾರಿಸಿದೆ. ಈ ಪಟ್ಟಿಯಲ್ಲಿ ನಮ್ಮ ಪ್ರೀತಿಯ ಬೆಂಗಳೂರಿಗೆ ಏಳನೆಯ ಸ್ಥಾನ ! ನಮ್ಮ ಊರಿನ ಗದ್ದಲದ ಮಟ್ಟ–65ಡೆಸಿಬಲ್. ಇದು ಜೀವಿಗಳು ತಡೆದುಕೊಳ್ಳಬಹುದಾದ ಗರಿಷ್ಠ ಗದ್ದಲಮಟ್ಟದಿಂದ ಅತ್ಯಂತ ಮೇಲ್ಮಟ್ಟದಲ್ಲಿರುವಂತದ್ದು. ಈ ಗದ್ದಲ (Noice) ಕ್ಕೆ ಕಾರಣ ಅಸಂಖ್ಯಾತ ವಾಹನಗಳು, ಅನಗತ್ಯವಾಗಿ ಹಾರನ್ ಮಾಡುವ ದುಷ್ಟ ಪ್ರವೃತ್ತಿ, ಕಟ್ಟಡ ಕಾಮಗಾರಿ, ಡೀಸೆಲ್ ಜನರೇಟರ್‌ಗಳು ಹಾಗೂ ಲೌಡ್ ಸ್ಪೀಕರ್‌ಗಳು. ಈ ಗದ್ದಲದ ಪ್ರಮಾಣ ಗರಿಷ್ಠ 50 ಡೆಸಿಬಲ್ ಹಾಗೂ ಕನಿಷ್ಠ 40 ಡೆಸಿಬಲ್ ಇರಬೇಕು. ಈ ನಿರಂತರ ಗದ್ದಲ ಪ್ರಮಾಣದ ಏರಿಕೆ ನಮ್ಮೆಲ್ಲರನ್ನು ಕಿವುಡರನ್ನಾಗಿಸುವ ದಿನ ದೂರವಿಲ್ಲ ಎಂಬುದು ಪರಿಸರ ತಜ್ಞರು ವ್ಯಕ್ತಪಡಿಸಿರುವ ಆತಂಕ. ಮಾಲಿನ್ಯ ನಿಯಂತ್ರಣ ಮಂಡಳಿ ವಿಧಿಸಿರುವ ನಿಯಮಗಳ ಪಾಲನೆ, ಅನಗತ್ಯ ಹಾರನ್ ಬಾರಿಸುವ ಚಟದ ನಿಯಂತ್ರಣ, ಸಾರ್ವಜನಿಕ ಸಮಾರಂಭ ಹಾಗೂ ಹಬ್ಬ ಹರಿದಿನಗಳಲ್ಲಿ ಲೌಡ್ ಸ್ಪೀಕರ್‌ಗಳ ಕನಿಷ್ಠ ಬಳಕೆ ಅತ್ಯಗತ್ಯ. ಇಲ್ಲದಿದ್ದರೆ ಉದ್ಯಾನ ನಗರ ಎಂದು ಹೆಸರು ಗಳಿಸಿದ್ದ ಬೆಂಗಳೂರು, ಗದ್ದಲಗಳ ನಗರ ಎಂಬ ಕುಖ್ಯಾತಿಗೆ ಒಳಪಡುವುದು ಖಚಿತ.

**ದುಷ್ಟ ಶಕ್ತಿಗಳ ವಿನಾಶ, ಶಿಷ್ಟ ಶಕ್ತಿಗಳ ವಿಜೃಂಭಣೆ–ದಸರೆಯ ಆಂತರ್ಯ. ಜಗತ್ತಿನ ಮಹಾ ತಾಯಿ ದುರ್ಗೆಯ ಪೂಜೆ ನಮ್ಮೊಳಗಿನ ರಾಕ್ಷಸೀ ಪ್ರವೃತ್ತಿಗಳ ಸಂಹಾರಕ್ಕೆ ಶುಭ ನಾಂದಿಯಾಗಲಿ, ನಾಡಿಗೆ ಒದಗಿರುವ ಬರಗಾಲದ ಆಪತ್ತನ್ನು ಪರಿಹರಿಸಲಿ, ಸಕಲರಿಗೆ ಶಾಂತಿ ನೆಮ್ಮದಿಗಳನ್ನು ಕರುಣಿಸಲಿ ಎಂಬುದು ನಮ್ಮ ಪ್ರಾರ್ಥನೆ.**

❑ ಉಷಾ ಭರತಾದ್ರಿ

ಅಂತರಾಳದಿಂದ...

# ಕಾವೇರಿಯ ಮಡಿಲಿನಲ್ಲಿ

ಹಿಂದಿನ ಸಂಚಿಕೆಯಲ್ಲಿ ಅಭಿಮತದ ಕುರಿತಾಗಿ ಬರೆದಿದ್ದೆ. ಈ ಅಕ್ಟೋಬರ್ ತಿಂಗಳಿನಿಂದ ಅಭಿಮತಕ್ಕೆ ಇಪ್ಪತ್ತೆರಡರ ಹರಯ. ಈ ಸಂತಸದ ಅಭಿಮತದ ಈ ಹುಟ್ಟು ಹಬ್ಬಕ್ಕೆ ಶುಭಾಶಯಗಳನ್ನು ಕೋರುತ್ತ ಈ ಬಾರಿಯ ಅಂತರಾಳವನ್ನು ತಮ್ಮ ಮುಂದೆ ತೆರೆದಿಡುತ್ತಿದ್ದೇನೆ.

ಕಳೆದ ಕೆಲ ವಾರಗಳಿಂದ ಕಾವೇರಿಯ ಕುರಿತಾಗಿ ಕಾವಿನ ವಾತಾವರಣ ಕರ್ನಾಟಕದಲ್ಲಿ. ಅತ್ತ ತಮಿಳುನಾಡಿನ ಜನತೆ, ಮುಖ್ಯವಾಗಿ ರೈತರು, ನೀರು ಬಿಡಿ ಎಂದು ಕರ್ನಾಟಕದತ್ತ ಮುಖ ಮಾಡಿದ್ದಾರೆ. ಮಳೆಯ ಅಭಾವದಿಂದಾಗಿ ಈ ಬಗೆಯ ಸಮಸ್ಯೆ ಉದ್ಭವವಾಗಿದೆ. ಚೆನ್ನಾಗಿ ಮಳೆಯಾಗಿ ಕೃಷ್ಣರಾಜಸಾಗರ ತುಂಬಿ ಹೋದರೆ ಈ ಬಗೆಯ ಯಾವ ಸಮಸ್ಯೆಯೂ ಇರುತ್ತಿರಲಿಲ್ಲ. ಜಲವಿವಾದಗಳು ಹುಟ್ಟಿಕೊಳ್ಳುವುದೇ ಈ ಸಂದರ್ಭದಲ್ಲಿ. ವೈಜ್ಞಾನಿಕವಾಗಿ ನದಿಯ ನೀರು (ಬಹುಶಃ ಲಕ್ಷಾಂತರ ವರುಷಗಳಿಂದ) ಮೇಲಿನಿಂದ ಕೆಳಕ್ಕೆ ಹರಿಯಬೇಕು. ನದಿಯ ಮೇಲಿನ ಭಾಗದಲ್ಲಿರುವವರು ತಮಗೆ ಬೇಕಾದ ಹಾಗೆ ನೀರನ್ನು ಬಳಸಿಕೊಳ್ಳಬಹುದು. ಇಲ್ಲಿ ನದಿಯ ನೀರನ್ನು ಯಾವ ರೀತಿಯ 'ಉಪಯೋಗ'ಗಳಿಗೆ ಬಳಸಬಹುದು ಎಂಬುದೇ ಪ್ರಮುಖವಾದ ಪ್ರಶ್ನೆಯಾಗುತ್ತದೆ. ನದಿಯ 'ಉಪಯೋಗ', ನದಿಯ ನೀರಿನ 'ಉಪಯೋಗ' ಎಂಬ ಎರಡು ಪ್ರಭೇದಗಳನ್ನು ಮಾಡಲಾಗುತ್ತದೆ. ಮೊದಲನೆಯದಾಗಿ, ನದಿಯ 'ಉಪಯೋಗ'ವೆಂಬುದು ತೀರಾ ವಿಸ್ತೃತವಾದದ್ದು. ನದಿಯನ್ನು ಒಂದು ಜನಸಮುದಾಯ ಹಲವಾರು ಬಗೆಗಳಲ್ಲಿ ಬಳಸಿಕೊಳ್ಳುತ್ತದೆ. ಒಂದು ದೃಷ್ಟಿಯಿಂದ ನೋಡಿದರೆ ನದಿಯು (ಕಾವೇರಿಯೂ ಸಹ) ಹಲವಾರು ಜನಸಮುದಾಯಗಳ ಜೀವಾಳ. ನಮಗೆಲ್ಲ ತಿಳಿದಂತೆ ಮಾನವ ಸಂಸ್ಕೃತಿಯ ಉಗಮವಾದದ್ದೇ ನದಿಯ ಇಕ್ಕೆಲಗಳಲ್ಲಿ. ನದಿಯ ಪರಿಸರ ನಮ್ಮೆಲ್ಲರ ಬದುಕಿನ ಸಾಂಸ್ಕೃತಿಕ ಅಂಗವಾಗಿ ಬೆಳೆದು ಬಂದಿರುತ್ತದೆ. ಹೀಗಾಗಿ ಕಾವೇರಿಯೆಂಬುದು ಬರೀ ನದಿಯಲ್ಲ, ಅದೊಂದು ಜೀವಂತ ಪರಿಸರದ ಪ್ರತಿಮೆ. ಕಾವೇರಿಯನ್ನು ನಾವು ತಾಯಿಯಾಗಿ, ದೇವಿಯಾಗಿ, ಇನ್ನೂ ಹಲವಾರು ರೂಪಗಳಲ್ಲಿ ಪೂಜಿಸುತ್ತೇವೆ. ಈ ಕಾರಣದಿಂದಾಗಿ ಕಾವೇರಿಯ ನದಿ ನೀರಿನ ಹಂಚಿಕೆಯ ಸಮಸ್ಯೆ ಒಂದು ಬಗೆಯಲ್ಲಿ ತೀರಾ ಜಟಿಲವಾದದ್ದು.

ಮೇಲೆ ಹೇಳಿದಂತೆ, ನದಿಯ 'ಉಪಯೋಗ'ದಿಂದ ನೀರಿನ ಪಾತಳಿ ಕಡಿಮೆಯಾಗುವುದಿಲ್ಲ. ಈ ಬಗೆಯ ನದಿಯ ಉಪಯೋಗಗಳೆಂದರೆ– ಓಡಾಟ ಹಾಗೂ ಸಾಗಾಣಿಕೆಗಳಿಗೆ, ಮೀನುಗಾರಿಕೆಗೆ, ಜಲವಿದ್ಯುತ್ ಉತ್ಪಾದನೆ, ಪ್ರವಾಸೋದ್ಯಮ ಇತ್ಯಾದಿ. ಈ ಎಲ್ಲ ಬಳಕೆಗಳಲ್ಲಿ ನದಿಯ ನೀರಿನ ಒಟ್ಟಾರೆ ಪಾತಳಿ ಕಡಿಮೆಯಾಗುವುದಿಲ್ಲ. ಆದರೆ, ನದಿಯ ನೀರನ್ನು ಕುಡಿಯಲು, ನೀರಾವರಿಗೆ ಹಾಗೂ ಈ ಬಗೆಯ ಸಮಾನಾಂತರ ಕೆಲಸಗಳಿಗೆ ಬಳಸಿಕೊಂಡರೆ, ನದಿಯ ನೀರಿನ ಪ್ರಮಾಣವು ಕಡಿಮೆಯಾಗುತ್ತದೆ. ಅದರಲ್ಲೂ ಮಳೆಯ ಮೇಲೆ ಅವಲಂಬಿತವಾದ ನದಿಗಳು ಮಳೆ ಚೆನ್ನಾಗಿ ಬಿದ್ದರೆ ಯಾವ ಬಗೆಯ ಸಮಸ್ಯೆಗಳನ್ನು ಹುಟ್ಟು ಹಾಕುವುದಿಲ್ಲ. ಮಳೆಯ ಪ್ರಮಾಣ ಕಡಿಮೆಯಾದರೆ ನದಿಯ ನೀರಿನ ಪ್ರಮಾಣವೂ ಕಡಿಮೆಯಾಗಿ ಬಿಡುತ್ತದೆ. ಕಾವೇರಿಯ ಸಮಸ್ಯೆಯೂ ಇದೇ ಬಗೆಯದ್ದು. ನೂರಾರು ವರುಷಗಳಿಂದ ನಡೆದು ಬಂದ ನೀರಾವರಿಯ ಉಪಯೋಗದ ಪರಿಯನ್ನು ಹತ್ತಾರು ವರುಷಗಳಲ್ಲಿ ಬದಲಿಸುವುದು ಅಸಾಧ್ಯವಾದ ಮಾತು. ಹಾಗಾದರೆ ಈ ಕಾವೇರಿ ಜಲವಿವಾದವನ್ನು ಬಗೆಹರಿಸುವುದಾದರೂ ಹೇಗೆ?

ನಮ್ಮ ದೇಶದ ಸಂವಿಧಾನದ ಪ್ರಕಾರ ಎಲ್ಲ ಜಲವಿವಾದಗಳನ್ನು ಟ್ರಿಬ್ಯೂನಲ್‌ಗಳ ಮೂಲಕವೇ ಬಗೆಹರಿಸಿಕೊಳ್ಳಬೇಕು. ಸರ್ವೋಚ್ಚ ನ್ಯಾಯಾಲಯವೂ ಸಹ ಈ ಜಲವಿವಾದಗಳಲ್ಲಿ ತಲೆ ಹಾಕುವಂತಿಲ್ಲ. ಈ ಟ್ರಿಬ್ಯೂನಲ್‌ಗಳಲ್ಲಿ ಜಲವಿವಾದಗಳಲ್ಲಿ ನುರಿತ ಇಂಜಿನಿಯರ್‌ಗಳು, ನೀರಾವರಿ ತಜ್ಞರು ಹಾಗೂ ಕಾನೂನು ಬಲ್ಲವರು ಇರುತ್ತಾರೆ. ಈ ಟ್ರಿಬ್ಯೂನಲ್‌ನ ನಿರ್ಣಯಗಳನ್ನು ಊರ್ಜಿತಗೊಳಿಸಲು ಸರ್ವೋಚ್ಚ ನ್ಯಾಯಾಲಯ ಆದೇಶವನ್ನು ನೀಡುತ್ತದೆ. ಈ ಕಾವೇರಿಯ ಕುರಿತಾಗಿಯೂ ಕರ್ನಾಟಕಕ್ಕೆ "ಇಷ್ಟು ನೀರು ಬಿಡಿ" ಎಂದು ನ್ಯಾಯಾಲಯ ಆದೇಶ ನೀಡಿದೆ. "ನಮ್ಮ ಬಳಿ ಇಷ್ಟೊಂದು ನೀರಿಲ್ಲ. ಇಷ್ಟೆಲ್ಲಾ ನೀರನ್ನು ನಾವು ಬಿಟ್ಟರೆ ನಂತರ ನಮ್ಮ ಗತಿ ಏನಾದೀತು" ಎಂದು ಕರ್ನಾಟಕ ಗೋಗರೆದರೂ, ಇದು ಸರ್ವೋಚ್ಚ ನ್ಯಾಯಾಲಯದ ನಿರ್ಣಯವಾದ್ದರಿಂದ ಅದನ್ನೂ ಪೂರ್ಣ ತಳ್ಳಿ ಹಾಕುವಂತಿಲ್ಲ. "ಇತ್ತ ದರಿ, ಅತ್ತ ಪುಲಿ" ಎಂಬಂತಹ ಸನ್ನಿವೇಶ. ಅತ್ತ ತಮಿಳುನಾಡಿನ ಸರಕಾರ "ಸ್ವಲ್ಪವಾದರೂ ನೀರು ಬಿಡಿ, ಇದರಿಂದಾಗಿ ನಮ್ಮ ರೈತರ ಬೆಳೆಗಳು ಉಳಿದುಕೊಳ್ಳಲು ಸಾಧ್ಯವಾಗುತ್ತದೆ" ಎಂಬೆಲ್ಲ ಬೊಬ್ಬೆ ಹಾಕುತ್ತಿದೆ.

ಒಟ್ಟಾರೆ ಹೇಳುವುದಾದರೆ, ಪೂರ್ಣ ಪ್ರಮಾಣದಲ್ಲಿ ಮಳೆಯಾಗದ ವರ್ಷಗಳಲ್ಲಿ ಈ ಬಗೆಯ ನೀರಿನ ಹಂಚಿಕೆಯ ಸಮಸ್ಯೆಗಳು ಉದ್ಭವವಾಗುತ್ತಿವೆ. ಕಾವೇರಿ ಕರ್ನಾಟಕದಲ್ಲಿ ಹುಟ್ಟಿ ಹರಿದರೂ, ಅದರ ನೀರಿನ ಬಳಕೆಯ ಮೇಲೆ ಹಲವಾರು ಬಗೆಯ ಕರಾರುಗಳನ್ನು ಆಗಿನ ಬ್ರಿಟಿಷ್ ಸರಕಾರ ಹೇರಿತ್ತು. ಕೃಷ್ಣರಾಜಸಾಗರವನ್ನು ಕಟ್ಟುವಾಗ ಆಗಿನ ಮೈಸೂರು ಹಾಗೂ ಮದ್ರಾಸು ಪ್ರಾಂತ್ಯಗಳ ನಡುವೆ ಆದ ಒಪ್ಪಂದದ ಪ್ರಕಾರ ಕರ್ನಾಟಕ ಹೆಚ್ಚು ನೀರು ಬಳಸುವಂತಿರಲಿಲ್ಲ. ಆ ಒಪ್ಪಂದ ಎಪ್ಪತ್ತರ ದಶಕದಲ್ಲಿ ಮುಕ್ತಾಯವಾದ ಮೇಲೆ ಕರ್ನಾಟಕ ತನ್ನ ಎಲ್ಲ ನೀರಾವರಿ ಯೋಜನೆಗಳಿಗೆ ಪೂರ್ಣ ಪ್ರಮಾಣದ ರೂಪರೇಷೆ ನೀಡಿ, ಅದನ್ನು ಊರ್ಜಿತಗೊಳಿಸಿತು. ಇದರಿಂದಾಗಿ ತಮಗೆ ನೀರು ಕಡಿಮೆಯಾಯಿತೆಂದು ತಮಿಳುನಾಡಿನ ರೈತ ಸಮುದಾಯ ಕೂಗಾಟ ಆರಂಭಿಸಿತು. ಇತ್ತ ಕರ್ನಾಟಕದ ರೈತರೂ ಸಹ ನೀರು ಬಿಡಬಾರದೆಂದು ಪಟ್ಟು ಹಾಕಿ ಹೋರಾಟ ಆರಂಭಿಸಿದರು. ಕಳೆದ ಮೂರು ದಶಕಗಳಿಂದ ಈ ಬಗೆಯ ಹೋರಾಟ ನಡೆದಿದೆ. ಮಳೆರಾಯನ ಆಗಮನದಿಂದ ಕೊನೆಗೆ ಈ ಹೋರಾಟ ಕಾಲಕಾಲಕ್ಕೂ ತನ್ನ ಅಂತ್ಯವನ್ನು ಕಂಡಿದೆ.

ಕಾವೇರಿಯ ಈ ಸಮಸ್ಯೆಯನ್ನು ಬಗೆಹರಿಸುವುದಾದರೂ ಹೇಗೆ? ಎಲ್ಲ ಜಲವಿವಾದಗಳ ಸಮಸ್ಯೆಗಳು ಇದೇ ಬಗೆಯದು. ಮಳೆರಾಯನ ಕೃಪೆಯಿಂದಾಗಿ ಕಾಲಕಾಲಕ್ಕೂ ಈ ಸಮಸ್ಯೆಗಳು ಹೇಗೋ ಉತ್ತರವನ್ನು ಕಂಡುಕೊಂಡಿವೆ. ಒಮ್ಮೊಮ್ಮೆ ನಮ್ಮ ನದಿಗಳಲ್ಲಿ ಮಳೆರಾಯನ ಪ್ರಕೋಪದಿಂದಾಗಿ ನೀರು ತುಂಬಿ ಹರಿದಾಗ, ನೆರೆಹಾವಳಿಗಳ ಸಮಸ್ಯೆ ಎದುರಾದಾಗ, ಈ ಹೆಚ್ಚುವರಿ ನೀರನ್ನು ಹೇಗೆ ತಡೆಗಟ್ಟುವುದು? ಒಂದು ವಿಚಾರದ ಪ್ರಕಾರ, ಈ ಬಗೆಯ ನದಿಯ ನೀರಿನ ಪಾತಳಿಯನ್ನು ಒಂದೇ ಸಮನೆ ಇರಿಸಿಕೊಳ್ಳುವ ಪ್ರಯತ್ನವನ್ನು ನದಿ ಜೋಡಣೆ ಯೋಜನೆಯಿಂದ ಮಾಡಬಹುದೆನ್ನುವುದು. ನದಿಗಳನ್ನು ಕೃತಕ ನಾಲೆಗಳಿಂದ ಒಂದೊಂದಾಗಿ ಜೋಡಿಸಿ ಮಳೆಗಾಲದ ಹೆಚ್ಚುವರಿ ನೀರನ್ನು, ನೆರೆಹಾವಳಿಗಳಿಂದ ತಪ್ಪಿಸಿ, ಉಪಯೋಗಿಸಿಕೊಳ್ಳುವ ಬೃಹತ್ ಯೋಜನೆ ಸಿದ್ಧವಾಗಿದೆ. ಇದಕ್ಕೆ ಸರ್ವೋಚ್ಚ ನ್ಯಾಯಾಲಯದ ಒಪ್ಪಿಗೆ ಹಾಗೂ ಬಲವಾದ ನಿರ್ಣಯವೂ ಇದೆ.

ಈ ಬಗೆಯ ನದಿ ಜೋಡಣೆಯಿಂದ ನಮ್ಮ ದೇಶದ ಜಲ ವಿವಾದಗಳ ಹಾಗೂ ನೀರಿನ ಬವಣೆಗಳ ಸಮಸ್ಯೆಗಳಿಗೆ ಪರಿಹಾರ ದೊರೆಯಬಹುದೇ? ಕೃತಕವಾಗಿ ನಾಲೆಗಳ ಮೂಲಕ ನದಿಗಳನ್ನು ಜೋಡಿಸುವುದರಿಂದ ಅದು ಇಡೀ ನದಿಯ ಪರಿಸರದ ಸಮತೋಲನವನ್ನು ಏರುಪೇರು ಮಾಡುತ್ತದೆಯೆಂಬುದು ಹಲವು ತಜ್ಞರ ಅಭಿಪ್ರಾಯ. ನದಿಗೆ ಅದರದ್ದೇ ಆದ ಜೀವವಿದೆ. ಅದು ಸಾಕಿ ಸಲುಹುವ ಪರಿಸರ ಹಾಗೂ ಇತರ ಪ್ರಾಣಿ ಸಂಕುಲಗಳಿವೆ. ಇವೆಲ್ಲವೂ ಈ ನದಿಯ ಲಕ್ಷಾಂತರ ವರುಷಗಳ ಪರಿಸರದ ಬೆಳವಣಿಗೆಯ ಹಾಗೂ ಸಮತೋಲನದ ಅಂಗವಾಗಿದೆ. ನದಿಗಳ ಜೋಡಣೆಯಿಂದ ಈ ಎಲ್ಲ ನದಿಯ ಪರಿಸರಗಳಲ್ಲಿ ಏರುಪೇರಾಗುವುದರಲ್ಲಿ ಯಾವ ಸಂದೇಹವೂ ಇಲ್ಲ. ಈ ಕುರಿತಾಗಿ ಇನ್ನೂ ವಿವರವಾದ ಅಧ್ಯಯನಗಳು ನಡೆಯಬೇಕಾದ ಅಗತ್ಯವಿದೆಯೆಂದು ಪರಿಸರ ತಜ್ಞರು ಹಾಗೂ ವಿಜ್ಞಾನಿಗಳು ಹೇಳುತ್ತಿದ್ದಾರೆ. ಹಿಮಾಲಯದಿಂದ ಹರಿದು ಬರುವ ನದಿಗಳಲ್ಲಿ ಹೆಚ್ಚಾಗಿ ನೀರಿನ ಪಾತಳಿಯ ಸಮಸ್ಯೆ ಉದ್ಭವಿಸುವುದಿಲ್ಲ. ಬೇಸಿಗೆಯಲ್ಲಿ ಬೇಗ ಹಿಮ ಕರಗುವುದರಿಂದ ಹಿಮಾಲಯದ ನದಿಗಳಲ್ಲಿ ನೀರಿನ ಪಾತಳಿ ಏರುತ್ತದೆ. ಆದರೆ ಇತ್ತೀಚಿನ 'ಹವಾಮಾನ ಬದಲಾವಣೆ'ಯ ವಿದ್ಯಮಾನಗಳಿಂದಾಗಿ ಹಿಮಾಲಯದ ನದಿಗಳ ತುಂಬ ಹೆಚ್ಚಿನ ಪ್ರಮಾಣದಲ್ಲಿ ನೀರು ತುಂಬಿ ಹರಿಯುತ್ತದೆ. ನದಿ ಜೋಡಣೆಯಿಂದ ಈ ಬಗೆಯ ಜಲವಿವಾದದ ಸಮಸ್ಯೆಗಳು ಬಗೆಹರಿಯದೇ ಇನ್ನೂ ದೊಡ್ಡ ಸಮಸ್ಯೆಗಳು ಎದುರಾಗುವ ಸಾಧ್ಯತೆಗಳಿವೆ. ನೀರಿನ ಎಚ್ಚರದ ಬಳಕೆಯಿಂದ ಮಾತ್ರ ಬಹುಶಃ ನಾವು ಈ ಜಲವಿವಾದಗಳ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದಾಗಿದೆ. ಕಾವೇರಿಯೂ ಇದರಿಂದ ಹೊರತಲ್ಲ.

❑ ಡಾ. ವೆಂಕಟಾಚಲ ಹೆಗಡೆ

## ಮುನ್ನೋಟ

ದೆಹಲಿಯ ಎಲ್ಲ ಕನ್ನಡದ ಕಣ್ಮಣಿಗಳಿಗೆ ದಸರಾ ಹಬ್ಬದ ಶುಭಾಶಯವನ್ನು ಕೋರುತ್ತ ಅಭಿಮತ 23ನೇ ವಸಂತಕ್ಕೆ ಕಾಲಿಡುತ್ತಿರುವ ಸಂತಸವನ್ನು ಈ ಸಂದರ್ಭದಲ್ಲಿ ತಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇನೆ. ದೆಹಲಿ ಕರ್ನಾಟಕ ಸಂಘದ ಕಾರ್ಯಕ್ರಮಗಳಿಗೆ ಇನ್ನು ವಸಂತ ಋತು. ಒಂದರ ನಂತರ ಇನ್ನೊಂದರಂತೆ ಇನ್ನು ಕಾರ್ಯಕ್ರಮಗಳ ಸುಗ್ಗಿ.

ಕರ್ನಾಟಕ ಚಲನಚಿತ್ರ ಅಕಾಡೆಮಿಯ ಅಧ್ಯಕ್ಷೆ ಶ್ರೀಮತಿ ತಾರಾ ಅವರೊಂದಿಗೆ "ಬೆಳ್ಳಿಚುಕ್ಕಿ" ಎಂಬ ವಿಶೇಷ ಕಾರ್ಯಕ್ರಮಕ್ಕೆ ಮಾತುಕತೆ ನಡೆಯುತ್ತಿದೆ. ಈ ಕಾರ್ಯಕ್ರಮಕ್ಕೆ ಖ್ಯಾತ ಚಲನಚಿತ್ರ ನಟ ಶಿವರಾಜ್ ಕುಮಾರ್ ಅವರು ಬರುವ ಸಾಧ್ಯತೆ ಇದೆ. ಈ ಬಾರಿಯ ಕರ್ನಾಟಕ ರಾಜ್ಯೋತ್ಸವವನ್ನು ಕಳೆದ ವರ್ಷದಂತೆ ಈ ಬಾರಿಯೂ ಸಹ ಸ್ಥಳೀಯರಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿ ರಾಜ್ಯೋತ್ಸವವನ್ನು ಅದ್ದೂರಿಯಿಂದ ಆಚರಿಸಲು ಸಿದ್ಧತೆಗಳು ನಡೆಯುತ್ತಿವೆ. ದಿವಂಗತ ಕೆ.ಆರ್. ನಾಗರಾಜ ಮೆಮೋರಿಯಲ್ ವಿದ್ಯಾರ್ಥಿ ವೇತನ ವಿತರಣೆ, ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪ್ರದಾನ, ಸಾಂಸ್ಕೃತಿಕ ಕಾರ್ಯಕ್ರಮಗಳು ರಾಜ್ಯೋತ್ಸವ ಆಚರಣೆಯ ಸಂದರ್ಭದಲ್ಲಿ ನಡೆಯಲಿವೆ. ಯಮುನೆಯ ತಡಿಯಲ್ಲಿ ಕನ್ನಡ ನುಡಿ ಕಾರ್ಯಕ್ರಮದ ಮೂರನೇ ಕಂತಿನಲ್ಲಿ ಶ್ರೀ ಮೃತ್ಯುಂಜಯ ದೊಡ್ಡವಾಡ ಮತ್ತು ತಂಡದವರಿಂದ ಸುಗಮ ಸಂಗೀತ ಹಾಗೂ ಏಕಾಂಕ ನಾಟಕ ಸ್ಪರ್ಧೆಯು ಅಕ್ಟೋಬರ್ ತಿಂಗಳಿನಲ್ಲಿ ನಡೆಯಲಿದೆ. ಈ ಎಲ್ಲಾ ಕಾರ್ಯಕ್ರಮಗಳಿಗೆ ದಯವಿಟ್ಟು ಕುಟುಂಬ ಸಮೇತ ಬಂದು ಪಾಲ್ಗೊಳ್ಳಿ. ಹಾಗೆಯೇ ದಸರಾ ಹಾಗೂ ಬೆಳಕಿನ ಹಬ್ಬ ದೀಪಾವಳಿಯ ಶುಭಾಶಯಗಳು.

❑ ಸಿ ಎಂ ನಾಗರಾಜ

---

### ದೆಹಲಿ ಕರ್ನಾಟಕ ಸಂಘ
### ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

ಸಹಯೋಗದೊಂದಿಗೆ
"ಯಮುನೆಯ ತಡಿಯಲ್ಲಿ ಕನ್ನಡ ನುಡಿ-ಸಾಂಸ್ಕೃತಿಕ ಮಾಲಿಕೆ"

**ಶ್ರೀ ಸಾಣೇಹಳ್ಳಿ ಶಿವಕುಮಾರ್ ಕಲಾತಂಡ**
**ಸಾಣೇಹಳ್ಳಿ, ಚಿತ್ರದುರ್ಗ ಇವರಿಂದ**

## ನಾಟಕ : ಉರಿಲಿಂಗ ಪೆದ್ದಿ

ರಚನೆ : ಡಾ. ಮಹದೇವ್ ಬಣಕಾರ್
ನಿರ್ದೇಶನ : ಮಹದೇವ ಹಡಪದ್

**ನವೆಂಬರ್ 10, 2012 ಶನಿವಾರ**
ಸಮಯ : ಸಂಜೆ 5.30ಗಂಟೆಗೆ
ಸ್ಥಳ : ಸಂಘದ ಸಭಾಂಗಣ

**ತಮಗೆಲ್ಲರಿಗೂ ಆದರದ ಸ್ವಾಗತ**

ಡಾ. ವೆಂಕಟಾಚಲ ಹೆಗಡೆ
ಅಧ್ಯಕ್ಷರು

ಸಿ.ಎಂ. ನಾಗರಾಜ
ಪ್ರಧಾನ ಕಾರ್ಯದರ್ಶಿ

---

## ಉಚಿತ ವೈದ್ಯಕೀಯ ತಪಾಸಣೆ

ಅಕ್ಟೋಬರ್ 28ರ ಭಾನುವಾರದಂದು ಡಾ. ಭೀಮಭಟ್ ಅವರಿಂದ ಉಚಿತ ವೈದ್ಯಕೀಯ ತಪಾಸಣೆ ನಡೆಯಲಿದೆ. ದೆಹಲಿ ಕನ್ನಡಿಗರು ಈ ವೈದ್ಯಕೀಯ ಸೇವೆಯನ್ನು ಸದುಪಯೋಗಪಡಿಸಿ ಕೊಳ್ಳಬೇಕಾಗಿ ವಿನಂತಿ.

---

### ದೆಹಲಿ ಕರ್ನಾಟಕ ಸಂಘ

**ದಿ || ಜ್ಯೋತ್ಸ್ನಾ ರಾವ್ ಅವರಿಗೆ ಅರ್ಪಿಸುವ**
## ಏಕಾಂಕ ನಾಟಕ ಸ್ಪರ್ಧೆ-2012

ಸ್ಥಳ : ಸಂಘದ ಸಭಾಂಗಣ

**12, ಅಕ್ಟೋಬರ್ 2012 ಶುಕ್ರವಾರ**
ಸಮಯ : ಸಂಜೆ 5.30 ರಿಂದ 6.30

**ನಾಟಕ : ಅತ್ತೆಗೆ ಲತ್ತೆ**
ರಚನೆ : ಗೌರೀಶ್ ಕಾಯ್ಕಿಣಿ
ನಿರ್ದೇಶನ : ಎಸ್.ಸಿ. ಹೇಮಲತ
ಪ್ರಸ್ತುತಪಡಿಸುವವರು : ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿ

ಸಮಯ : ಸಂಜೆ 6.45 ರಿಂದ 7.45

**ನಾಟಕ : ಮದುವೆ . . . ಅಯ್ಯೋ . . . ಮೂಕಿಯ ಮದುವೆ**
ರಚನೆ ಮತ್ತು ನಿರ್ದೇಶನ : ಸವಿತಾ ಇನಾಂದಾರ್
ಪ್ರಸ್ತುತಪಡಿಸುವವರು : ಜನಕಪುರಿ ಮಹಿಳಾ ಮಂಡಳಿ

**13, ಅಕ್ಟೋಬರ್ 2012 ಶನಿವಾರ**
ಸಮಯ : ಸಂಜೆ 7.00 ರಿಂದ 8.00

**ನಾಟಕ : ಕನಸು**
ರಚನೆ : ನಾಗರಾಜ ಕೋಟೆ
ಪರಿಕಲ್ಪನೆ ಮತ್ತು ನಿರ್ದೇಶನ : ಟಿ.ಎಂ. ಮೈಲಾರಪ್ಪ
ಪ್ರಸ್ತುತಪಡಿಸುವವರು : ಶ್ರೀಗಣೇಶ ಮಿತ್ರ ಮಂಡಳಿ

**14, ಅಕ್ಟೋಬರ್ 2012 ರವಿವಾರ**
ಸಮಯ : ಸಂಜೆ 5.00 ರಿಂದ 6.00

**ನಾಟಕ : ಮದುವೆ ಮಾರ್ಕೆಟ್**
ರಚನೆ : ಎಂ.ಎಸ್. ನರಸಿಂಹ ಮೂರ್ತಿ
ನಿರ್ದೇಶನ : ಟಿ.ಎಂ. ಮೈಲಾರಪ್ಪ
ಪ್ರಸ್ತುತಪಡಿಸುವವರು : ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್

ಸಮಯ : ಸಂಜೆ 6.15 ರಿಂದ 7.15

**ನಾಟಕ : ಶಾಂತಿ ಪಾರ್ಕ್**
ರಚನೆ : ನಾಗರಾಜ ಕೋಟೆ
ನಿರ್ದೇಶನ : ಟಿ.ಎಸ್. ರಮೇಶ್
ಪ್ರಸ್ತುತಪಡಿಸುವವರು : ಕಾವೇರಿ ಗೆಳೆಯರ ಬಳಗ


**ತಮಗೆಲ್ಲರಿಗೂ ಆದರದ ಸ್ವಾಗತ**

ಡಾ. ವೆಂಕಟಾಚಲ ಹೆಗಡೆ
ಅಧ್ಯಕ್ಷರು

ಸಿ.ಎಂ. ನಾಗರಾಜ
ಪ್ರಧಾನ ಕಾರ್ಯದರ್ಶಿ

# 23ನೇ ವರ್ಷಕ್ಕೆ ಕಾಲಿಟ್ಟ ಪ್ರಬುದ್ಧೆ 'ಅಭಿಮತ'

1990, ಅಕ್ಟೋಬರ್ 2ರಂದು ಆರಂಭಗೊಂಡ ನಿಮ್ಮೆಲ್ಲರ ನೆಚ್ಚಿನ ಅಭಿಮತ ಇದೀಗ 23ನೇ ವರ್ಷಕ್ಕೆ ಕಾಲಿಟ್ಟಿದೆ. ಪುಟ್ಟ ಪುಟ್ಟ ಹೆಜ್ಜೆಗಳನ್ನಿಡುತ್ತಾ, ಬೆಳೆಯುತ್ತಾ, ಕಪ್ಪು ಬಿಳುಪಿನ ಸುಂದರಿ ಇದೀಗ ವರ್ಣರಂಜಿತಳಾಗಿ ಕಂಗೊಳಿಸುತ್ತಿದ್ದಾಳೆ. ದೆಹಲಿ ಕನ್ನಡಿಗರ ಮುದ್ದಿನ ಕಣ್ಮಣಿಯಾಗಿ, ಹೊರನಾಡ ಕನ್ನಡಿಗರ ಹೆಮ್ಮೆಯ ಪ್ರತೀಕವಾಗಿ, ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡ ನಾಡು, ನುಡಿಯ ಅಭಿವ್ಯಕ್ತಿಯಾಗಿ ಹೊರ ಹೊಮ್ಮಿರುವ 'ಅಭಿಮತ'ಕ್ಕಾಗಿ ಪ್ರೀತಿ, ಅಭಿಮಾನಗಳನ್ನು ತೋರಿದ ಎಲ್ಲರಿಗೂ ಹೃದಯಪೂರ್ವಕ ವಂದನೆಗಳು. ತಮ್ಮೆಲ್ಲರ ಹರಕೆ, ಹಾರೈಕೆ ಸದಾ ಹೀಗೇ ಇರಲಿ ಎಂದು ಆಶಿಸುತ್ತೇವೆ. ಅಭಿಮತಕ್ಕೆ ಸದಾ ಸಹಮತ ನೀಡಿ ಪ್ರೋತ್ಸಾಹ ನೀಡುತ್ತಿರುವ ತಮಗೆಲ್ಲಾ ಇದೋ ನಮ್ಮ ನಮ್ರ ನಮನ.



## "ಅಭಿಮತ" ಬಿಡುಗಡೆ ಸಮಾರಂಭ

ಅಕ್ಟೋಬರ್ 2, ದೇಶಾದ್ಯಂತ ಮಹಾತ್ಮಾ ಗಾಂಧೀಜಿಯವರ ಜನ್ಮದಿನಾಚರಣೆ ಆಚರಿಸುತ್ತಿದ್ದ ಶುಭಗಳಿಗೆಯಲ್ಲೇ, ದೆಹಲಿ ಕರ್ನಾಟಕ ಸಂಘ ತನ್ನ ಇತಿಹಾಸದಲ್ಲೇ ಪ್ರಪ್ರಥಮಬಾರಿಗೆ ಸದಸ್ಯರ ಬಹು ದಿನಗಳ ಕನಸಾಗಿದ್ದ ಪತ್ರಿಕೆಯೊಂದನ್ನು ಹೊರತಂದು ಮಹತ್ತರ ಸಾಧನೆಯನ್ನು ಸಾಧಿಸಿತು. ಸದಸ್ಯರೆಲ್ಲರ ಸಹಕಾರದೊಂದಿಗೆ 'ಅಭಿಮತ' ಎಂಬ ಪತ್ರಿಕೆಯ ಸಂಚಿಕೆಯನ್ನು, ದೆಹಲಿ ಕರ್ನಾಟಕ ಭವನದಲ್ಲಿ ಏರ್ಪಡಿಸಲಾಗಿದ್ದ ಆಕರ್ಷಕ ನೃತ್ಯಕಲಾ ಕಾರ್ಯಕ್ರಮದ ಸಂದರ್ಭದಲ್ಲಿ ಬಿಡುಗಡೆ ಮಾಡಲಾಯಿತು.

ಕರ್ನಾಟಕದಿಂದ ಭಾರತದ ವಿದೇಶಾಂಗ ಸೇವೆಯಲ್ಲಿ (ಐಎಫ್‌ಎಸ್) ತೊಡಗಿದ ಪ್ರಥಮ ಹೆಮ್ಮೆಯ ಮಹಿಳೆ ಶ್ರೀಮತಿ ಮುತ್ತಮ್ಮ ಅಂದಿನ ಮುಖ್ಯ ಅತಿಥಿಯಾಗಿ ಈ ಪತ್ರಿಕೆಯನ್ನು ಬಿಡುಗಡೆ ಮಾಡಿದರು. ನಲ್ವತ್ತೊಂದು ವರ್ಷ ಕರ್ನಾಟಕದಿಂದ ಹೊರಗುಳಿದರೂ ಸಹ ಶ್ರೀಮತಿ ಮುತ್ತಮ್ಮ, ಮುದ್ದಾದ ಕನ್ನಡದಲ್ಲಿ ಚಾಚೂ ತೊದಲದೆ 'ಅಭಿಮತ' ಪತ್ರಿಕೆಗೆ ಶುಭ ಹಾರೈಸಿದರು. ದೇಶದ ರಾಜಧಾನಿಯಲ್ಲಿನ ಕನ್ನಡಿಗರು ತಮ್ಮಲ್ಲಿರುವ ಸಾಹಿತ್ಯಕ ಪ್ರತಿಭೆಯನ್ನು ಪ್ರಚುರಪಡಿಸಲು 'ಅಭಿಮತ' ಪತ್ರಿಕೆ ಒಂದು ಮಾಧ್ಯಮವಾಗಬೇಕೆಂದು ಶ್ರೀಮತಿ ಮುತ್ತಮ್ಮ ಹೇಳಿದರು.

'ಓಂ'ಕಾರದಿಂದ ಆರಂಭಿಸಿ ತಮ್ಮ ಮೊದಲ ಕನ್ನಡಾಕ್ಷರಾಭ್ಯಾಸದ ಇತಿಹಾಸವನ್ನು ನೆನೆಸಿಕೊಂಡ ಮುತ್ತಮ್ಮ, ಅದನ್ನು ಇದುವರೆಗೂ ತಾವು ಉಳಿಸಿಕೊಂಡು ಬಂದ ಬಗೆಯನ್ನು ನೆನಸಿಕೊಂಡರು. ಇದೇ ತರಹ ಉಳಿದ ಕನ್ನಡಿಗರೂ ಸಹ ತಮ್ಮ ಮಾತೃಭಾಷೆಯನ್ನು ಉಳಿಸಿಬೆಳೆಸಿ ಮುನ್ನಡೆಸಬೇಕೆಂದು ಅವರು ಕೋರಿದರು.

ಸಭೆಯಲ್ಲಿ ಹಾಜರಿದ್ದ ಪ್ರಧಾನಮಂತ್ರಿಗಳ ಪತ್ರಿಕಾ ಕಾರ್ಯದರ್ಶಿ ಶ್ರೀ ರಾಮಮೋಹನ ರಾವ್ ಅವರು ಪತ್ರಿಕೆಯ ಪ್ರತಿಯನ್ನು ಶ್ರೀಮತಿ ಮುತ್ತಮ್ಮನವರಿಗೆ ನೀಡಿ ಬಿಡುಗಡೆ ಮಾಡುವಂತೆ ಕೋರಿದರು.

ಸಂಘದ ಅಧ್ಯಕ್ಷ ಶ್ರೀ ಎಸ್.ಪಿ. ಭಟ್ಟ ಅವರು ಸರ್ವರಿಗೂ ಸ್ವಾಗತ ಕೋರಿ, ಸಂಘದ ಸದಸ್ಯರೆಲ್ಲರ ಬಹುದಿನಗಳ ಆಸೆ ಪೂರ್ಣಗೊಂಡು, ಸಂಘದ ಇತಿಹಾಸದಲ್ಲಿ ಇದೊಂದು 'ಮೈಲಿಗಲ್ಲೆಂದು' ವರ್ಣಿಸಿದರು. ಪತ್ರಿಕೆಯ ತರುಣ ಸಂಪಾದಕ ಶ್ರೀ ವೆಂಕಟಾಚಲ ಹೆಗಡೆಯವರನ್ನು ಸಭೆಗೆ ಪರಿಚಯಿಸಿದ ಶ್ರೀ ಭಟ್ಟ, ಈ ತರುಣ ಸಂಪಾದಕರಿಗೆ ಸಂಘದ ಸದಸ್ಯರೆಲ್ಲ ಹಾರೈಸಿ, ಪತ್ರಿಕೆಗಾಗಿ ಲೇಖನ ಬರಹಗಳನ್ನು ಬರೆಯುವ ಅವರ ಕೈ ಬಲಪಡಿಸಬೇಕೆಂದೂ ಸಹ ಹೇಳಿದರು. ಪತ್ರಿಕೆ ಆರಂಭಿಸುವ ವಿಷಯದಲ್ಲಿ ಉಂಟಾದ ತೊಡಕು-ತೊಂದರೆಗಳ ಬಗ್ಗೆ ವರ್ಣಿಸಿದ ಶ್ರೀ ಭಟ್ಟ, ಅದನ್ನು ಮುಂದುವರಿಸಿಕೊಂಡು ಹೋಗಲು ಸದಸ್ಯರ ಸಹಕಾರ ಕೋರಿದರು.

ಪ್ರಸಿದ್ಧ ನೃತ್ಯಗಾರ್ತಿ ಶ್ರೀಮತಿ ಲೀಲಾ ಸ್ಯಾಮ್ಸನ್, ಹಾಗೂ ಇತರ ಪುಟ್ಟ ನೃತ್ಯಕಲಾವಿದರಿಗೆ ಶ್ರೀಮತಿ ಮುತ್ತಮ್ಮ ಕಿರುಗಾಣಿಕೆ ನೀಡಿ ಸನ್ಮಾನಿಸಿದರು. ಶ್ರೀ ಹಿಮಕರ ಅವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ವರದಿ: ನರಸಿಂಹ ಹೆಗಡೆ



**ನಾಟಕ ಪ್ರದರ್ಶನ**

ಸ್ಪಂದನ ತಂಡ, ಬೆಂಗಳೂರು ಅರ್ಪಿಸುವ

ಡಾ. ಚಂದ್ರಶೇಖರ ಕಂಬಾರ ಅವರ

**"ಕರಿಮಾಯಿ"**

ರಂಗರೂಪ : ಬಿ. ಜಯಶ್ರೀ / ವಿ.ಆರ್. ಪ್ರತಿಭಾ

ಸಂಗೀತ : ಡಾ. ಚಂದ್ರಶೇಖರ ಕಂಬಾರ

ನಿರ್ದೇಶನ : ಬಿ. ಜಯಶ್ರೀ

**ಅಕ್ಟೋಬರ್ 16, ಮಂಗಳವಾರ**

**ಸಮಯ : ಸಂಜೆ 6.30ಕ್ಕೆ**

**ಸ್ಥಳ : ಶ್ರೀರಾಮ ಸೆಂಟರ್, ನವದೆಹಲಿ**

**ಪ್ರವೇಶ ಉಚಿತ**

# ಮನಸೂರೆಗೊಂಡ ಡಾ|| ವೀರೇಶ್ ಬಳ್ಳಾರಿ ಅವರ ಜಾನಪದ ಸಂಗೀತ





ಯಮುನೆಯ ತಡಿಯಲ್ಲಿ ಕನ್ನಡ ನುಡಿ–ಸಾಂಸ್ಕೃತಿಕ ಮಾಲಿಕೆಯ ಎರಡನೆಯ ಕಾರ್ಯಕ್ರಮ ಸೆಪ್ಟೆಂಬರ್ 8ರಂದು ಸಂಘದ ಸಭಾಂಗಣದಲ್ಲಿ ನಡೆಯಿತು. ಡಾ. ವೀರೇಶ್ ಬಳ್ಳಾರಿ ಮತ್ತು ತಂಡದವರು ಜಾನಪದ ಸಂಗೀತದ ಸೊಗಡನ್ನು ದೆಹಲಿ ಕನ್ನಡಿಗರಿಗೆ ಉಣ ಬಡಿಸಿದರು. ಕಾರ್ಯಕ್ರಮದ ಅತಿಥಿಗಳಾಗಿ ದೆಹಲಿಯ ಕರ್ನಾಟಕ ಬ್ಯಾಂಕಿನ ಉಪ ಮಹಾ ಪ್ರಬಂಧಕ ವಿಜಯಶಂಕರ ರೈ ಹಾಗೂ ಬೆಂಗಳೂರಿನ ಮಲ್ಲೇಶ್ವರಂನ ಅಸಿಸ್ಟೆಂಟ್ ಕಮಿಷನರ್ ಆಫ್ ಪೋಲಿಸ್ ಎಸ್.ಎನ್. ಗಂಗಾಧರ್ ಅವರು ಪಾಲ್ಗೊಂಡಿದ್ದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಗಿನ ಆಯುಕ್ತರಾಗಿದ್ದ ಶ್ರೀ ಮನು ಬಳಿಗಾರ್ ಅವರು ಯಮುನೆಯ ತಡಿಯಲ್ಲಿ ಕನ್ನಡ ನುಡಿ ಸಾಂಸ್ಕೃತಿಕ ಮಾಲಿಕೆಗಾಗಿ ಕಾರ್ಯಕ್ರಮಗಳನ್ನು ಪ್ರಾಯೋಜಿಸಿದ್ದಕ್ಕಾಗಿ ಅವರಿಗೆ ಧನ್ಯವಾದಗಳನ್ನು ಹೇಳುತ್ತಾ, ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಆತ್ಮೀಯವಾಗಿ ಸ್ವಾಗತಿಸಿದರು. ಉಪ ಮಹಾ ಪ್ರಬಂಧಕರಾದ ಶ್ರೀ ವಿಜಯಶಂಕರ್ ರೈ ಅವರು ಮಾತನಾಡುತ್ತ "ನಾವೆಲ್ಲ ಹೊರನಾಡ ಕನ್ನಡಿಗರು ನಾಡಿನಿಂದ ಎಷ್ಟೇ ದೂರವಿದ್ದರೂ ಕನ್ನಡ ಪ್ರೇಮವನ್ನು ಮರೆಯಲಾಗದು. ಅದನ್ನು ಉಳಿಸಿ, ಬೆಳೆಸುವ ನಿಟ್ಟಿನಲ್ಲಿ ನಾವೆಲ್ಲರೂ ಒಂದಾಗಬೇಕು. ಗ್ರಾಮೀಣ ಪ್ರದೇಶದ ಜನರ ಮನರಂಜನೆಗಾಗಿ ಹುಟ್ಟಿದ ಜಾನಪದ ಸಂಗೀತ ಎಂದೆಂದಿಗೂ ಜನಮನದಲ್ಲಿ ನಿರಂತರವಾಗಿ ಬೇರೂರಿದೆ. ದಕ್ಷಿಣ ಕನ್ನಡದ ವಿಶ್ವ ಖ್ಯಾತ ಕಲೆ ಯಕ್ಷಗಾನ ಕೂಡಾ ಜನಪದ ಕಲೆಯೇ. ಈ ಕಲೆಗಳು ನಶಿಸದಂತೆ ಕಾಪಾಡುವ ಅವಶ್ಯಕತೆ ಇದೆ" ಎಂಬುದಾಗಿ ಹೇಳಿದರು. ದೆಹಲಿಯಲ್ಲಿ ಕುಳಿತು ಜಾನಪದ ಸಂಗೀತವನ್ನು ಕೇಳುವ ಸುಯೋಗ ದೊರೆತದ್ದು ತಮಗೆ ಅತೀವ ಸಂತಸವನ್ನುಂಟು ಮಾಡಿದೆ ಎಂದರಲ್ಲದೇ ಕಾರ್ಯಕ್ರಮದ ಕೊನೆಯವರೆಗೂ ಕುಳಿತು ವೀರೇಶ್ ಬಳ್ಳಾರಿ ಅವರ ಜಾನಪದ ಸಂಗೀತದ ಸುಧೆಯನ್ನು ಆಸ್ವಾದಿಸಿದರು.

ಸಂಘಕ್ಕೆ ಅನಿರೀಕ್ಷಿತ ಭೇಟಿ ಇತ್ತ ಎಸಿಪಿ ಎಸ್.ಎನ್. ಗಂಗಾಧರ್ ಅವರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದಕ್ಕಾಗಿ ಸಂತಸ ವ್ಯಕ್ತ ಪಡಿಸಿದರು. ದಕ್ಷ ಪೋಲಿಸ್ ಅಧಿಕಾರಿ ಎಂದು ರಾಷ್ಟ್ರಪ್ರಶಸ್ತಿ ಪಡೆದ ಗಂಗಾಧರ್ ಅವರು ತಮ್ಮ ಬಿಡುವಿಲ್ಲದ ವೃತ್ತಿಯ ನಡುವೆಯೂ ಜಾನಪದ ಸಂಗೀತದ ಒಲವು ಉಳ್ಳವರು. ಪ್ರತಿಯೊಬ್ಬರೂ ತಮ್ಮ ತಮ್ಮ ವೃತ್ತಿಯ ಜೊತೆಗೆ ಕಲಾಭಿಮಾನಿಗಳೂ ಆಗಿರಬೇಕು ಎಂದ ಅವರು ತಮ್ಮ ಪೋಲಿಸ್ ಜೀವನದ ಅನುಭವವನ್ನು ಹಂಚಿಕೊಂಡರು.

ಸಂಘದ ಕಾರ್ಯದರ್ಶಿ ಸಿ.ಎಂ. ನಾಗರಾಜ ವಂದಿಸಿದರು. ಖಜಾಂಚಿ ಕೆ.ಆರ್. ರಾಮಮೂರ್ತಿ ಕಾರ್ಯಕ್ರಮವನ್ನು ನಿರ್ವಹಣೆ ಮಾಡಿದರು.

ಜಾನಪದ ಸಂಗೀತ, ಸುಗಮ ಸಂಗೀತ, ರಂಗ ಗೀತೆಗಳ ಗಾಯನದಲ್ಲಿ ಖ್ಯಾತರಾದ ವೀರೇಶ್ ಬಳ್ಳಾರಿ ಅವರು ಹಲವಾರು ಜಾನಪದ ಸಂಗೀತದ ಧ್ವನಿ ಸುರುಳಿಗಳನ್ನು ಹೊರ ತಂದಿದ್ದಾರೆ ಹಾಗೂ ಕೃತಿಗಳನ್ನು ರಚಿಸಿದ್ದಾರೆ. ಸಂಗೀತ ಸಾಧನೆಗಾಗಿ ಹಲವಾರು ಪ್ರಶಸ್ತಿ ಪುರಸ್ಕಾರಗಳನ್ನು ಪಡೆದಿರುವ ವೀರೇಶ್ ಜಾನಪದ ಸಂಗೀತ ಕ್ಷೇತ್ರಕ್ಕೆ ಉತ್ತಮ ಕೊಡುಗೆಯನ್ನು ನೀಡಿದ್ದಾರೆ.

ಡಾ. ವೀರೇಶ್ ಬಳ್ಳಾರಿ, ವಸಂತಲಕ್ಷ್ಮೀ ಶ್ರೀಧರ್, ಜಯಂತಿ ಶ್ರೀನಿವಾಸ್ ಪಿ.ಎ. ಮತ್ತು ತಂಡದವರ ಸುಶ್ರಾವ್ಯವಾದ ಜಾನಪದ ಸಂಗೀತದ ರಸಾನುಭವ ದೆಹಲಿ ಕನ್ನಡಿಗರ ಪ್ರಶಂಸೆಗೆ ಪಾತ್ರವಾಯಿತು.

❑ ಉಷಾ ಭರತಾದ್ರಿ



ದೆಹಲಿ ಪೋಲೀಸ್ ಸೇವೆಯಿಂದ ನಿವೃತ್ತರಾದ ಶ್ರೀ ಮಹಂತಪ್ಪ ಹಾಗೂ ಶ್ರೀ ಅಪ್ಪಾಸಾಹೇಬ್ ಅವರನ್ನು ದೆಹಲಿ ಪೋಲೀಸ್ ಕನ್ನಡಿಗರ ಕಲ್ಯಾಣ ಸಮಿತಿಯಿಂದ ಅಭಿನಂದಿಸಿ ಬೀಳ್ಕೊಡಲಾಯಿತು.

## ದೆಹಲಿ ಕರ್ನಾಟಕ ಸಂಘ
## ವಿದ್ಯಾರ್ಥಿ ವೇತನ 2012–13


2012–13ನೇ ಸಾಲಿಗಾಗಿ ನೀಡುವ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿಗಳನ್ನು ಕರೆಯಲಾಗಿದೆ. ಸಂಘದ ಸದಸ್ಯರು ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಅರ್ಜಿಯನ್ನು ಸಂಘದ ಕಾರ್ಯಾಲಯದಿಂದ ಪಡೆಯಬಹುದು. ಭರ್ತಿ ಮಾಡಿದ ಅರ್ಜಿಯನ್ನು ದಿನಾಂಕ 15.11.2012ರೊಳಗಾಗಿ ಸಂಘದ ಕಾರ್ಯಾಲಯಕ್ಕೆ ತಲುಪಿಸಬೇಕು. ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

❑ ಪ್ರಧಾನ ಕಾರ್ಯದರ್ಶಿ

# ಕಿರು ತೊರೆಯ ನೀರು ಮತ್ತು ಬಂಡೆಗಳು

*ಪಶ್ಚಿಮ ಘಟ್ಟ ಪ್ರದೇಶಕ್ಕೆ ಪಾರಂಪರಿಕ ತಾಣದ ಮಾನ್ಯತೆ ನೀಡಬೇಕೆಂದು ಕಳೆದ 6 ವರ್ಷಗಳಿಂದ ಕೇಂದ್ರ ಸರ್ಕಾರ ನಡೆಸಿದ ಪ್ರಯತ್ನಕ್ಕೆ ಈ ಸಲ ಯಶಸ್ಸು ಲಭಿಸಿತು. ವಿಶ್ವಸಂಸ್ಥೆಯ ಯುನೆಸ್ಕೊ ಸಂಸ್ಥೆ ಭಾರತದ ಅತ್ಯಂತ ಪರಿಸರ ಸೂಕ್ಷ್ಮ ಪ್ರದೇಶವಾದ ಸಹ್ಯಾದ್ರಿ ಪರ್ವತ ಶ್ರೇಣಿಯ ಒಟ್ಟು 39 ಸ್ಥಳಗಳನ್ನು ವಿಶ್ವ ಪಾರಂಪರಿಕ ತಾಣದ ಪಟ್ಟಕ್ಕೆ ಏರಿಸಿದ ತಕ್ಷಣ ಕರ್ನಾಟಕ ಸರ್ಕಾರದಲ್ಲೇ ವಾದ ವಿವಾದಗಳಾಗುತ್ತಿದ್ದು ನಮ್ಮ ಸರ್ಕಾರ ಯುನೆಸ್ಕೋ ಮಾನ್ಯತೆಯನ್ನು ಒಕ್ಕೊರಲಿನಿಂದ ತಿರಸ್ಕರಿಸಿದ್ದು ಒಂದು ದೊಡ್ಡ ದುರಂತ. ಸರ್ಕಾರ ಕಾಡುಗಳನ್ನು ಸಂರಕ್ಷಿಸಲು ಏನೇ ನಿಯಮಗಳನ್ನು ಮಾಡಿದರೂ ಶೇಕಡ 65% ಇರಬೇಕಿದ್ದ ಅರಣ್ಯ ಸಂಪತ್ತು ಈಗ ಕೇವಲ ಶೇಕಡಾ 10% ಉಳಿದಿದೆ. ಪ್ರಾಯಶಃ ದಟ್ಟ ಕಾಡು, ಸುರಿಯುವ ಮಳೆ, ಸಸ್ಯ ಸಂಕುಲ, ಜೀವ ವೈವಿಧ್ಯ , ಕ್ರಿಮಿ ಕೀಟಗಳ ಬಗೆಗೆ ಅಪಾರ ಪ್ರೀತಿ ಮತ್ತು ಅಂತಃಕರಣವಿದ್ದವರಲ್ಲಿ ಮಾತ್ರ ಅರಣ್ಯ ಸಂಪತ್ತು ಕಟುಕರ ಕೊಡಲಿ ಏಟಿನಿಂದ ಬಚಾವಾಗುತ್ತದೆ. ಕಾಡನ್ನು ಸರಕಿನಂತೆ ಕಾಣುವ ನೋಟ ಬದಲಾಗಿ ಜೀವನದ ಭಾಗವಾಗಿ ಗ್ರಹಿಸುವಂತೆ ಆಗಬೇಕು. ಈ ಹಿನ್ನೆಲೆಯಲ್ಲಿ ಪಶ್ಚಿಮ ಘಟ್ಟದ ತಪ್ಪಲಿನಲ್ಲಿ ಹುಟ್ಟಿ, ಜಿಗಣೆ, ಹಾವು, ಕ್ರಿಮಿ–ಕೀಟಗಳೊಂದಿಗೆಯೇ ಬದುಕಿನ ಸಂವೇದನೆಗಳನ್ನು ವಿಸ್ತರಿಸಿಕೊಂಡ ಸೃಜನಶೀಲ ಬರಹಗಾರ ಬಿಳಿಮಲೆ ಅವರ ಅನುಭವವನ್ನು ನಿಮ್ಮೊಂದಿಗೆ ಹಂಚಿಕೊಳ್ಳಬಯಸುತ್ತೇವೆ.*

ಪಶ್ಚಿಮ ಘಟ್ಟಗಳ ಒಂದು ಭಾಗವೇ ಬಂಟಮಲೆ. ಈ ಹೆಸರನ್ನು ಯಾರು ಇಟ್ಟರೋ ತಿಳಿಯದು. ಕಾಡುಗಳಲ್ಲಿ ಅತಿ ನಿಬಿಡವಾದ ಮತ್ತು ದೊಡ್ಡದಾದ ಕಾಡು ಇದು ಎಂದು ಭಾವಿಸಿದ ಯಾರೋ ಈ ಹೆಸರಿಟ್ಟರಬೇಕು. ಈ ಕಾಡಿನೊಳಕ್ಕೆ ಜುಳು ಜುಳನೆ ಹರಿಯುವ ಒಂದು ಕಿರು ತೊರೆಯಿದೆ. ಬಂಟಮಲೆಯಲ್ಲಿ ಎಲ್ಲೋ ಕಿರಿದಾಗಿ ಹುಟ್ಟಿ, ನನ್ನ ಮನೆಯಿದ್ದ ವಾಟೆಕಜೆಯ ಬಳಿ ಸ್ವಲ್ಪ ಹಿರಿದಾಗಿ ಹರಿದು, ಮುಂದೆ ಪಂಜ ಪೇಟೆಯ ಬಳಿ ಅದು ಪಂಜದ ಹೊಳೆಯೆಂಬ ಹೆಸರು ಪಡೆದು, ಕುಮಾರಧಾರಾ ನದಿಯನ್ನು ಸೇರಿದಲ್ಲಿಗೆ ಈ ಕಿರುತೊರೆಯ ಕತೆ ಮುಗಿಯುತ್ತದೆ. ಅಥವಾ ನಮಗೆ ಗೊತ್ತಿದ್ದ ಕಥೆ ಅಷ್ಟೆ. ಸ್ವಲ್ಪ ಊರು ಸುತ್ತಿ ಗೊತ್ತಿದ್ದ ನನ್ನ ಅಪ್ಪನ ಪ್ರಕಾರ ಅದು ಮುಂದೆ ನೇತ್ರಾವತಿ ನದಿ ಸೇರಿ ಅರಬ್ಬೀ ಸಮುದ್ರವನ್ನು ಸೇರುತ್ತದೆ. 1959ರ ಸುಮಾರಿನಲ್ಲಿ ನಾವು ಕೆಲವರು ಈ ಕಿರು ತೊರೆಯನ್ನು ಅನುಸರಿಸಿಕೊಂಡು ಬಂಟಮಲೆಯೊಳಕ್ಕೆ ಹೋಗಲು ನಿರ್ಧರಿಸಿದೆವು. ನದಿಯೊಂದಿಗೆ ಮುಂದಕ್ಕೆ ನಡೆದರೆ ಸುಲಭವಾಗಿ ಕಡಲು ನೋಡಬಹುದೆಂಬ ಕಲ್ಪನೆ ನಮಗಿದ್ದರೂ ಅಂಥ ಸಾಹಸ ನಮ್ಮಿಂದಾದೀತೆಂಬ ವಿಶ್ವಾಸ ನಮಗ್ಯಾರಿಗೂ ಇರಲಿಲ್ಲ. ಆದರೆ ತೊರೆಯೊಂದಿಗೆ ಹಿಂದಕ್ಕೆ ನಡೆದರೆ ಬಂಟಮಲೆಯನ್ನು ಸಾಧ್ಯವಾದಷ್ಟು ನೋಡಬಹುದೆಂಬ ನಮ್ಮ ಯೋಚನೆಗೆ ಅಪ್ಪ ಅಮ್ಮನ ಒಪ್ಪಿಗೆಯೂ ದೊರೆಯಿತು. ಪ್ರಾಯದಲ್ಲಿ ನಮಗಿಂತ ಸ್ವಲ್ಪ ಹಿರಿಯರಾಗಿದ್ದ ಮೋನಪ್ಪ ಚಿಕ್ಕಪ್ಪನ ನೇತೃತ್ವದಲ್ಲಿ ಪುಂಡಾಟಿಕೆಯ ತಂಡವೊಂದು ಸಿದ್ಧವಾಯಿತು. ನಿಗದಿ ಪಡಿಸಿದ ಆ ದಿನ ನಾವೆಲ್ಲ ಕೈಯಲ್ಲಿ ಪುಟಾಣಿ ಕತ್ತಿಯೊಂದನ್ನು ಹಿಡಿದು, ತೊರೆಯ ದಡದಲ್ಲಿ ಹಿಂದಕ್ಕೆ ನಡೆಯಲು ಆರಂಭಿಸಿದೆವು. ಹಿಂದಕ್ಕೆ ಹೋಗುವುದೆಂದರೆ, ಬಂಟಮಲೆಯ ಮೇಲಕ್ಕೆ ಏರುವುದೆಂದು ಅರ್ಥ. ಇದು ಸುಲಭದ ಕೆಲಸವಾಗಿರಲಿಲ್ಲ. ಕಿರುತೊರೆಯ ಮೇಲಕ್ಕೆ ಆಕಾಶ ಕಾಣದಂತೆ ಮುಚ್ಚಿಕೊಂಡಿದ್ದ ಬಗೆ ಬಗೆಯ ಪೊದರುಗಳು, ಶತಮಾನದಿಂದ ಅಲ್ಲಾಡದೇ ಕುಳಿತಿದ್ದ ಬಂಡೆಗಲ್ಲುಗಳು, ಜವುಗು ಮಣ್ಣು, ನೆಲಕ್ಕೆ ಕಾಲಿಟ್ಟರೆ ಕ್ಷಣಾರ್ಧದಲ್ಲಿ ಮೈಮೇಲೇರುವ ಅಸಂಖ್ಯಾತ ಜಿಗಣೆಗಳು, ವಿಚಿತ್ರವಾಗಿ ಕೂಗುವ ಜೀರುಂಡೆಗಳು, ರಕ್ತ ಹೀರುವ ಸೊಳ್ಳೆಗಳು.



ಆದರೂ ಕಾಡಿನೊಳಕ್ಕೆ ನುಗ್ಗುವ ನಮ್ಮ ತವಕಕ್ಕೆ ಎಲ್ಲೆಯಿರಲಿಲ್ಲ. ಕಾಡಿನೊಳಕ್ಕೆ ನೀಳವಾಗಿ, ಅನಾಥವಾಗಿ, ಎಲ್ಲವನ್ನು ಕಡಿದುಕೊಂಡು ಬಿದ್ದಿರುವ ಬೃಹತ್ ಮರಗಳ ಬಳಿ ಸುಳಿದಾಡಬೇಕು. ಆ ಬಿದ್ದ ಮರಗಳ ಒಂದು ಬದಿಯಲ್ಲಿ ನಿಂತರೆ ಮತ್ತೊಂದು ಬದಿ ಕಾಣುತ್ತಿರಲಿಲ್ಲ. ಬಿದ್ದ ಮರದ ಬೇರುಗಳು ಅಕರಾಳ ವಿಕರಾಳವಾಗಿ ಆಕಾಶದೆತ್ತರಕ್ಕೆ ಚಾಚಿಕೊಂಡಿರುತ್ತಿದ್ದುವು. ಮಳೆಗಾಲದಲ್ಲಿ ಬಿದ್ದ ಈ ಮರಗಳ ತೊಗಟೆಯು ಬಂಟಮಲೆಯ ತೇವಾಂಶದಲ್ಲಿ ನಿಧಾನವಾಗಿ ಕರಗುತ್ತಿದ್ದವು. ಹಾಗೆ ಕರಗುತ್ತಿದ್ದಂತೆ ತೊಗಟೆಯ ಒಳಗಿನಿಂದ ಬಗೆ ಬಗೆಯ ಹುಳುಗಳು ಹೊರಬರುತ್ತಿದ್ದವು. ಹಲವು ಬಣ್ಣಗಳ, ವಿವಿಧ ಆಕಾರಗಳ ಆ ಹುಳುಗಳನ್ನು ನೋಡಿ ಆರಂಭದಲ್ಲಿ ನಾವೆಲ್ಲ ಹೆದರಿದೆವಾದರೂ ನಿಧಾನವಾಗಿ ಅವುಗಳೊಡನೆಯೂ ಗೆಳೆತನ ಬೆಳೆಸಿಕೊಂಡೆವು. ಪ್ರೀತಿಯಿಂದ ಕೈಯಲ್ಲಿ ಸಣ್ಣ ಕೋಲು ಹಿಡಿದು ಆ ಹುಳುಗಳನ್ನು ಕೆಣಕುತ್ತಿದ್ದೆವು. ಆಗೆಲ್ಲ ತಮ್ಮ ಪುಟ್ಟ ಹೆಡೆಬಿಚ್ಚಿ ಪ್ರತಿಭಟನೆ ತೋರುವ ಅವು ತೆವಳುತ್ತಾ ಮರೆಗೆ ಸರಿಯುತ್ತಿದ್ದುವು. ಆ ಹುಳುಗಳಿಗೆ ನಾವೆಲ್ಲ ಇಟ್ಟ ಹೆಸರುಗಳೆಷ್ಟು? ಆ ಹೆಸರಿಂದ ಅವುಗಳನ್ನು ಕರೆಯುವಾಗ ಅವು ತಲೆಯಾಡಿಸುತ್ತಿರುವಂತೆ ನಮಗಂತೂ ಅನ್ನಿಸುತ್ತಿತ್ತು. ಹೀಗೆ ಕಿರುತೊರೆಯೊಟ್ಟಿಗಣ ನಮ್ಮ ಪಯಣ ಅತ್ಯಂತ ತ್ರಾಸದಾಯಕವೂ ಕುತೂಹಲಕಾರಿಯೂ ಆಗಿತ್ತು. ಈ ಕಷ್ಟಗಳ ಜೊತೆಗೆ ಕಾಡಿನ ನಿಗೂಢತೆಯೂ ಭಯವೂ ಸೇರಿಕೊಂಡು ಮೇಲ ಮೇಲಕ್ಕೆ ಹೋಗುತ್ತಿದ್ದಂತೆ ನಮ್ಮ ಭಯ ನಿಧಾನವಾಗಿ ಹೆಚ್ಚಾಗುತ್ತಿತ್ತು. ಬೇಡ ಬೇಡವೆಂದರೂ ಅಮ್ಮ ಹೇಳುತ್ತಿದ್ದ ಅಜ್ಜಿ ಕತೆಗಳ ಕೆಲವು ಪಾತ್ರಗಳು ಕಣ್ಣೆದುರು ಅವತರಿಸುತ್ತಿದ್ದುವು. ಧೈರ್ಯಶಾಲೀ ಮೋನಪ್ಪ ಚಿಕ್ಕಪ್ಪ ಎಲ್ಲರಿಗಿಂತ ಮುಂದೆ. ನಾನೂ ಧೈರ್ಯಶಾಲಿಯೆಂದು ಬಡಾಯಿಕೊಚ್ಚಿಕೊಂಡದ್ದರ ಫಲವಾಗಿ ಎಲ್ಲರಿಗಿಂತ ಹಿಂದೆ ನಿಲ್ಲ ಬೇಕಾಗಿತ್ತು. 'ಹೆದರಿಕೊಳ್ಳುವ ಅಗತ್ಯವಿಲ್ಲ, ಆದರೆ ನಡೆಯುವಾಗ ಆಗಾಗ ಹಿಂದೆ ತಿರುಗಿ ನೋಡಬೇಕಾಗಿಲ್ಲ' ಎಂಬ ಚಿಕ್ಕಪ್ಪನ ಆದೇಶವನ್ನು ನಾವೆಲ್ಲರೂ ಪಾಲಿಸಬೇಕಾಗಿತ್ತು. ಆದರೂ ಕದ್ದು ಕದ್ದು ಕತ್ತು ತಿರುಗಿಸದೆ ಮುಂದೆ ನಡೆಯಲಾರದಾದೆ ನಾನು. ಯಾವ ಭೂತ ಪ್ರೇತಗಳು ನಮ್ಮನ್ನು ಹಿಂಬಾಲಿಸುತ್ತಿಲ್ಲ ಎಂದು ಖಚಿತಪಡಿಸಿಕೊಳ್ಳದೆ ಮುಂದೆ ಹೋಗುವುದಾದರೂ ಹೇಗೆ? ಹೀಗೆ ನಮ್ಮ ಪಡೆ ತೊರೆಯ ದಡದಲ್ಲಿ ಗಂಟೆಗಟ್ಲೆ ನಡೆದಾಗ ತೊರೆಯು ಮತ್ತಷ್ಟು ಕಿರಿದಾಗುತ್ತಿತ್ತಾದರೂ ಮಾಯವಾಗುತ್ತಿರಲಿಲ್ಲವಾದ್ದರಿಂದ ನಮ್ಮ ಕುತೂಹಲದ ಜೊತೆಗೆ ಹಠವೂ ಇನ್ನಷ್ಟು ಹೆಚ್ಚಾಗುತ್ತಿತ್ತು. ಕೈಯಲ್ಲಿ ಹರಿತವಾದ ಕತ್ತಿ ಹಿಡಿದು, ಎದುರಾದ ಓಟೆ, ದಂಟುಗಳನ್ನು ಕತ್ತರಿಸುತ್ತಾ ತೊರೆಯ ಬದಿಯಲ್ಲಿನ ಬಂಡೆಗಳನ್ನು ಚಾಕಚಕ್ಯತೆಯಿಂದ ಜಿಗಿಯುತ್ತಾ ಮುಂದೆ ಸಾಗುತ್ತಿದ್ದ ಮೋನಪ್ಪ ಚಿಕ್ಕಪ್ಪ ನಮ್ಮ ಆಗಿನ ಕರ್ವಾಲೋದ ಮಂದಣ್ಣ. 'ಹಿಂದೆ ಬರುವಾಗ ದಾರಿ ತಪ್ಪುವ ಚಿಂತೆಯಿಲ್ಲ, ಹೊಳೆಬದಿಯಲ್ಲಿಯೇ ಮತ್ತೆ ಬಂದರಾಯಿತು' ಎಂಬ ಅವರ ಅಭಯವಾಕ್ಯದಿಂದ ನಮ್ಮ ಧೈರ್ಯ ಇಮ್ಮಡಿಯಾಗುತ್ತಿತ್ತು. ಹೀಗೆ ಬೆಳಿಗ್ಗೆ ಸುಮಾರು ಎಂಟು ಗಂಟೆಗೆ ಹೊರಟವರು ಮಧ್ಯಾಹ್ನ 12 ರ ಸುಮಾರಿಗೆ ಬಂಟಮಲೆಯ ನೆತ್ತಿಗೆ ತಲುಪಿದ್ದೆವು. ಮೋನಪ್ಪ ಚಿಕ್ಕಪ್ಪನ ವಿವರಣೆ ಸಾಗುತ್ತಿತ್ತು– 'ಇದು ನಿತ್ರಾಣಿ ಗುಡ್ಡೆ, ಇಲ್ಲಿ ಪಾಂಡವರು ನೆಟ್ಟ ಬಾಳೆ ಗಿಡಗಳಿವೆ ನೋಡಿ, ವನವಾಸದಲ್ಲಿ ಅವರಿಗೆ ಇದುವೇ ಆಹಾರವಾಗಿತ್ತು. ಆದರೆ ಆ ಬಾಳೆ ಗಿಡಗಳಲ್ಲಿ ಹಣ್ಣೇನಾದರೂ ಇದ್ದರೆ ಯಾರೂ ತಿನ್ನಬಾರದು, ತಿಂದರೆ ವಾಪಾಸು ಹೋಗುವಾಗ ದಾರಿ ತಪ್ಪುತ್ತದೆ' ಎಂಬ ಅವರ ಮಾತು ಕೇಳಿ ಹಸಿವಿನಿಂದ

ಕಂಗಾಲಾಗಿದ್ದ  ನಾವೆಲ್ಲ ಹೆದರಿ ಬಿಟ್ಟೆವು. 'ಈ ಮೋನಪ್ಪ ಚಿಕ್ಕಪ್ಪ ಇದೇ ಮೊದಲ ಬಾರಿಗೆ ಬಂಟಮಲೆಯ ನೆತ್ತಿಗೆ ಬಂದದ್ದು ಹೌದಾದರೂ ಅವರಿಗೆ ಈ ವಿಷಯಗಳೆಲ್ಲ ಹೇಗೆ ತಿಳಿಯಿತು?' ಎಂಬ ಯೋಚನೆಯಲ್ಲಿ ಅವರ ಬಗ್ಗೆ ನಮಗೆಲ್ಲ ಅಪಾರ ಗೌರವ ಉಂಟಾಯಿತು. ಪಾಂಡವರು ಬಂಟಮಲೆಯಲ್ಲಿ ಇದ್ದರೆಂಬ ಚಿಕ್ಕಪ್ಪನ ನಿರೂಪಣೆಯನ್ನು ಯಕ್ಷಗಾನ ಗೊತ್ತಿದ್ದ ಅಪ್ಪನೊಡನೆ ಕೇಳಿ ಖಚಿತಪಡಿಸಿಕೊಳ್ಳಲು ನಿರ್ಧರಿಸಿಕೊಂಡೆ. ಏಕೆಂದರೆ ಅಪ್ಪನ ಧರ್ಮರಾಯನ ಪಾತ್ರ ಆಗಲೇ ಜನಜನಿತವಾಗಿತ್ತು. ಅವರಿಗೆ ಇವೆಲ್ಲ ಗೊತ್ತಿಲ್ಲದಿರುವುದು ಸಾಧ್ಯವಿಲ್ಲ ಎಂಬುದು ನನ್ನ ಆಗಿನ ಅಸ್ಖಲಿತ ನಂಬಿಕೆಯಾಗಿತ್ತು!

ನಿತ್ರಾಣಿಗುಡ್ಡೆಯ ತುದಿಯಲ್ಲಿ ನಿಂತರೆ ಅದರ ಆಚೆ ಬದಿಗೆ ಯಾವುದೋ ಊರು ಕಾಣಿಸುತ್ತಿತ್ತು. ಈಚೆ ಬದಿಗೆ ಇಳಿಜಾರಾಗಿದ್ದ ಕಡೆಯಲ್ಲಿ ಎರಡು ಬೃಹದಾಕಾರದ ಬಂಡೆಗಳು ಶತಮಾನದ ಪ್ರೇಮಿಗಳಂತೆ ಒಂದಕ್ಕೊಂದು ಆಸರೆಯಾಗಿ ನಿಂತಿದ್ದವು. ಈ ಬಂಡೆಗಳ ಎಡೆಯಿಂದ ಕಿರುತೊರೆ ಉತ್ಸಾಹದಿಂದ ಪುಟಿದೇಳುತ್ತಿತ್ತು. ಹಾಗೆ ಎದ್ದ ನೀರು ಕಿಲಕಿಲನೆ ಸದ್ದು ಮಾಡಿ ಕೆಳಕ್ಕೆ ಹರಿದು ನೆಲವನ್ನು ಒದ್ದೆ ಮಾಡಿ ಮುಂದೆ ಹರಿವಾಗ ಅದರ ಆಕಾರ ಸ್ವಲ್ಪ ದೊಡ್ಡದಾಗಿತ್ತು. ಹಾಗಾದರೆ ಅಲ್ಲಿ ಮತ್ತೆ ಒಂದೆರಡು ಒರತೆಗಳು ಅದರೊಡನೆ ಸೇರಿಕೊಂಡಿರಬೇಕೆಂದು ತರ್ಕಿಸಿದ ನಾವು ನೆಲವನ್ನು ಬಗೆದಾಗ ಒರತೆ ಕಾಣಿಸಿತು, ಸಣ್ಣ ಸಣ್ಣ ನೀರಿನ ಗುಳ್ಳೆಗಳು ಮೇಲಕ್ಕೆ ಬರುತ್ತಾ ಒಡೆದು ನೀರಾಗುವ ಚೋದ್ಯವನ್ನು ಕಂಡಾಗ ನಮ್ಮ ಸಂತೋಷ ಮುಗಿಲುಮುಟ್ಟಿತ್ತು. ಆದರೆ ಆ ನೀರಿನ ಮೇಲೆ ಮೂಲೆಯಿಂದ ಮೂಲೆಗೆ ವೇಗವಾಗಿ ಅಡ್ಡಾಡುವ ತೆಳ್ಳಗಿನ ಪುಟ್ಟ ಕೀಟವೊಂದನ್ನು ಹಿಡಿಯುವಲ್ಲಿ ನಾವೆಲ್ಲ ವಿಫಲರಾದೆವು. ಆ ಕೀಟವನ್ನು ತಪ್ಪಿಸಿ, ಮೆಲ್ಲನೆ ನೀರನ್ನು ಕೈಯಲ್ಲಿ ಎತ್ತಿ ಬೇಕಾದ್ದಕ್ಕಿಂತ ಜಾಸ್ತಿಯೇ ನೀರು ಕುಡಿದೆವು. ಅಷ್ಟು ರುಚಿಕರವಾದ ನೀರನ್ನು ಮತ್ತೆಂದೂ ನಾನು ಕುಡಿಯಲಿಲ್ಲ. ಬಂಡೆಗಳ ಎಡೆಯಿಂದ ಹೊರಟ ಬಾಳೆಗಿಡಗಳಲ್ಲಿನ ಪುಟ್ಟ ಬಾಳೆಕಾಯಿಗಳನ್ನು ಮುಟ್ಟುವ ಧೈರ್ಯ ಮಾತ್ರ ನಮಗಿರಲಿಲ್ಲ.

ಈ ಕಿರುತೊರೆಯ ಜೊತೆಗೆ ನಾವು ಮತ್ತೆ ಇಳಿಯತೊಡಗಿದೆವು. ತೊರೆಯ ಹಾಗೆ ಬಂಡೆಯಿಂದ ಬಂಡೆಗೆ ಹಾರಿ ಚಿಮ್ಮುವುದು, ಬಾಗುವುದು, ಬಂಡೆಗಳ ತಳದಲ್ಲಿ ನಿಂತಿದ್ದ ನೀರಿನಲ್ಲಿ ಕಾಲಾಡಿಸುವುದು, ಹೀಗೆ ಮಾಡುತ್ತಾ ಮನೆ ತಲುಪಿದ್ದೆವು. ಕಿರುತೊರೆಯ ಮೂಲ ನೋಡಿದ ನನಗೆ 'ನದಿ ಮೂಲ ನೋಡಬೇಡ' ಎಂಬ ಗಾದೆಯ ಬಗೆಗೆ ಮುಂದೆ ನಂಬಿಕೆ ಉಳಿಯಲಿಲ್ಲ.

ಈ ಕಿರುತೊರೆಯ ದಡದಲ್ಲಿ, ಬಂಟಮಲೆಯ ಭಾಗವಾದ ಕರಿಮಲೆಗೆ ತಾಗಿಕೊಂಡಂತೆ ನಮ್ಮ ಪುಟ್ಟ ಗುಡಿಸಲಿತ್ತು. ಹೀಗಾಗಿ ತೊರೆಯೊಡಗಿನ ನನ್ನ ಸಂಬಂಧ ನಿರಂತರವಾಗಿತ್ತು. ಬೇಸಿಗೆಯಲ್ಲಿ ಅದು ಬತ್ತುವಾಗ ಆ ತೊರೆಯಲ್ಲಿನ ನೀರು ಮುಂದಕ್ಕೆ ಹರಿಯುತ್ತಿರಲಿಲ್ಲ. ಆದರೆ ಬಂಡೆಗಳ ಎಡೆಯಲ್ಲಿ ನೀರು ಎಂದೂ ಬತ್ತುತ್ತಿರಲಿಲ್ಲವಾದ್ದರಿಂದ ಬೇಸಗೆಯಲ್ಲಿ ಬಂಡೆಯಲ್ಲಿ ಕುಳಿತು ನೀರಿನಲ್ಲಿ ಕಾಲಾಡಿಸುವಾಗ ಭಾರೀ ಸುಖ ಸಿಗುತ್ತಿತ್ತು. ಆಗ ನನ್ನ ಕಾಲಿಗೆ ಚಪ್ಪಲಿ ಇರಲಿಲ್ಲವಾದ್ದರಿಂದ, ಬಂಟಮಲೆಯಲ್ಲಿ ಬೇಸಗೆಯಲ್ಲಿಯೂ ಕೊಳೆವ ಎಲೆಗಳ ನಡುವೆ ಸುತ್ತುವ ನನ್ನ ಕಾಲುಗಳು ಸಹಜವಾಗಿ ಕೊಳಕಾಗಿರುತ್ತಿದ್ದುವು. ಈ ಕೊಳಕು ಕಾಲುಗಳನ್ನು ನೀರಲ್ಲಿ ಇಳಿಬಿಟ್ಟಾಗ ಹಲವು ಬಗೆಯ ಮೀನುಗಳು ಕಾಲುಗಳಿಗೆ ಮುತ್ತಿಕ್ಕಿ ಅವನ್ನು ಶುಚಿಗೊಳಿಸುತ್ತಿದ್ದುವು. ಈ ಸುಖಕ್ಕೆ ಅಡ್ಡಿಕೊಡುತ್ತಿದ್ದುವುಗಳೆಂದರೆ ಏಡಿಗಳು. ತೆಳ್ಳನೆಯ ಸ್ಫಟಿಕದಂಥಾ ನೀರಿನಲ್ಲಿ ಬಂಡೆಯೊಳಗಿನಿಂದ ಮೆಲ್ಲನೆ ತೇಲಿ ಬರುವ ಕಪ್ಪು ಏಡಿಗಳು ತನ್ನ ಕೊಂಬ ಕಾಲುಗಳಿಂದ ಕಾಲಿನ ಬೆರಳುಗಳನ್ನು ತುಂಡರಿಸಬಲ್ಲುವಾದ್ದರಿಂದ ಅವುಗಳ ಬಗೆಗೆ ಬಹಳ ಜಾಗ್ರತೆ  ವಹಿಸಬೇಕು. ಈ ಏಡಿಗಳ ಜೊತೆಗೆ ಸಾಕಷ್ಟು ದೊಡ್ಡವಾದ ಚುರುಕಿನ  ಸಿಗಡಿಗಳೂ (ಎಟ್ಟಿ) ಆ ತೊರೆಯ ಬಂಡೆಗಳೆಡೆಯಲ್ಲಿದ್ದು ಅವು ಕೂಡಾ ಸಮಯ ನೋಡಿ ಏಡಿಗಳ ಹಾಗೆ ಬೆರಳುಗಳನ್ನು ಕಚ್ಚಬಲ್ಲವು. ಕಾರಣ ನೀರಿನಲ್ಲಿ  ಕಾಲಾಡಿಸುವಾಗ ಎಚ್ಚರ ತಪ್ಪುವಂತಿರಲಿಲ್ಲ. ಆದರೆ ಈ ವಿಷಯದಲ್ಲಿ ನಾನು ಕೂಡಾ ನನ್ನದೇ ಆದ ಅನುಭವವನ್ನು  ಹೊಂದಿದ್ದೆನಾದ್ದರಿಂದ ಬೆರಳುಗಳನ್ನು ಕಳೆದುಕೊಳ್ಳುವ ಪ್ರಸಂಗ ಎಂದೂ ಬರಲಿಲ್ಲ.

ಕಿರುತೊರೆಯ ನೀರು ಮತ್ತು ಬಂಡೆಗಳನ್ನು ನನಗೆ ಇನ್ನಷ್ಟು ಹತ್ತಿರ ಮಾಡಿದ್ದು ಯಕ್ಷಗಾನ. ಯಕ್ಷಗಾನ ನೋಡಲು ನಾನು ಪಂಜಕ್ಕೆ ಹೋಗಬೇಕಾಗಿತ್ತು. ವಾಟೆಕಜೆಯ ನನ್ನ ಗುಡಿಸಿಲಿನಿಂದ ಪಂಜ 10 ಕಿ ಮೀ ದೂರ. ಸಾಯಂಕಾಲ ನಾಲ್ಕು ಗಂಟೆಯ ಸುಮಾರಿಗೆ ಅಮ್ಮ ಕೊಟ್ಟ ಊಟ ಮಾಡಿ, ಅಪ್ಪ ಕೊಡುತ್ತಿದ್ದ ಎಂಟಾಣೆಯನ್ನು ಜಾಗ್ರತೆಯಾಗಿ ಕಿಸೆಗೇರಿಸಿಕೊಂಡು, ಹಳೆಯ ಶಾಲೊಂದನ್ನು ಹೆಗಲಿಗೇರಿಕೊಂಡು, ಪಂಜದ ಕಡೆಗೆ ಓಡುತ್ತಲೇ ಸಾಗಬೇಕಾಗಿತ್ತು. ಏಕೆಂದರೆ ಪೂರ್ತಿಯಾಗಿ ಕತ್ತಲಾಗುವ ಮೊದಲು ಬಂಟಮಲೆ ಕಾಡಿನ ಗರ್ಭದೊಳಗಿನಿಂದ ಹೊರಗೆ ಹೋಗಬೇಕಾದದ್ದು ಅನಿವಾರ್ಯ. ಹಾಗೇ ಓಡುತ್ತಾ ಓಡುತ್ತಾ ಬಂಟಮಲೆ ಕಾಡಿಳಿದು, ಕೂತ್ಕುಂಜದ ಬಳಿ ಅದೇ ಕಿರುತೊರೆಯನ್ನು ದಾಟಿ, ಕಕ್ಯಾನವನ್ನು ಬಿಟ್ಟು ಪೂನಡ್ಕ ದಾಟಿ, ಪಂಜ ದೇವಸ್ಥಾನದ ಗುಡ್ಡವನ್ನೇರಿದಾಗಷ್ಟೇ ಆಕಾಶ ಕಾಣಿಸುತ್ತದೆ. ಆಕಾಶದ ನಕ್ಷತ್ರಗಳನ್ನು ನೋಡುತ್ತಾ ಮುಂದೆ ಸಾಗಿದರೆ ಪಂಜ ಪೇಟೆ ಹತ್ತಿರವಾಗುತ್ತದೆ ಮತ್ತು ಯಕ್ಷಗಾನದ ಚೆಂಡೆಯ ಸದ್ದು ಕೇಳಿಸುತ್ತದೆ. ಆ ಕ್ಷಣಗಳು ಉಂಟುಮಾಡುತ್ತಿದ್ದ ರೋಮಾಂಚನವನ್ನು ಈಗ ಅಕ್ಷರದಲ್ಲಿ ಹಿಡಿಯಲಾರೆ. ಯಕ್ಷಗಾನ ಮೇಳಗಳು ಹಾಕುತ್ತಿದ್ದ ರಂಗು ರಂಗಿನ ಟೆಂಟ್ ಗೆ ಒಂದೆರಡು ಸುತ್ತು ಹೊಡೆಯುವುದು ಮೊದಲು ಮಾಡುವ ಕೆಲಸ. ಮನೆಯಲ್ಲಿ ಸೀಮೆ ಎಣ್ಣೆ ದೀಪವನ್ನು ಮಾತ್ರ ಕಂಡ ನನಗೆ ಟೆಂಟ್ ಆಟಗಳ ಸುತ್ತ ಕಾಣಿಸುವ ಟ್ಯೂಬ್ ಲೈಟ್ ಗಳನ್ನು ನೋಡುವುದೇ ಒಂದು ಅದ್ಭುತ ಅನುಭವ. ಹೊಗೆಯಿಲ್ಲದೆ ಬೆಳಕು ಹೊಮ್ಮುವ ಪರಿಗೆ ನಾನು ಮನಸೋತಿದ್ದೆ. ಹೀಗೆ ಪ್ರಾಥಮಿಕ ಕೆಲಸಗಳನ್ನು ಮುಗಿಸಿದ ಆನಂತರ ನಾಲ್ಕಾಣೆಯಿಂದ ಟಿಕೆಟ್ ಖರೀದಿಸಿ, ರಂಗಸ್ಥಳಕ್ಕೆ ತಾಗಿಕೊಂಡಂತೆ  ನೆಲದಲ್ಲಿ ಕುಳಿತುಕೊಂಡು ಆಟ ಸುರು ಆಗುವುದನ್ನು ಕಾಯುವುದು ಮಾತ್ರ ಬೇಸರದ ಕೆಲಸ. ಕುಳಿತಲ್ಲಿಂದ ಎದ್ದರೆ ಆ ಜಾಗವನ್ನು ಬೇರೆ ಯಾರೋ ಆಕ್ರಮಿಸುತ್ತಿದ್ದರಿಂದ ಕುಳಿತಲ್ಲಿಯೇ ಬೇರು ಬಿಡಬೇಕಾದ್ದು ಅನಿವಾರ್ಯ. ಕೊನೆಗೆ ಆಟ ಆರಂಭವಾದಲ್ಲಿಂದ ಬೆಳಗಿನವರೆಗೆ ರಾತ್ರಿಯಿಡೀ ದೇವಾನು ದೇವತೆಗಳನ್ನು ನೋಡುವುದು ಎಂಥಾ ಅನುಭವ! ನಡುರಾತ್ರಿಯಲ್ಲಿ ನಿದ್ದೆ ಬಂದರೆ ಹೆಗಲ ಮೇಲಿನ ಶಾಲನ್ನು ನೆಲಕ್ಕೆ ಹಾಸಿ ಹಾಗೇ ಸ್ವಲ್ಪ ಮಲಗಿಕೊಳ್ಳಬಹುದು. ಆದರೆ ಚೆಂಡೆ ಸದ್ದಿಗೆ ನಿದ್ದೆ ಬರುವುದು ಇಲ್ಲವೆಂದರೂ ಸರಿಯೇ. ಜೊತೆಗೆ ದೇವಾನು ದೇವತೆಗಳು ಕುಣಿಯುವಾಗ ಕೆಳಕ್ಕೆ ಬೀಳುವ ಕೆಲವು ಉಡುಗೆ ತೊಡುಗೆಗಳನ್ನು ಸಂಗ್ರಹಿಸಲು ನನ್ನ ಹಾಗೇ ಇದ್ದ ಕೆಲವು ಪಡ್ಡೆ ಹುಡುಗರ ನಡುವೆ ಪೈಪೋಟಿ ಏರ್ಪಡುತ್ತಿತ್ತು. ನಿದ್ದೆ ಮಾಡುವುದರಿಂದ ಉಂಟಾಗುವ ಈ ನಷ್ಟವನ್ನು ಭರ್ತಿ ಮಾಡಲಾಗುತ್ತಿಲ್ಲವಾದ್ದರಿಂದ ನಾನಂತೂ ಆಟ ನೋಡುವಾಗ ನಿದ್ದೆ ಮಾಡುತ್ತಿರಲಿಲ್ಲ. ಆದರೆ ಕುಣಿವಾಗ ಬೀಳುತ್ತಿದ್ದ ವಸ್ತುಗಳನ್ನು ಸಂಗ್ರಹಿಸಲು ಒಮ್ಮೊಮ್ಮೆ ರಂಗಸ್ಥಳದೊಳಗೇ ತೆವಳಿಕೊಂಡು ಹೋಗಬೇಕಾಗಿತ್ತು. ಆಗ ಮಾತ್ರ ದೇವಾನು ದೇವತೆಗಳ ಬಿಲ್ಲು ಬಾಣ ಅಥವಾ ಖಡ್ಗಗಳು ನೇರವಾಗಿ ಬೆನ್ನಿಗೋ ತಲೆಗೋ ಮೆಲ್ಲಗೆ ಅಪ್ಪಳಿಸುತ್ತಿದ್ದುದು ಮಾತ್ರ ಭಯಾನಕ. ಹಾಗಾದಾಗ ಮತ್ತೆಲ್ಲಿಯ ನಿದ್ದೆ?

ಏನಿದ್ದರೂ ಆಟ ನೋಡಲು ಹೋಗುವಾಗ ಇದ್ದ ಉತ್ಸಾಹ ಆಟ ನೋಡಿ ಹಿಂದೆ ಬರುವಾಗ ಇರುವುದು ಸಾಧ್ಯವಿಲ್ಲದ ಮಾತು. ಇಡೀ ರಾತ್ರಿ ನಿದ್ದೆಗೆಟ್ಟು ಮತ್ತೆ 10 ಕಿ.ಮೀ ಹಿಂದಕ್ಕೆ ನಡೆವಾಗ ಇನ್ನೆಂದೂ ಯಕ್ಷಗಾನಕ್ಕೆ ಹೋಗಲಾರೆ



ಎಂದು ನಾನು ಪ್ರತಿಜ್ಞೆ ಮಾಡಿಕೊಂಡದ್ದುಂಟು. ಆದರೆ ಪ್ರತಿಜ್ಞೆಗಳು ಆ ದಿನದ ನಡೆಯನ್ನು ಕಡಿಮೆ ಮಾಡಲಾರವಾದ್ದರಿಂದ ಅವಕ್ಕೆ ಅಂಥ ಮಹತ್ವ ಏನೂ ಇರಲಿಲ್ಲ. ಏನಿದ್ದರೂ ಆಟ ನೋಡಿ ಹಿಂದೆ ಬರುವುದೆಂದರೆ ಗಾಳಿಯಲ್ಲಿ ತೇಲುವುದೆಂದೇ ಅರ್ಥ. ಹೀಗೆ ತೇಲಿಕೊಂಡು ಮತ್ತೆ ಬಂಟಮಲೆಯ ಗರ್ಭ ಸೇರಿಕೊಳ್ಳಬೇಕು. ಆದರೆ ಯಾವಾಗಲೂ ನನ್ನ ನಡೆಯು ಕೂತ್ಕುಂಜದ ಹತ್ತಿರ ಹರಿಯುವ ಅದೇ ಕಿರುತೊರೆಯನ್ನು ದಾಟುವಾಗ ನಿಂತು ಹೋಗುತ್ತಿತ್ತು. ಬಂಟಮಲೆಯಿಂದ ಕೆಳಗಿಳಿಯುವ ಕಿರುತೊರೆಯ ತಣ್ಣನೆಯ ಮೈ ನನ್ನ ಕಾಲು ತಾಕುತ್ತಲೇ ನಿದ್ದೆಯಿಲ್ಲದ ಒಂದು ರಾತ್ರಿಯು ನೂರಾರು ನಿದ್ದೆಗಳಿಲ್ಲದ ರಾತ್ರಿಗಳಾಗಿ ಮಾರ್ಪಟ್ಟು ಕಣ್ಣಿಗಿಳಿಯುತ್ತಿದ್ದವು. ಮುಂದೆ ಹೋಗಲಾಗದ ನಾನು ಆ ಕಿರುತೊರೆಯ ನಡುವಣ ನಯವಾದ ಬಂಡೆಯ ಹಾಸಿನ ಮೇಲೆ ಮಧ್ಯಾಹ್ನದ ವರೆಗೆ ನಿದ್ದೆ ಮಾಡಿಬಿಡುತ್ತಿದ್ದೆ. ದಟ್ಟಡವಿ, ಜುಳು ಜುಳು ಹರಿಯುವ ಕಿರುತೊರೆ, ನಡುವಣ ಬಂಡೆಯ ಮೇಲೆ ನಿದ್ದೆ, ಸೊಳ್ಳೆಗಳಿಂದ ಬಚಾವಾಗಲು ಹೊದ್ದುಕೊಳ್ಳಲು ಮಣ್ಣಿಡಿದ ಶಾಲು! ನಿದ್ದೆಯಿಂದ ಎದ್ದಾಗ ಮೊದಲ ಪ್ರತಿಜ್ಞೆಯನ್ನು ಮುರಿದು, ಯಕ್ಷಗಾನ ನೋಡದೇ ಇರಲಾರೆ ಎಂಬ ಇನ್ನೊಂದು ಪ್ರತಿಜ್ಞೆಗೆ ಬದ್ಧನಾಗುತ್ತಿದ್ದೆ. ಒಂದೇ ಪ್ರತಿಜ್ಞೆಗೆ ಅಂಟಿಕೊಳ್ಳಲು ನಾನೇನೂ ಭೀಷ್ಮಾಚಾರ್ಯ ಅಲ್ಲವಲ್ಲ!

ಹೀಗೆ ನನ್ನ ಬಾಲ್ಯದ ಬದುಕಿನ ಒಡನಾಡಿಯಾಗಿದ್ದ ಈ ಕಿರುತೊರೆ ಮುಂದೆ ನಾನು ಶಾಲೆ ಸೇರಿದಾಗ ಮಾತ್ರ ತೊಂದರೆ ನೀಡತೊಡಗಿತು. ಮಳೆಗಾಲದಲ್ಲಿ ಅದನ್ನು ದಾಟಿ ಶಾಲೆಗೆ ಹೋಗುವುದು ಅಸಾಧ್ಯವಾಗಿತ್ತು. ಬೇಸಗೆಯಲ್ಲಿ ತೆಳ್ಳಗೆ ಹರಿಯುತ್ತಿದ್ದ ಆ ಕಿರುತೊರೆ ಮಳೆಗಾಲದಲ್ಲಿ ಮಾತ್ರ ಆರ್ಭಟಿಸಿ ಧುಮ್ಮುಕ್ಕುತ್ತಿತ್ತು. ಬಂಟಮಲೆ, ಕರಿಮಲೆ, ವಾಟೆಕಜೆ, ಮೊದಲಾದೆಡೆಗಳಲ್ಲಿ ಬಿದ್ದ ಮಳೆನೀರು ಈ ಕಿರುತೊರೆಯನ್ನು ಸೇರಿದಾಗ ಅದರ ಮೈಯೆಲ್ಲಾ ಕೆಂಪು. ಈ ಕೆಂಪು ಬಣ್ಣ ಬಂಟಮಲೆಯ ಹಸಿರನ್ನು ನುಂಗಿ, ಭೋರ್ಗರೆದು, ಬಂಡೆಗಳಿಂದ ಬಂಡೆಗಳಿಗೆ ಚಿಮ್ಮಿ, ಎತ್ತರದಿಂದ ಕೆಳಕ್ಕೆ ರಭಸದಿಂದ ಧುಮುಕಿ ಮುಂದೆ ಸಾಗುವಾಗ ಎದೆ ಝಲ್ಲೆನುತ್ತದೆ. ಎಲ್ಲಿಯ ಬೇಸಗೆಯ ಕಿರುತೊರೆ? ಎಲ್ಲಿಯ ಮಳೆಗಾಲದ ಭಯಾನಕ ರುದ್ರ ನರ್ತನ?

ಮಳೆಗಾಲದಲ್ಲಿ ಶಾಲೆಗೆ ಹೋಗುವಾಗ ಈ ನದಿ ದಾಟಿಸಲು ಅಮ್ಮ ಬರುತ್ತಿದ್ದರು. ಅಮ್ಮನ ಕೈ ಹಿಡಿದು ಹೊಳೆದಾಟುವುದರಲ್ಲಿ ಏನೋ ಮಜ ಇರುತ್ತಿತ್ತು. ನನ್ನ ಚೀಲ, ಬುತ್ತಿ ಪಾತ್ರೆ, ಮತ್ತು ಗೊರಬೆಯನ್ನು ಅಮ್ಮ ಒಂದು ಕೈಯಲ್ಲಿ ಹಿಡಿದು, ಇನ್ನೊಂದು ಕೈಯಲ್ಲಿ ನನ್ನನ್ನು ಹಿಡಿದುಕೊಂಡು ಹೊಳೆದಾಟುವಾಗ, ಅಮ್ಮ ದಿನಾ ಹೇಳುತ್ತಿದ್ದ ಮಾತೆಂದರೆ, 'ಕಾಲನ್ನು ನೆಲದಿಂದ ಬಿಡಬೇಡ' ಅಂತ. ಆದರೆ ಚೋಟುದ್ದದ ನಾನು ಮುಳುಗಲು ಎಷ್ಟು ನೀರು ಬೇಕು? ನೀರು ಚಡ್ಡಿ ಒದ್ದೆ ಮಾಡಿ, ಸೊಂಟದ ವರೆಗೆ ಏರುತ್ತಲೇ ನಾನು ನೆಲವನ್ನು ಬಿಟ್ಟು ಬಿಡುತ್ತಿದ್ದೆ. ಆಮೇಲೆ ಅರ್ಧ ದೇಹ ನೀರಲ್ಲಿ, ಅರ್ಧ ಅಮ್ಮನ ಕೈಯಲ್ಲಿ. ಆಚೆ ದಡ ತಲುಪುತ್ತಲೇ ಅಮ್ಮನ ಬೈಗಳಿಗೆ ತಯಾರಾಗಬೇಕಿತ್ತು. ಆದರೆ ಅಷ್ಟರಲ್ಲಿ ನೀರಲ್ಲಿ ಈಜಿದ ಸುಖ ಸಿಕ್ಕಿದ್ದರಿಂದ ಬೈಗಳು ನಾಟುತ್ತಿರಲಿಲ್ಲ.

ಮಳೆಗಾಲದ ಕಿರುತೊರೆ ಸ್ವಲ್ಪ ಕೆಂಪಾಗಿ ಅಕರಾಳ ವಿಕರಾಳವಾಗಿ ಹರಿಯುತ್ತಿತ್ತು. ಅದನ್ನು ದಾಟುವುದು ಸುಲಭದ ಕೆಲಸವಲ್ಲ. ಏಕೆಂದರೆ ನೀರು ಕೆಂಪಾಗಿರುವುದರಿಂದ ನೀರಿನ ತಳ ಕಾಣುವುದಿಲ್ಲ. ಹಾಗಾಗಿ ಕಾಲುಗಳನ್ನು ಎಲ್ಲಿ ಇಡಬೇಕೆಂಬ ಬಗೆಗೆ ಯಾರಿಗೂ ಖಚಿತವಿರುವುದಿಲ್ಲ. ಕಾರಣ ಮೆಲ್ಲ ಮೆಲ್ಲನೆ ಸಾಗಬೇಕು. ಜೊತೆಗೆ ಮಳೆಗಾಲದಲ್ಲಿ ಹೊಸ ಬಂಡೆಗಳು ಉರುಳಿ ಬಂದೋ, ಮರದ ದಿಮ್ಮಿಗಳು ಹರಿದು ಬಂದೋ ನಿನ್ನೆಯ ಹಾದಿಯನ್ನು ಮುಚ್ಚಿರಬಹುದಾದ್ದರಿಂದ ಅನುಭವದ ಮೇಲಿಂದ ಕಿರುತೊರೆಯನ್ನು ದಾಟಲಾಗದು. ಅದು ನಿಚ್ಚಂ ಪೊಸತು.

ಪಶ್ಚಿಮ ಘಟ್ಟಗಳ ದಟ್ಟಡವಿಯು ಆ ಪ್ರದೇಶಕ್ಕೆ ಬೇಕಾದಷ್ಟು ಮಳೆ ತಂದುಕೊಡುತ್ತದೆ. ಆದರೆ ಕರ್ನಾಟಕದ ಈಗಿನ ಸರಕಾರಕ್ಕೆ ಇದರ ಮೇಲೆ ನಂಬಿಕೆ ಇಲ್ಲ. ಅವರು ಮಳೆ ಬಾರದಿದ್ದರೆ ಕೋಟ್ಯಂತರ ರೂಪಾಯಿ ಖರ್ಚು ಮಾಡಿ ಪೂಜೆ ಮಾಡುತ್ತಾರೆ. ಇಂಥವರ ಕೈಯಲ್ಲಿ ಈ ಕಿರುತೊರೆ ನಾಶವಾಗುವುದರಲ್ಲಿ ಸಂಶಯವಿಲ್ಲ. ಜೊತೆಗೆ ಯುನೆಸ್ಕೋ ಮನ್ನಣೆ ಬೇಡವೆಂದು ವಾದಿಸಿ ಕಾಡು ಲೂಟಿ ಮಾಡಿಕೊಳ್ಳಲು ವೇದಿಕೆಯೂ ನಿರ್ಮಾಣ ಆಗಿದೆ. ಪರಿಸ್ಥಿತಿ ಹೀಗಿರುವಾಗ ನನ್ನ ಕಿರುತೊರೆಯ ಜುಳು ಜುಳು ನಾದಕ್ಕೆ ಕಿವಿಗೊಡುವವರಾದರೂ ಯಾರು ?

❑ ಡಾ. ಪುರುಷೋತ್ತಮ ಬಿಳಿಮಲೆ

# ವೇಷ ಮತ್ತು ಸನ್ನಿವೇಶ–ಒಂದು ಆವೇಷದ ಚಿಂತನೆಯ ಸಿಂಚನ!

ವೇಷ ಮತ್ತು ಸನ್ನಿವೇಶಗಳನ್ನು ಸೂಕ್ಷ್ಮವಾಗಿ ಚಿಂತನೆ ಮಾಡಿದಾಗ ಹಲವಾರು ವಿಚಾರಗಳು ಗಮನಕ್ಕೆ ಬರುತ್ತವೆ. "ಕಾಲಕ್ಕೆ ತಕ್ಕಂತೆ ಕೋಲ" ಮತ್ತು "ತಾಳಕ್ಕೆ ತಕ್ಕಂತೆ ಮೇಳ" ಎನ್ನುವ ವರ್ಧಮಾನದ ನಾಣ್ನುಡಿಯಂತೆ, ಆಧುನಿಕತೆಯಲ್ಲಿ "ಸನ್ನಿವೇಶಕ್ಕೆ ತಕ್ಕಂತೆ ವೇಷ" ಮತ್ತು "ರಚನೆಗೆ ತಕ್ಕಂತೆ ಘಟನೆ"ಯ ಅನುಕರಣೆ ಮಾಡುವುದರ ಬಗ್ಗೆ ಕೆಲವು ನಿದರ್ಶನಗಳು:

- ಸನ್ನಿವೇಶಕ್ಕೆ ತಕ್ಕಂತೆ ವೇಷ! ಇಲ್ಲವೆ ವೇಷಕ್ಕೆ ತಕ್ಕಂತೆ ಸನ್ನಿವೇಶದ ನಿರ್ಮಾಣ ಮಾಡಬಲ್ಲರು, ಈ ಜನರು–ಎಚ್ಚರಿಕೆ !!
- ವೇಷ ನೋಡಿ ಸನ್ನಿವೇಶವನ್ನು ಅರಿಯಬೇಕಾಗುತ್ತದೆ ! ಜನರು ಸನ್ನಿವೇಶಕ್ಕೆ ಅನುಗುಣವಾಗಿ ವೇಷಧರಿಸಬಲ್ಲರು–ಜಾಗ್ರತೆ !!
- ವೇಷದ ಮೋಸ–ಸನ್ನಿವೇಶದ ದೋಷ ! ಅಡಗಿದೆ, ಜೀವನದ ವೇಷ–ಸನ್ನಿವೇಶದ ಆಧಾರದಲ್ಲಿ–ವಹಿಸಿ ಮುಂಜಾಗ್ರತೆ!!
- ನಾಟಕದಲ್ಲಿನ ವೇಷ–ಸನ್ನಿವೇಶಕ್ಕೆ ತಕ್ಕಂತ ರೂಪ ! ಜೀವನದ ವೇಷ–ಸನ್ನಿವೇಶದ ಅನುರೂಪ ! ಚಿಂತಿಸಿ ಅನುಸರಿಸಿ !!
- ನಾಟಕದಲ್ಲಿನ ಯುದ್ಧದ ಸನ್ನಿವೇಶದಲ್ಲಿ ತಿಂದ ಗುದ್ದು, ಆ ವೇಷ ಬದಲಾದರೂ, ಗುದ್ದು ಗುದ್ದಾಗಿಯೇ ಉಳಿಯುತ್ತದೆ! ಗುದ್ದಿನ ನೋವು ನೋವಾಗಿಯೇ ಉಳಿಯುವುದು !!
- ಆವೇಷ ಬಂದಾಗ ಎಲ್ಲಾ ವೇಷಗಳು ಬಯಲಾಗುವುದು ! ಆ ವೇಷ–ಈ ವೇಷ ಎಂದೆಲ್ಲಾ ಬಡಕೊಂಡರೆ ಆಗುವುದು ವೇಷಗಳ ದೊಡ್ಡ ಮೇಳ–ಆದರೂ ಸಿಗದು ಶುಭ ಸನ್ನಿವೇಶ !!
- ಆವೇಷ ಹಾಗೂ ಇತರ ಎಲ್ಲಾ ವೇಷಗಳನ್ನು ಬಿಟ್ಟು ನಿಜರೂಪವ ಧರಿಸು, ಅಂತಃರಂಗದ ವೇಷ ರಹಿತ ಸ್ವರೂಪವೇ ನಿಜವಾದ ನಿರಂತರ ಸನ್ನಿವೇಶದ ವೇಷಭೂಷಣವಲ್ಲವೆ?
- ದೇಶ ವಿದೇಶಗಳಲ್ಲಿ ವೇಷ ಭೂಷಣಗಳು ಭಿನ್ನವಾದರೂ ಸನ್ನಿವೇಶಕ್ಕೆ ಅನುಗುಣವಾಗಿ ಭಾಷಣ ನೀಡುವ ವೇಷ ವಿಭಿನ್ನವೆ !
- ಸನ್ನಿವೇಶಕ್ಕೆ ಅನುಗುಣವಾದ ವೇಷಗಳಲ್ಲಿ ಭಾಷಣದ ವೇಷವೂ ಅಡಗಿರುವುದು ವಿಷಾದಾಸ್ಪದವೆ!
- ಸನ್ನಿವೇಶಕ್ಕೆ ಅನುಗುಣವಾಗಿ ಬಾಲೆಯರ ಹಾಗೂ ವೃದ್ಧರ ಉಡುಪು ತೊಡುಪು–ವೇಷಭೂಷಣಗಳು ಸರಳವಾಗಿದ್ದರೂ ಮಹಿಳೆಯರ ಹಾಗೂ ಪುರುಷರ ವೇಷಭೂಷಣಗಳು ಭಿನ್ನ ಭಿನ್ನವಾಗಿ ಆವೇಶಭರಿತವಾಗಿರುವುದು ಸಹಜವೇ !
- ಮಹಿಳೆಯ ವೇಷದಲ್ಲಿ ತಲೆ ಮರೆಸಿ ಪರಾರಿಯಾದ ಪುರುಷನ ಆ ವೇಷದ ಸನ್ನಿವೇಶ ಹೇಗಿರಬಹುದು?–ಊಹಿಸಬಲ್ಲಿರಾ?
- ಸಮಯ ಸಿಕ್ಕಿದಾಗ ಹೋಗು ಸಮಾವೇಶಕ್ಕೆ, ಆದರೆ ಸಮಾವೇಶದಲ್ಲಿನ ವೇಷ ಆವೇಶವಿಲ್ಲದೆ ಒದಲಾಗದಿರಲಿ! ಹಾಗೂ ಕೇವಲ ಉಪದೇಶವಾಗದಿರಲಿ!!
- ಸಾಹಿತ್ಯಲೋಕದ ರಸಮಯ ಸನ್ನಿವೇಶಗಳು, ವಿಜ್ಞಾನ ಲೋಕದ ವಿಸ್ಮಯ ಸನ್ನಿವೇಶಗಳು, ಪೂಜೆಯ ಭಕ್ತಿ ಸನ್ನಿವೇಶಗಳು ನಿರಂತರವಾಗಿ ಮುಂದುವರಿಯಲಿ !
- ಭಾರತೀಯ ರಾಜಕಾರಣಿಗಳ ವೇಷಧಾರಣೆ ಹೇಗಿರಬಹುದು? ಅವರ ಆವೇಷಗಳ ಸನ್ನಿವೇಶಗಳಾದರೂ ಹೇಗಿರಬಹುದು?

**ಅದನ್ನು ಗುರುತಿಸಲು ಯತ್ನಿಸುವ ನಿಮ್ಮ ಆವೇಶವಾದರೂ ಹೇಗಿರಬಹುದು–ಊಹಿಸಬಲ್ಲಿರಾ?**


❑ ಸಿ.ಅ. ಮಾಧವ

ಪ್ರಹಸನ

# ಗುಂಡನ ಪ್ರವಾಸ

ನಮ್ಮ ಗುಂಡ ಹೆಂಡ್ತಿ ಮಕ್ಕಳ್ನ ಕರ್ಕೊಂಡು ಪ್ರವಾಸ ಹೊರಟ, ಯಾಕಂದ್ರೆ ಅವನೆಂಡ್ತಿ ದಿನಾ ಬಯ್ತಾ ಹೂವೇರಿಸ್ತಿದ್ಲು ನಮ್ಮ ಗುಂಡನಿಗೆ, "ಏನ್ ಸಂಸಾರಾನೋ ಏನೋ, ಏಳೋದು, ಮಲಗೋದು, ಉಣ್ಣೋದು, ತಿನ್ನೋದು, ಮಾಡೋದು ತೊಳೆಯೋದು, ಬರೀ ಇದ್ದೇ ಆಗೋತು, ನನ್ನ ಹಣೇ ಬರಹ ಯಾವಾಗ ಇದರಿಂದ ಮುಕ್ತಿ ಸಿಗ್ತದೋ ನಾ ಬೇರೆ ಕಾಣೆ" ಈ ಡೈಲಾಗ್ ನ ದಿನಾ ಮಂತ್ರದ ತರಹ ಕೇಳಿ ಕೇಳಿ ಗುಂಡ ಬೇಸತ್ತು ಹೆಂಡ್ತಿ, ಮನಸ್ಸಿಗೆ ಸ್ವಲ್ಪ ತೃಪ್ತಿ ತರೋಣ ಅಂದ್ಕಂಡು ಹಂಗೇ ಆಫೀಸಿನಲ್ಲಿ ಕೊಳೀತಾ ಬಿದ್ದಿದ್ದ ರಜಾ ತಗಂಡು, ಬ್ಯಾಂಕಲಿ ಇದ್ದಬಿದ್ದ ಹಣ ತಗಂಡು ಉಳಿದದ್ದಕ್ಕೆ ಸಾಲಸೋಲ ಮಾಡ್ಕಂಡ್ ಇಡೀ ಜಗತ್ತೆಲ್ಲಾ ಸುತ್ತುಸ್ಕೊಂಡು ಬರ್ತೀನಿ ಬಾ ಅಂತ ಹೆಂಡ್ತಿ ಹತ್ರ ಜಂಬ ಕೊಚ್ಕೊಂಡು, ದಕ್ಷಿಣ ಭಾರತ ಯಾತ್ರಾ ಸ್ಪೆಶಲ್ ಬಸ್ ಹಿಡ್ಕಂಡು ಸುತ್ಕಂಡ್ ಬಂದ್ರಾತು, ಅಂತ ಹೊರಡೋ ತಯಾರಿ ನಡೆಸಿದ.

ಅವನೆಂಡ್ತಿಗೆ ಭೋ ಖುಷಿಯೋ ಖುಷಿ, ಗಂಡ ಹಿಂಗೆ ಊರು ಸುತ್ತುಸ್‌ಕಂಡ ಬರೋ ಸುದ್ದೀನ 'ನ್ಯೂಸ್ ಪೇಪರ್"ಗಿಂತ ಹೆಚ್ಚಾಗಿಯೇ ಹರಡಿಸಿದಳು ಊರಾಗೆ, ಗುಂಡನ ಹೆಂಡ್ತಿ ಪಾರಿ ಮಾಡದ "ಶಾಪಿಂಗ್" ಇಲ್ಲ, ಖರೀದಿಸದ ಬಟ್ಟೆಗಳೇ ಇಲ್ಲ, ಒಂದೇ ಎರಡೇ, ಎಲ್ಲ ತುಂಬ್ಕೊಂಡು ಹೋಗೋಕೆಂತ ಒಂದು ದೊಡ್ಡ ಸೂಟ್‌ಕೇಸ್ ಖರೀದಿ ಮಾಡಿ ತಂದು ಎಲ್ಲಾ ತುಂಬಿಸಿದರು. ಮತ್ತೆ ರಸ್ತೇನಾಗೆ ತಿನ್ನಕೇಂತ ಉಂಡಿ, ಚಕ್ಲಿ, ಅವ್ಲಕ್ಕಿ, ಕೋಡ್ಬಳಿ, ಶಂಕರ್‌ಪೊಳೆ, ಒಂದೇ ಎರಡೇ 'ಹುಷ್' ಎಲ್ಲಾ ಮಾಡಿ ಮೂರು–ನಾಲ್ಕು ಡಬ್ಬಿಲೀ ತುಂಬಿದ್ದು ತುಂಬಿದ್ದೇ, ಹಾಗೇ ಮಳೆ ಬಂದ್ರೆ ಛತ್ರಿ, ಸೆಖೆ ಆದ್ರೆ ಬೀಸಣಿಕೆ, ಚಳಿ ಅಂದ್ರೆ ಸ್ವೆಟರ್, ಬಿಸಿಲಿಗೆ ಕಾಟನ್ ಬಟ್ಟೆ ಅಂತ ಗುಳೇ ಹೋಗೋರ ಹಾಗೆ ತುಂಬಿಕೊಂಡ್ರು. ಆಹಾಹಾ ಏನ್ ಸಡಗರ ಅಂತೀರಾ ತುಂಬಿದ್ದೇ ತುಂಬಿದ್ದು. ಅಕ್ಕಪಕ್ಕದ ಮಂದಿಗೆಲ್ಲಾ ಹಬ್ಬವೋ ಹಬ್ಬ, ಯಾಕಂದ್ರೆ ಸಹಾಯ ಮಾಡೋಕೆ ಅಂತ ಬಂದ ಜನ, ಇವರು ಮಾಡಿಟ್ಟುಕೊಂಡಿದ್ದ ಚಕ್ಲಿ, ಉಂಡಿ ಸವಿ ನೋಡಿದ್ದೂ ನೋಡಿದ್ದೇ ಹಾಗೆ ಅವರ ಗಂಡಂದಿರಿಗೂ ಕೊಟ್ಟು ಅವರ ಬಾಯಿಂದ ಪಾರಿ ಕೈಗುಣ ಹೊಗಳಿದ್ದೂ ಹೊಗಳಿದ್ದೇ, ಹಂಗೆ ಬಂದು ಸಾಮಾನು ಪ್ಯಾಕ್ ಮಾಡಿಕೊಳ್ಳಲು ಸಹಕರಿಸಿದರೂ ಕೂಡ. ಗುಂಡ ಹೊರಡುವ ದಿನದ ತನಕ, ಸರಿರಾತ್ರಿ 12ಗಂಟೆವರೆಗೆ ಮನೇಲಿ ರಾಮಾಯಣ ಮತ್ತು ಪಾರಾಯಣ ಅಂದರೆ ಸಲಹಾ ಮಂಡಳಿ, ಅವರಿಗೆ ಕಾಪಿ, ಪಾನಕ ಸರಬರಾಜು ಅಂದರೆ, ಹಾಗೆ ಇರ್ಬೇಕು, ಹೀಗೆ ಇರ್ಬೇಕು, ದುಡ್ಡೆಲ್ಲಿ ಇಟ್ಕಂಡಿರಬೇಕು, ಅರ್ಧ ದುಡ್ಡು ಸೂಟ್‌ಕೇಸಲ್ಲಿಟ್ಕಂಡ್ರೆ, ಇನ್ನರ್ಧ ಶರ್ಟಿನ ಒಳ ಜೇಬಲಿ ಇಟ್ಕಬೇಕು. ಒಂದ್ ಕಳ್ಕಂಡ್ರೆ ಇನ್ನೊಂದ್ರಲ್ಲಿರುತ್ತೆ ಅಂತ ಈ ಉಪಾಯ ಅಂತಂದ್ರು ಗಂಡಸ್ರು, ಗುಂಡಂಗೆ, ಹಂಗೇನೆ ಮಹಿಳಾ ಮಣಿಗಳು ಪಾರೂಗೆ, ಸಾಮಾನೇನಾದ್ರೂ ಖರೀದಿ ಮಾಡೋವಾಗ ಬೆಲೆನಾ ಅರ್ಧಕ್ಕೆ ಇಳಿಸಿ ಆಮೇಲೆ ಒಂದೊಂದು ರೂಪಾಯಿಯಂತೆ ಸ್ವಲ್ಪ ಸ್ವಲ್ಪಾನೇ ಏರಿಸಿ ಒಂದು ರೇಟ್ ಫಿಕ್ಸ್ ಮಾಡಿ ನಂತರ ಖರೀದಿ ಮಾಡಿದರೆ ಮೋಸ ಆಗಲ್ಲಾ ಅನ್ನೋ ಸಲಹೆ ಮಾಡಿ ಬುದ್ದಿವಂತರೆನಿಸಿಕೊಂಡರು. ಹೂಂ, ಅಂತು ಇಂತು ಹೊರಡೋ ದಿನ ಬಂದೇ ಬಂತು. ರಾತ್ರಿಯೆಲ್ಲಾ ಸಾಮಾನು ಸರಿಯಾಗಿ ಇಟ್ಕೊಂಡಿದ್ದಿವೋ, ಇಲ್ಲವೋ, ಅಂತ ಚೆಕ್ ಮಾಡ್ಕೊಂತ ಬೆಳ್ಳಿಗ್ಗೆ ಬೇಗ ಏಳಬೇಕು ಅಂತಾ ಲೇಟಾಗಿ ಮಲ್ಕಂಡ್ರು, ಬೆಳ್ಳಿಗ್ಗೆ ಎದ್ದಾಗ ಲೇಟಾಗಿ, ನೀರು ಸಹ ಬಂದಾಗಿತ್ತು. ಅಲ್ಲಿ ಇಲ್ಲಿ ನೀರ್ ತಂದ್ಕಂಡು ಕೆಲಸ ಮುಗಿಸತೊಡಗಿಸಿದರು. ಅದೇ ವೇಳೆಗೆ ಸರಿಯಾಗಿ ಬಾಗಿಲು ಬಡಿದ ಶಬ್ದ ಕೇಳಿ ಯಾರೋ ಪಕ್ಕದವರಿರ್‌ಬೇಕಂತ ಬಾಗಿಲು ತಗದ್ರೇ ದೂರದ ನಂಟರೊಬ್ಬರು ಸೂಟ್‌ಕೇಸ್‌ನೊಂದಿಗೆ ಪ್ರತ್ಯಕ್ಷವಾಗಿದ್ದರು. ಗುಂಡನ ಜಂಘಾಬಲವೇ ಉಡುಗಿತು. ಅವರು ಗುಂಡನ ನೆಂಟರಾಗಿದ್ದರಿಂದ ಹೆಂಡತಿಯ ಕೋಪಕ್ಕೆ ಗುರಿಯಾಗಬೇಕಿತ್ತು, ದೇವರೇ ಇವನ ಸಹಾಯಕ್ಕೆ ಬಂದನೆಂದು ಕಾಣುತ್ತೆ. ಅವರು ಹೊರಡುವ ಗಾಡಿಗೆ ಒಂದು ಗಂಟೆ ಸಮಯ ಇದ್ದದ್ದರಿಂದ ಹಾಗೆ ಗುಂಡನ ನೆನಪಾಗಿ ಮಾತಾಡಿಸಕೊಂಡು ಹೋಗಲೆಂದು ಬಂದಿದ್ದರೆಂದು ನಿನ್ನೆ ಯಾವುದೋ ಕೆಲಸ ನಿಮಿತ್ತ ಬಂದಿದ್ದರೆಂದು ತಿಳಿಸಿದರು. ಬೇಗೆ ಬೇಗ ಆದರಾಥಿತ್ಯ ಮಾಡಿ ಕಳಿಸಿ, ನಂತರ ತರಾತುರಿಯಿಂದ ಎಲ್ಲಾ ಕೆಲಸ ಮುಗಿಸಿ ಬಾಗಿಲಿಗೆ ಬೀಗ ಜಡಿದು ಹೊರಡೋ ಹೊತ್ಗೆ ಸರ್‍ಯಾಗಿ ಸೋಮಾರದ್ ಸಂತೇಲಿ ಚೌಕಾಸಿ ಮಾಡಿ ತಂದಿದ್ದಕ್ಕೋ, ಸಾಮಾನು ಅಳತೆಗೆ ಮೀರಿ ತುಂಬಿದ್ದಕ್ಕೋ, ಅದುವರೆಗೂ ಬಾಯ್ ಅದುಮಿಟ್ಕಂಡಿದ್ದ ಸೂಟ್‌ಕೇಸ್ ತನ್ನ ಬಾಯ್ಬಿಟ್‌ಕ್ಕಂಡು "ನಾ ನಿಮ್ಮ ಜೊತೆ ಬರಲಾರೆ" ಅಂತ ಕುಂತ್ಕಂಬಿಡ್ತು. ಗುಂಡಂಗೆ ಎಲ್ಲಿಲ್ಲದ ಕೋಪ ಬಂದು ಹೆಂಡ್ತಿಗೆ ಬೈಯುತ್ತಾ ಸೂಟ್‌ಕೇಸ್ ಬೆನ್ನ ಮೇಲೆ ಕುಳಿತು, ಗುದ್ದಿ ಸರ್ಕಸ್ ಮಾಡಿದ ಮೇಲೆ ಹಠ ಬಿಡದ ಈ ತ್ರಿವಿಕ್ರಮನಿಗೆ ಸೋತುಶರಣಾಗಿ ಬಿಮ್ಮನೆ ಬಿಗಿದು ಕುಳಿತಿತು. ಹೇಗಾದರೂ ಇರಲಿ ಅಂತ ಅಂದ್ಕಂಡು ಒಂದ ಹಗ್ಗ ಹುಡುಕಿ ಬಿಗಿಯಾಗಿ ಬಿಗಿದು, ಆಗಲೇ ಹೊತ್ತಾಗಿದ್ದರಿಂದ ಹಳ್ಳಿ ಸ್ಟಾಯಿಲಲ್ಲಿ ತಲೆಮೇಲೆ ಹೊತ್ತುಕೊಳ್ಳೋ ಪರಿಸ್ಥಿತಿಯುಂಟಾಗಿ ಬೇರೆ ದಾರಿ ಇಲ್ಲದೆ ಆಟೋ ಹತ್ತಿ ಯಾತ್ರಾಸ್ಪೇಷಲ್ ಬಸ್ ಹತ್ರ ಬಂದರು. ಬಸ್ ಇನ್ನೂ ಹೊರಟಿರದಿದ್ದರಿಂದ ಸಾಮಾಧಾನದ ಉಸಿರೆಳೆದರು. ಆದರೆ ನಂತರದ ಒಂದು ಗಂಟೆ ಮೀರಿದರೂ ಬಸ್ ಹೊರಡದೆ ಮಕ್ಕಳು, ಹೆಂಡತಿಯ ಪಿಟಿ ಪಿಟಿಗುಟ್ಟುವುದು ಕೇಳಿ ಗುಂಡ ಹಂಗೂ ಇಂಗೂ ವಿಚಾರಿಸಿದಾಗ ತಿಳಿದ ವಿಷಯದಿಂದ ಗುಂಡ ಹೌಹಾರಿದ ಯಾಕೆಂದರೆ 'ಯತ್ರಾಸ್ಪೆಷಲ್'ನಲ್ಲಿ ಜನ ಅಷ್ಟಾಗಿ ಸೇರದ್ದರಿಂದ ಬಸ್ ಬೇರೇ ಯಾವುದೋ ಊರಿಗೆ ಹೋಗುವುದಾಗಿ ಹೇಳಿ ಮೊದಲೇ ತುಂಬಿದ್ದ ಅಡ್ವಾನ್ಸ್ ಹಣ ವಾಪಸ್ಸು ಕೊಟ್ಟರು. ಹ್ಯಾಪೆ ಮೋರೆಯಿಂದ ಹೆಂಡತಿಗೆ ವಿಷಯ ತಿಳಿಸಿದ, ಪಾರಿ ತನ್ನ ಹಣೆಬರಹವನ್ನು ಹಳಿಯುತ್ತಾ, ಗಂಡನಿಗೆ ಮಂಗಳಾರತಿ (ಬಯ್ಗುಳದ) ಮಾಡುತ್ತಾ ಏನು ಮಾಡೋದು ಅಂತ ಯೋಚಿಸಿ, ಯಾವಾಗಲೋ ಹಿಂದೆ ಕಟ್ಟಿದ 'ದೇವರ ಹರಕೆ' ನೆನಪಾಗಿ, ಅಲ್ಲಿಗಾದರೂ ಹೋಗಿ ಮಾನ ಉಳಿಸಿಕೊಳ್ಳೋಣ ಅಂತ ಆದೇವರ ಊರಿಗೆ ಬಸ್ ಹಿಡಿದರು. ಒಂದೆರಡು ದಿನದಲ್ಲೇ 'ಹರಕೆ' ಮುಗಿಸಿ, ಉಳಿದ ರಜೆ ಕಳೆಯಲು ತನ್ನ ತೌರುಮನೆಗೆ ಗಂಡ ಮಕ್ಕಳೊಂದಿಗೆ ಬಂದಿಳಿದಳು ಪಾರಿ. ಅಳಿಯ, ಮಗಳು, ಮೊಮ್ಮಕ್ಕಳನ್ನು ನೋಡಿ ಪಾರಿಯ ತಂದೆ ತಾಯಿಗೆ ಖುಷಿಯೋ ಖುಷಿ. ಪಾರಿಯ ರಾಮಾಯಣ ಕೇಳಲು ಪುರುಸೊತ್ತಿರದಷ್ಟು ಕೆಲಸದಲ್ಲಿ ತೊಡಗಿದರು ಇಬ್ಬರು. ಗುಂಡನಿಗೆ ಪಾರಿಯ ಮುಖ ನೋಡಲು ಆಗದೆ ತಾವೇ ಮಾಡಿಕೊಂಡು ತಂದಿದ್ದ ಚಕ್ಲಿ, ಉಂಡೆ ತಿನ್ನುತ್ತಾ ಪೇಪರ್ ಓದುವ ನೆಪದಲ್ಲಿ ಮುಖ ಮರೆಸಿಕೊಂಡ, ಪಾರಿ ಬೇರೆ ಊರಿಗೆ ಕರ್ಕೊಂಡು ಹೋಗೋಕೆ ದುಡ್ಡಿನ ಅಡಚಣೆ ಎಂದು ಹೇಳಿದ ಗಂಡನಿಗೆ ಯಾವರೀತಿ ಬಯ್ಯಬೇಕೆಂದು ತಿಳಿಯದೇ ತನ್ನ ಸ್ನೇಹಿತೆಯರನ್ನು ನೋಡಲು ಹೋದಳು. ಹಾಗೂ ಹೀಗೂ ಸಮಯ ಕಳೆದು ಮತ್ತೆ ಅವೇ ಸಾಮಾನೂ ಮಕ್ಕಳೊಂದಿಗೆ ವಾಪಸ್ಸು ಊರಿಗೆ ಬಂದು, ನೋಡದ ಊರಿಗೆ ಕಲ್ಪನೆ ಕತೇನಾ ಮೂರು ದಿನದವರೆಗೆ ಅಕ್ಕಪಕ್ಕದವರಿಗೆ ಹೇಳಿ ಬೋರು ಹೊಡೆಸಿ ನಂತರದ ದಿನಚರಿಗೆ ಹೊಂದಿಕೊಂಡರು. ಅಂದರೆ ಗುಂಡ ಆಫೀಸಿಗೆ, ಮಕ್ಕಳು ಸ್ಕೂಲಿಗೆ ಪಾರಿ ಅಡುಗೆ ಮನೇಲಿ "ಇಂತಾವ್ರನ್ನ ಕಟ್ಕಂಡ್ರೆ ಹಿಂಗೇ ಆಗೋದು" ಅಂತ ಅಂದುಕೊಳ್ಳುತ್ತಾ ಸಂಸಾರ ಮುಂದುವರೆಸಿದ್ರು. ಹೀಗಿತ್ತು ನಮ್ಮ ಗುಂಡನ ಪ್ರವಾಸ.



❑ ಜಮುನಾ ಸಿ. ಮಠದ

## ಶ್ರೀಗಣೇಶ ಮಿತ್ರ ಮಂಡಳಿ ವತಿಯಿಂದ 20ನೇ ವರ್ಷದ ಗಣೇಶೋತ್ಸವ



ಶ್ರೀಗಣೇಶ ಮಿತ್ರ ಮಂಡಳಿ ವತಿಯಿಂದ 20ನೇ ವರ್ಷದ ಗಣೇಶೋತ್ಸವವನ್ನು ದೆಹಲಿ ಕರ್ನಾಟಕ ಸಂಘದ ಸಹಯೋಗದಲ್ಲಿ, ಸಂಘದ ಆವರಣದಲ್ಲಿ 19.09.2012 ರಿಂದ 23.09.2012ರ ವರೆಗೆ ಅದ್ದೂರಿಯಾಗಿ ಆಚರಿಸಲಾಯಿತು.

ಪ್ರತಿಷ್ಠಾಪನಾ ಪೂಜೆಯಲ್ಲಿ ಸಂಘದ ಅಧ್ಯಕ್ಷರು, ಕಾರ್ಯದರ್ಶಿ, ಖಜಾಂಚಿ ಹಾಗೂ ಪದಾಧಿಕಾರಿಗಳನ್ನೊಳಗೊಂಡಂತೆ ದೆಹಲಿಯ ಅನೇಕ ಕನ್ನಡಿಗರು ಭಕ್ತಿ ಶ್ರದ್ಧೆಗಳಿಂದ ಪಾಲ್ಗೊಂಡಿದ್ದರು. ಐದು ದಿನಗಳ ಕಾಲ ಪೂಜೆ ವಿದ್ಯುಕ್ತವಾಗಿ ನಡೆದವು. ಮಂಡಳಿಯ ನೆಚ್ಚಿನ ಸದಸ್ಯರಾದ ಹೆಸರಾಂತ ಕಲಾವಿದ ಶ್ರೀ ಸುಧೀರ್ ಫಡ್ನೀಸ್ ಅವರು ಮುತುವರ್ಜಿಯಿಂದ ಅತ್ಯಂತ ಆಕರ್ಷಕವಾಗಿ ನಿರ್ಮಿಸಿದ್ದ ಶ್ವೇತರಥದಲ್ಲಿ ಗಣೇಶ ಪ್ರಸನ್ನ ವದನನಾಗಿ ವಿರಾಜಮಾನನಾಗಿದ್ದನು.

22.09.2012ರಂದು ಸಂಜೆ ಶ್ರೀ ರಾಜಪ್ಪ ಕೋಲಾರ ಮತ್ತು ಸಂಗಡಿಗರು ಸಂಘದ ಸಭಾಂಗಣದಲ್ಲಿ ನಡೆಸಿಕೊಟ್ಟ ಜಾನಪದ ಗೀತೆಗಳ ಕಾರ್ಯಕ್ರಮವಂತೂ ಅತ್ಯದ್ಭುತವಾಗಿದ್ದು, ನೆರೆದಿದ್ದ ದೆಹಲಿ ಕನ್ನಡಿಗರನ್ನು ರಂಜಿಸುವಲ್ಲಿ ಯಶಸ್ವಿಯಾಯಿತು. ಗಣೇಶ ಮಿತ್ರ ಮಂಡಳಿಯ ಅಧ್ಯಕ್ಷರಾದ ಶ್ರೀ ಉಸ್ಮಾನ್ ಅಬ್ದುಲ್ ಶರೀಫ್, ಕಾರ್ಯದರ್ಶಿ ಶ್ರೀ ಶಶಿಕಾಂತ್ ಪಾಟೀಲ್ ಹಾಗೂ ಮಂಡಳಿಯ ಎಲ್ಲಾ ಮಿತ್ರರ ಉತ್ಸಾಹಪೂರ್ಣ ಭಾಗವಹಿಸುವಿಕೆಯಿಂದ ಈ ವರ್ಷದ ಗಣೇಶೋತ್ಸವ ಅತ್ಯಂತ ಯಶಸ್ವಿಯಾಯಿತು.

**ರಮೇಶ್ ಟಿ.ಎಸ್.**

## ಜನಕಪುರಿ ಕನ್ನಡ ಕೂಟದಿಂದ ಗಣೇಶೋತ್ಸವ



23.09.2012ರಂದು ನೈಟಿಂಗೇಲ್ ಅಪಾರ್ಟ್‌ಮೆಂಟ್‌ನಲ್ಲಿ 36ನೇ ಗಣೇಶೋತ್ಸವವನ್ನು ಭಾರಿ ವಿಜೃಂಭಣೆಯಿಂದ ಜನಕಪುರಿ ಕನ್ನಡ ಕೂಟವು ಆಚರಿಸಿತು. ಜನಕಪುರಿ ಕನ್ನಡ ಕೂಟದ ಸದಸ್ಯರಾದ ಶ್ರೀ ತಮನ್‌ಕರ್ ದಂಪತಿಗಳು ಪೂಜಾವಿಧಿಗಳನ್ನು ನೆರವೇರಿಸಿದರು. ಕೂಟದ ಸದಸ್ಯರಾದ ಎನ್. ಪ್ರಕಾಶ್, ಮೋಹಿನಿ ಶಿವರಾಮ ರೈ, ಪ್ರಸಾದ್ ಶೆಟ್ಟಿ ಅವರುಗಳು ಪೂಜಾ ಕಾರ್ಯಕ್ರಮಗಳಿಗೆ ಪ್ರಾಯೋಜಿಸಿದರು. ಜನಕಪುರಿ ಮಹಿಳಾ ಮಂಡಳಿಯ ಸದಸ್ಯೆಯರು ಭಜನೆ ಕಾರ್ಯಕ್ರಮ ನೀಡಿದರು. ಪೂಜೆಗೆ ಸಹಕರಿಸಿ, ಪ್ರಾಯೋಜಿಸಿದವರಿಗೆ ಕೂಟದ ಅಧ್ಯಕ್ಷ ಎಸ್.ಎಲ್. ಭಂಡಾರ್‌ಕರ್ ಅವರು ಧನ್ಯವಾದ ಅರ್ಪಿಸಿದರು. ಪೂಜೆಗೆ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಡಾ. ವೆಂಕಟಾಚಲ ಹೆಗಡೆ ಹಾಗು ಕಾರ್ಯಕಾರಿ ಸಮಿತಿಯ ಸದಸ್ಯರುಗಳಾದ ಶಶಿಕಾಂತ್ ಪಾಟೀಲ್, ಟಿ.ಎಂ. ಮೈಲಾರಪ್ಪ ಹಾಗೂ ದೆಹಲಿ ಮಿತ್ರದ ಸಂಚಾಲಕ ವಸಂತ ಶೆಟ್ಟಿ ಬೆಳ್ಳಾರೆಯವರು, ಜಿ.ಎಂ. ಲಿಂಗರಾಜು ಮೊದಲಾದವರು ಆಗಮಿಸಿ ಗಣೇಶನ ಆಶೀರ್ವಾದವನ್ನು ಪಡೆದರು. ನಂತರ ವಿಜೃಂಭಣೆಯ ಮೆರವಣಿಗೆಯೊಂದಿಗೆ ಯಮುನೆಯಲ್ಲಿ ಗಣೇಶನನ್ನು ಜೈಕಾರದೊಂದಿಗೆ ಬೀಳ್ಕೊಡಲಾಯಿತು.


**ಶ್ರೀನಾಥ್ ಎನ್.ಆರ್.**



ಶ್ರೀ ರಾಜಪ್ಪ ಕೋಲಾರ ಮತ್ತು ಸಂಗಡಿಗರು ಸಂಘದ ಸಭಾಂಗಣದಲ್ಲಿ ನಡೆಸಿಕೊಟ್ಟ ಜಾನಪದ ಗೀತೆಗಳ ಕಾರ್ಯಕ್ರಮ



ಜೆಎಸ್‌ಎಸ್, ನೋಯ್ಡಾದಲ್ಲಿ ಗಣೇಶೋತ್ಸವ



ಸೆಪ್ಟೆಂ

## ಗುರ್‌ಗಾಂವ್‌ನಲ್ಲಿ ಗಣೇಶೋತ್ಸವ ಆಚರಣೆ



ಗುರ್‌ಗಾಂವ್ ಕನ್ನಡ ಸಂಘದ ವತಿಯಿಂದ ಗುರ್‌ಗಾಂವ್ ರಾಧಕೃಷ್ಣ ಮಂದಿರದ ಸಭಾಂಗಣದಲ್ಲಿ ಐದು ದಿನಗಳ ಕಾಲ ಗಣೇಶ ಚತುರ್ಥಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

19/09/2012ರಂದು ಮುಂಜಾನೆ 10ಗಂಟೆಗೆ ಶೃಂಗೇರಿ ಶಾರದಾ ಪೀಠದ ವೇದ ಪಂಡಿತರಾದ ಶ್ರೀ ರಾಘವೇಂದ್ರ ಭಟ್ ರವರ ದಿವ್ಯ-ಸಾನ್ನಿಧ್ಯದಲ್ಲಿ ವಿಘ್ನೇಶ್ವರನ ಪ್ರತಿಷ್ಠಾಪನಾ ಪೂಜೆಯನ್ನು ನೆರೆದಿದ್ದ ಕನ್ನಡಿಗರ ಸಮ್ಮುಖದಲ್ಲಿ ನೆರವೇರಿಸಲಾಯಿತು.

ಐದನೇ ದಿನವಾದ ಭಾನುವಾರ ಬೆಳಿಗ್ಗೆ 9ಗಂಟೆಗೆ ವಿಸರ್ಜನಾ ಪೂಜೆಯೊಂದಿಗೆ ದಮ್-ದಮಾ ಕೊಳದಲ್ಲಿ ಶ್ರೀ ವಿದ್ಯಾ ಗಣಪತಿಯನ್ನು ವಿಸರ್ಜಿಸಲಾಯಿತು.

ವಸಂತ ರಾವ್‌ರವರು, ಸಾಯಿಪ್ರಸಾದ್, ಪ್ರಸನ್ನ ಬಂಟ್ವಾಳ್, ನಾಗೇಶ್, ನಾಗಭೂಷಣ್, ಡಿ.ವಿ.ಎಸ್.ಮೂರ್ತಿ, ರವಿಆಚಾರ್ಯ, ವೆಂಕಟೇಶ್ ಆಚಾರ್ಯ, ಎನ್.ಆರ್.ಸುರೇಶ್, ಗಣೇಶ್‌ಉಪಾಧ್ಯಾಯ, ಗಜಾನನಶರ್ಮಾ, ರವಿ, ಕುಮಾರ್, ಗಿರೀಶ್, ಸಂತೋಷ್, ಚಂದ್ರಶೇಖರ್, ಸಾಬುದರ್ಗಾ, ಕಾರ್ಯದರ್ಶಿಯಾದ ಈಶ್ವರ್‌ಲಿಂಗ ಅರೇರಾ ಹಾಗೂ ಸಂಘದ ಅಧ್ಯಕ್ಷರಾದ ಶ್ರೀ ಆನಂದ್‌ರವರೊಂದಿಗೆ ಇತರೆ ಮುನ್ನೂರು ಕನ್ನಡಿಗರು ಪಾಲ್ಗೊಂಡಿದ್ದರು.

**ಸತೀಶ್ ಬಸವಾರಾಧ್ಯ**

## ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿಯಿಂದ ಗಣೇಶೋತ್ಸವ



ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿ, ಅಶೋಕ್ ವಿಹಾರ್ ಹಮ್ಮಿಕೊಂಡಿದ್ದ ಗೌರಿ-ಗಣೇಶನ ಪೂಜೆಯನ್ನು ಸೆಪ್ಟೆಂಬರ್ 19 ರಿಂದ 23ರವರೆಗೆ ಸಮುದಾಯ ಭವನ, ಅಶೋಕ್ ವಿಹಾರ್ ಪೋಲಿಸ್ ಕಾಲೋನಿಯಲ್ಲಿ ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲಾಯಿತು. ನೂರಾರು ಸಂಖ್ಯೆಯಲ್ಲಿ ಭಾಗವಹಿಸಿದ್ದ ಪೋಲಿಸ್ ಕುಟುಂಬದವರ ಸಮ್ಮುಖದಲ್ಲಿ ಸೆಪ್ಟೆಂಬರ್ 19ರಂದು ಬೆಳಿಗ್ಗೆ ಗಣೇಶನನ್ನು ಪ್ರತಿಷ್ಠಾಪಿಸಲಾಯಿತು. ಪ್ರತಿ ದಿನ ಪೂಜೆ ಹಾಗೂ ಪ್ರಸಾದ ವಿತರಣೆ ನಡೆಸಲಾಯಿತು.

ಈ ಮಹಾಪೂಜೆಗೆ ಶ್ರೀ ಎಂ. ನಂಜುಂಡಸ್ವಾಮಿ, ಡಾ. ವೆಂಕಟಾಚಲ ಹೆಗಡೆ ಹಾಗೂ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಸೆಪ್ಟೆಂಬರ್ 23ರ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಇದೇ ಸಂದರ್ಭದಲ್ಲಿ ನಿವೃತ್ತರಾದ ಶ್ರೀ ಮಹಂತಪ್ಪ ಹಾಗೂ ಶ್ರೀ ಅಪ್ಪಾಸಾಹೇಬ ಅವರಿಗೆ ಬೀಳ್ಕೊಡುಗೆ ನೀಡಲಾಯಿತು. ನಂತರ ಭಕ್ತಿಭಾವದೊಂದಿಗೆ ಗಣೇಶನನ್ನು ಯಮುನಾ ನದಿಯಲ್ಲಿ ವಿಸರ್ಜಿಸಲಾಯಿತು.

**ಶಿವರಾಮ್ ಎಚ್.ಜಿ.**



ಬರ್ 22ರಂದು ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್ ಆಚರಿಸಿದ ಗಣೇಶೋತ್ಸವ

## ಗೌಡ ಸಾರಸ್ವತ ಸಮಾಜದಿಂದ 37ನೇ ಸಾರ್ವಜನಿಕ ಗಣೇಶ ಮಹೋತ್ಸವ

ಸೆಪ್ಟೆಂಬರ್ 19 ರಿಂದ 23ರವರೆಗೆ ಐದು ದಿನಗಳ ಕಾಲ ಗಣೇಶೋತ್ಸವವು ವೈಭವದಿಂದ ನೆರವೇರಿತು. ಈ ಕಾರ್ಯಕ್ರಮಕ್ಕೆ ಶ್ರೀ ಎಲ್.ಕೆ. ಅಡ್ವಾಣಿ ಮತ್ತು ಕುಟುಂಬ ಹಾಗೂ ಇನ್ನೂ ಅನೇಕ ಗಣ್ಯರು ಆಗಮಿಸಿದ್ದರು. ಸಾರ್ವಜನಿಕರಿಂದ ಭಜನೆ ಹಾಗೂ ಪ್ರಸಾದ ವಿತರಣಾ ಕಾರ್ಯಕ್ರಮಗಳು ಜರುಗಿದವು. ಸಹಸ್ರಾರು ಭಕ್ತರು ಪ್ರತಿದಿನದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಗಣೇಶನ ಕೃಪೆಗೆ ಪಾತ್ರರಾದರು. ಆರನೇ ದಿನ ಯುಮುನಾಘಾಟ್‌ನಲ್ಲಿ ವಿಸರ್ಜನೆ ಮಾಡಲಾಯಿತು.




# ಗಾಂಧಿಯನ್ನರಸುತ್ತ ... ಗುಜರಾತಿನತ್ತ



ಚಿಕ್ಕಂದಿನಿಂದ ನಾವೆಲ್ಲಾ ಬೆಳೆದದ್ದು ಮಹಾತ್ಮ ಗಾಂಧೀಜಿಯವರ ಅಪರಿಮಿತ ಸಾಧನೆಯ ಬಗ್ಗೆ ಹಿರಿಯರಿಂದ ಆಲಿಸುತ್ತ ಹಾಗೂ ಅವರ ಕುರಿತಾದ ಲೇಖನಗಳನ್ನು ಓದುತ್ತ. ಶಾಲೆಗಳಲ್ಲಿ ಮಕ್ಕಳಾಗಿದ್ದಾಗ ಗಾಂಧಿ ಜಯಂತಿಯನ್ನು ಆಚರಿಸುವುದು ಒಂದು ಬಗೆಯ ಸಂಭ್ರಮ ಅನ್ನಿಸುತ್ತಿತ್ತು. ಹೀಗೆ ನಮ್ಮ ಪ್ರಜ್ಞೆಯ ಅವಿಭಾಜ್ಯ ಅಂಗವಾದ ಗಾಂಧಿಯವರ ತವರು ರಾಜ್ಯ ಹಾಗೂ ಹುಟ್ಟೂರುಗಳನ್ನು ಕಣ್ಣಾರೆ ನೋಡುವ ಅವಕಾಶ ಪ್ರಾಪ್ತವಾದದ್ದು ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್ ಆಯೋಜಿಸಿದ ಗುಜರಾತ್ ಪ್ರವಾಸದಿಂದ. ಈ ಪ್ರವಾಸಕ್ಕೆ ನಾವೆಲ್ಲರೂ ದೆಹಲಿಯಿಂದ ಅಸೋಸಿಯೇಶನ್‌ನ ಅಧ್ಯಕ್ಷೆ ಸ್ವರ್ಣಲತ ಮೃತ್ಯುಂಜಯ, ಕಾರ್ಯದರ್ಶಿ ಸುಗುಣ ನಾಗೇಶ್, ಜಂಟಿ ಕಾರ್ಯದರ್ಶಿ ನಾಗವೇಣಿ ಹೆಗಡೆ, ಸದಸ್ಯೆಯರಾದ ಡಾ. ಅಹಲ್ಯಾಚಿಂತಾಮಣಿ, ಪ್ರಫುಲ್ಲ ಶೆಟ್ಟಿ, ಸರೋಜ ಮಾಧವ, ಸುಷ್ಮಾ ಬಿಢೆ, ರಾಧಿಕಾ ರಾವ್, ಹೇಮಲತ ಗುಡ್ಡೇಗೌಡ, ನಂದಿನಿ ಮಲ್ಯ, ವಿಲಾಸಿನಿ ಶೆಟ್ಟಿ, ಸುಕನ್ಯ ಶ್ಯಾಂಸುಂದರ್ ಸೇರಿದಂತೆ ಸೆಪ್ಟೆಂಬರ್ 23ರಂದು ಅಹಮದಾಬಾದ್‌ಗೆ ಹೊರಟೆವು. ಇದೀಗ ಪೂನಾದಲ್ಲಿ ನೆಲೆಸಿರುವ ಹಳೆಯ ಸದಸ್ಯೆ ಗೀತಾ ಹವಾಲ್ದಾರ್ ಹಾಗೂ ಮೈಸೂರಿನಿಂದ ಅರುಣ ಅವರುಗಳು ನಮ್ಮ ಜೊತೆ ಸೇರಿದರು. ಒಟ್ಟು 15ಮಂದಿ ಉತ್ಸಾಹಿ ಮಹಿಳೆಯರು 6ದಿನಗಳ ಕಾಲ ಗುಜರಾತ್‌ನ ಕೆಲವು ಭಾಗಗಳಿಗೆ ಭೇಟಿ ಇತ್ತೆವು.

ಐತಿಹಾಸಿಕವಾಗಿ ಸಿಂಧು ಕಣಿವೆ ನಾಗರೀಕತೆಯ ಪ್ರಮುಖ ಕೇಂದ್ರವಾದ ಗುಜರಾತ್ ಪಶ್ಚಿಮ ಭಾರತದ ಪ್ರಮುಖ ರಾಜ್ಯ. ಪ್ರಾಚೀನ ಇತಿಹಾಸದ ಮೂಲದಂತೆ ಗುಜರಾತ್ ವಾಣಿಜ್ಯ ಹಾಗೂ ವ್ಯಾಪಾರಗಳ ಕೇಂದ್ರ ಬಿಂದುವಾಗಿತ್ತು. ಇಂದಿಗೂ ಪ್ರಮುಖ ವ್ಯಾಪಾರ ಕೇಂದ್ರವಾಗಿಯೇ ಗುಜರಾತ್ ರಾಷ್ಟ್ರದ ಅಭಿವೃದ್ಧಿ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದೆ. ಮೊದಲಿಗೆ ಅಹಮದಾಬಾದ್ ಗುಜರಾತ್ ರಾಜಧಾನಿಯಾಗಿತ್ತು. ನಂತರ 1970ರಲ್ಲಿ ಗಾಂಧೀನಗರ ರಾಜಧಾನಿಯಾಯಿತು. ವಿಶ್ವದಲ್ಲೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ನಗರಗಳಲ್ಲಿ 3ನೆಯ ಸ್ಥಾನವನ್ನು ಪಡೆದಿರುವ ಅಹಮದಾಬಾದ್ ಕೈಗಾರಿಕಾ ಬೆಳವಣಿಗೆಯಲ್ಲಿ ಪ್ರಮುಖ ಸ್ಥಾನ ಪಡೆದಿದೆ. ಭಾರತದ ರಾಜಕೀಯ ಇತಿಹಾಸದಲ್ಲಿ ಕೂಡಾ ಗುಜರಾತ್ ರಾಜ್ಯ ಮಹತ್ವಪೂರ್ಣವೆನಿಸಿದೆ. ರಾಷ್ಟ್ರಪಿತ ಮಹಾತ್ಮ ಗಾಂಧಿ ಹಾಗೂ ಸರ್ದಾರ್ ವಲ್ಲಭಭಾಯ್ ಪಟೇಲ್ ಅವರಿಗೆ ಜನ್ಮವಿತ್ತ ನಾಡು. ಗಾಂಧಿ ಜನಿಸಿದ ನಾಡು ಎಂದೇ ಖ್ಯಾತವಾದ ಗುಜರಾತ್ ಸಂಪೂರ್ಣ ಅಭಿವೃದ್ಧಿಯನ್ನು ಸ್ಥಾಪಿಸುವಲ್ಲಿ ಬಹುಪಾಲು ಯಶಸ್ವಿಯಾಗಿದೆ ಎಂದೇ ಹೇಳಬಹುದು.

**ಸಾಬರಮತಿ ಆಶ್ರಮ :** "ಸಾಬರಮತಿ ಆಶ್ರಮ" ಎಂದೊಡನೇ ನಮ್ಮ ಕಣ್ಣಮುಂದೆ ಗಾಂಧೀಜಿ, ಕಸ್ತೂರ ಬಾ ಗಾಂಧಿ ಅವರು ವಾಸವಿದ್ದ ಚಿತ್ರ ಹಾಯುತ್ತದೆ. ಇದನ್ನು ನೋಡುವ ಕಾತುರ ಎಲ್ಲರಿಗೂ ಸಹಜವೇ. ಗಾಂಧಿ ಆಶ್ರಮ, ಹರಿಜನ ಆಶ್ರಮ, ಅಥವಾ ಸತ್ಯಾಗ್ರಹ ಆಶ್ರಮ ಎಂದೂ ಕೂಡ ಕರೆಯಲ್ಪಡುವ ಈ ಆಶ್ರಮ ಸಾಬರಮತಿ ನದಿಯ ತೀರದಲ್ಲಿದೆ. ಪ್ರಶಾಂತವಾದ ಈ ಸ್ಥಳದಲ್ಲಿ ಮಹಾತ್ಮಗಾಂಧಿಯವರು ಕಸ್ತೂರ ಬಾ ಗಾಂಧಿ ಅವರೊಡನೆ 1918 ರಿಂದ 1930 ರವರೆಗೆ ವಾಸವಾಗಿದ್ದರು. ಅವರ "ಹೃದಯ್ ಕುಂಜ್" ನಿವಾಸವು ಇದೀಗ ಸಂಗ್ರಹಾಲಯವಾಗಿ ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ಭಾರತದ ಸ್ವಾತಂತ್ರ್ಯ ಸಂಗ್ರಾಮದ ಪ್ರಮುಖ ಚಳುವಳಿ 'ದಂಡಿ ಉಪ್ಪಿನ ಸತ್ಯಾಗ್ರಹ' ಪ್ರಾರಂಭವಾದದ್ದು ಇಲ್ಲಿಂದಲೇ. 1930, ಮಾರ್ಚ್ 12ರಂದು ಮಹಾತ್ಮ ಗಾಂಧಿಯವರು ಸಾಬರಮತಿ ಆಶ್ರಮದಿಂದ ದಂಡಿಗೆ ತಮ್ಮ ಅನುಯಾಯಿಗಳೊಂದಿಗೆ ಕಾಲ್ನಡಿಗೆಯಲ್ಲಿ ಯಾತ್ರೆ ಹೊರಟರು. ಭಾರತಕ್ಕೆ ಸ್ವಾತಂತ್ರ್ಯ ದೊರಕಿಸಿಕೊಡುವವರೆಗೆ ಸಾಬರಮತಿ ಆಶ್ರಮಕ್ಕೆ ಹಿಂದಿರುಗುವುದಿಲ್ಲವೆಂದು ಹೊರಟ ಗಾಂಧೀಜಿಯವರು 1947ರಲ್ಲಿ ಸ್ವಾತಂತ್ರ್ಯ ದೊರೆತ ನಂತರವೂ ಬರಲಾಗಲಿಲ್ಲ. 1948, ಜನವರಿಯಲ್ಲಿ ಅವರು ನಿಧನರಾದರು. ಸ್ವಾತಂತ್ರ್ಯಾ ನಂತರ 1963ರಲ್ಲಿ ಅಂದಿನ ಪ್ರಧಾನಿ ಪಂಡಿತ್ ಜವಾಹರಲಾಲ್ ನೆಹರೂ ಅವರು ಗಾಂಧೀಜಿಯವರ ಈ ವಾಸಸ್ಥಳವನ್ನು 'ಗಾಂಧಿ ಸ್ಮಾರಕ ಸಂಗ್ರಹಾಲಯ' ಎಂದು ಉದ್ಘಾಟಿಸಿದರು. 'ಹೃದಯ್ ಕುಂಜ್' ನಿವಾಸದಲ್ಲಿ ಗಾಂಧೀಜಿ ಹಾಗೂ ಕಸ್ತೂರ ಬಾ ಗಾಂಧಿ ವಾಸವಾಗಿದ್ದ ಕೊಠಡಿಗಳು, ಅಡುಗೆ ಮನೆ ಹಾಗೂ ಗಾಂಧೀಜಿಯವರು ನೂಲುತ್ತಿದ್ದ ಚರಕ ಎಲ್ಲವನ್ನೂ ನೋಡಬಹುದಾಗಿದೆ. ಸಂಗ್ರಹಾಲಯದಲ್ಲಿ ಅವರ ನೂರಾರು ಭಾವಚಿತ್ರಗಳು, ಪುಸ್ತಕಾಲಯ, ಪತ್ರಗಳು, ಅವರ ಬರಹಗಳು, ಸ್ವಾತಂತ್ರ್ಯ ಚಳುವಳಿಯ ಪ್ರಮುಖ ದಾಖಲೆಗಳನ್ನು ಸಂರಕ್ಷಿಸಿ, ಪ್ರದರ್ಶಿಸಲಾಗುತ್ತಿದೆ. ಗಾಂಧೀಜಿಯವರಿಗೆ ಬಂದ ಪತ್ರಗಳು ಹಾಗೂ ಅವರು ಇತರರಿಗೆ ಬರೆದ ಒಟ್ಟು 34,417 ಪತ್ರಗಳ ಮೂಲ ಪ್ರತಿ ಹಾಗೂ ನಕಲು ಪ್ರತಿಯನ್ನು ಇಲ್ಲಿ ಕಾಣಬಹುದು. ಗಾಂಧಿ ಮತ್ತು ಅವರ ಅನುಯಾಯಿಗಳ ಸುಮಾರು 6,000 ಕಪ್ಪು ಬಿಳುಪು ಭಾವಚಿತ್ರಗಳನ್ನು ನೋಡಬಹುದು. ಅಲ್ಲದೇ ಅವರು ಹರಿಜನ, ಹರಿಜನ ಸೇವಕ, ಹರಿಜನ ಬಂಧು ಪತ್ರಿಕೆಯಲ್ಲಿ ಬರೆದ ಲೇಖನಗಳ ಸುಮಾರು 8,781 ಪುಟಗಳ ಹಸ್ತ ಪ್ರತಿಯನ್ನು ಪ್ರದರ್ಶಿಸಲಾಗಿದೆ. ಗಾಂಧೀಜಿಯವರು ಬಾಳಿ ಬದುಕಿದ ಪುಣ್ಯ ನೆಲದ ಪಾವಿತ್ರ್ಯತೆ, ಪ್ರಶಾಂತತೆ ಹಾಗೂ



ಸೋಮನಾಥ ದೇವಾಲಯ



ದ್ವಾರಕಾಧೀಶನ ಮಂದಿರ

ನೈರ್ಮಲ್ಯತೆಯನ್ನು ಮೈ ಮನಗಳಲ್ಲಿ ತುಂಬಿಕೊಂಡೆವು. ಬ್ರಿಟಿಷರ ವಿರುದ್ಧ ಹೋರಾಡಿ, ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಈ ಮಹಾತ್ಮನ ಕನಸು ಇಂದು ನನಸಾಗಿದೆಯೇ ಎಂಬ ಪ್ರಶ್ನೆ ಕಾಡದೇ ಇರಲಿಲ್ಲ.

**ದ್ವಾರಕಾ :** ಮಾರನೇ ದಿನ ಹೊರಟಿದ್ದು ಪುರಾಣ ಪುಣ್ಯ ಕ್ಷೇತ್ರವಾದ ದ್ವಾರಕೆಗೆ. ಬಸ್‌ನಲ್ಲಿ 8ಗಂಟೆಗಳ ಸುದೀರ್ಘ ಪ್ರಯಾಣ. ರಸ್ತೆಗಳು ಬಹಳ ಚೆನ್ನಾಗಿದ್ದದ್ದರಿಂದ ಪ್ರಯಾಣದ ಆಯಾಸ ತಿಳಿಯಲೇ ಇಲ್ಲ. (ಒಂದೇ ಸಮನೆ ಮಾತು, ಹಾಡು, ಹರಟೆ, ಹಾಸ್ಯದಲ್ಲಿ ಮುಳುಗಿದ್ದರ ಪರಿಣಾಮವು ಇರಬಹುದು !!!) ಮಹಾಭಾರತದಲ್ಲಿ ಯಾದವರ ರಾಜಧಾನಿಯಾಗಿದ್ದ ದ್ವಾರಕೆ-ಕೃಷ್ಣನ ವಾಸಸ್ಥಾನ. ಸೌರಾಷ್ಟ್ರದ ಪಶ್ಚಿಮ ಸಮುದ್ರ ತೀರದಲ್ಲಿರುವ ದ್ವಾರಕೆಗೆ ದ್ವಾರಾಮತಿ, ದ್ವಾರಾವತಿ, ಕುಶಸ್ಥಲಿ ಎಂದೂ ಹೆಸರಿದೆ. ಮಗಧ ರಾಜ ಜರಾಸಂಧನ ದಾಳಿಯ ಭಯದಿಂದಾಗಿ ಯಾದವರು ಮಥುರಾದಿಂದ ವಲಸೆ ಬಂದು ಗೋಮತಿ ನದಿ ತೀರದಲ್ಲಿರುವ ದ್ವಾರಕೆಯಲ್ಲಿ ನೆಲೆಸಿದರು. ಕುಶಸ್ಥಲಿ ಎಂದು ಪ್ರಸಿದ್ಧವಾದ ಹಳೆಯ ನಗರದಲ್ಲಿ ವಾಸುದೇವ ಕೃಷ್ಣನು ದ್ವಾರಕೆಯನ್ನು ಕಟ್ಟಿದನೆಂದು ಪ್ರತೀತಿ. ಇದನ್ನು ವಿಶ್ವಕರ್ಮ ನಿರ್ಮಿಸಿದನೆಂದು ಹೇಳಲಾಗುತ್ತದೆ. ಮಹಾಭಾರತದ ಕತೆಯ ಸಾಕಷ್ಟು ಪ್ರಮುಖ ಘಟನೆಗಳು ದ್ವಾರಕೆಯಲ್ಲಿ ಜರುಗಿದವು ಎಂಬುದಕ್ಕೆ ಸಾಕ್ಷಿಗಳಿವೆ. ಕೃಷ್ಣನ ಅಂತ್ಯವಾದ ನಂತರ ಹಳೆಯ ದ್ವಾರಕಾ ನಗರ ಸಮುದ್ರದಲ್ಲಿ ಮುಳುಗಿ ಹೋಯಿತು ಎಂಬುದನ್ನು ಮಹಾಭಾರತದ 16ನೇ ಪರ್ವದಲ್ಲಿ ಕಾಣಬಹುದಾಗಿದೆ. ದ್ವಾರಕಾಧೀಶನ ಮೂಲ ಮಂದಿರವನ್ನು ಕೃಷ್ಣನ ಮೊಮ್ಮಗ ವಜ್ರನಾಥನು ಕೃಷ್ಣನ ವಾಸಸ್ಥಾನವಾಗಿದ್ದ ಹರಿಗೃಹದ ಮೇಲೆ ಕಟ್ಟಿಸಿದನೆಂದು ಹೇಳಲಾಗುತ್ತದೆ. ಈಗಲೂ ಸಮುದ್ರದ ಅಡಿಯಲ್ಲಿ ಪುರಾತನ ದ್ವಾರಕೆ ಇದೆ ಎಂಬುದನ್ನು ಹಲವಾರು ಟಿ.ವಿ. ಚಾನೆಲ್‌ಗಳು ತೋರಿಸಿರುವುದು ಎಷ್ಟರಮಟ್ಟಿಗೆ ಸತ್ಯವೋ ಗೊತ್ತಿಲ್ಲ. ಹಿಂದೂ ಧರ್ಮದ ನಾಲ್ಕು ಪವಿತ್ರ ಕ್ಷೇತ್ರಗಳಲ್ಲಿ ಬದರಿನಾಥ, ಪುರಿ, ರಾಮೇಶ್ವರ ಹಾಗೂ ದ್ವಾರಕೆಯೂ ಒಂದು. ಆದಿ ಶಂಕರಾಚಾರ್ಯರಿಂದ ಸ್ಥಾಪಿಸಲ್ಪಟ್ಟ ನಾಲ್ಕು ಮಠಗಳಲ್ಲಿ ಶೃಂಗೇರಿ, ಪುರಿ, ಜ್ಯೋತಿರ್ಮಠ ಹಾಗೂ ದ್ವಾರಕಾ ಪೀಠವೂ ಒಂದು. ತಿರುಪತಿ ವೆಂಕಟೇಶ್ವರನ ಅಲಂಕಾರದಲ್ಲಿ ಕಂಗೊಳಿಸುತ್ತಿದ್ದ ಮುದ್ದಾದ ಶ್ರೀಕೃಷ್ಣ ದರ್ಶನವನ್ನು ಪಡೆದೆವು.

ಮಾರನೇ ದಿನ ಬೆಟ್ ದ್ವಾರಕಾಗೆ ಹೋಗುವ ದಾರಿಯಲ್ಲಿ ರುಕ್ಮಿಣಿ ದೇವಾಲಯವನ್ನು ವೀಕ್ಷಿಸಿದೆವು. ಕೃಷ್ಣ-ಸುಧಾಮರ ಕತೆ, ಕೃಷ್ಣ-ರುಕ್ಮಿಣಿ-ಸತ್ಯಭಾಮಾ ಪ್ರಸಂಗಗಳನ್ನು ಇಲ್ಲಿ ಸ್ಮರಿಸಬಹುದಾಗಿದೆ. ದೋಣಿಯ ಮೂಲಕ ಸಮುದ್ರ ತೀರದಲ್ಲಿರುವ ಬೆಟ್ ದ್ವಾರಕಾದಲ್ಲಿ ಕೃಷ್ಣ, ಸತ್ಯಭಾಮ, ಸುಧಾಮ ಮೊದಲಾದವರ ದೇವಾಲಯಗಳನ್ನು ಕಾಣಬಹುದು.

ಪೋರಬಂದರ್ : ದ್ವಾರಕೆಯಿಂದ ಸೋಮನಾಥನೆಡೆಗೆ ಮುಂದಿನ ಪ್ರಯಾಣ. ಮಾರ್ಗದಲ್ಲಿ ಮಹಾತ್ಮಗಾಂಧಿಯವರ ಜನ್ಮಸ್ಥಳ ಪೋರಬಂದರ್ ನೋಡುವ ಸುವರ್ಣಾವಕಾಶ. ಇದು ಶ್ರೀಕೃಷ್ಣನ ಆಪ್ತ ಸ್ನೇಹಿತ ಸುಧಾಮನ ಜನ್ಮಸ್ಥಳವೂ ಹೌದು. 17ನೇ ಶತಮಾನದಲ್ಲಿ ಗಾಂಧಿಯವರ ಪೂರ್ವಜರು ವಾಸವಾಗಿದ್ದ ಮನೆಯಲ್ಲಿ 1869, ಅಕ್ಟೋಬರ್ 2ರಂದು ಜನಿಸಿದ ಗಾಂಧಿಯವರ ಮನೆಯನ್ನು ನಂತರದಲ್ಲಿ "ಕೀರ್ತಿ ಮಂದಿರ" ಎಂದು ಸಂಗ್ರಹಾಲಯವನ್ನಾಗಿ ನಿರ್ಮಿಸಿದರು. 1950ರಲ್ಲಿ ಅಂದಿನ ಗೃಹಮಂತ್ರಿ ಸರ್ದಾರ್ ವಲ್ಲಭ ಭಾಯ್ ಪಟೇಲ್ ಅವರು ಈ ಸಂಗ್ರಹಾಲಯವನ್ನು ಉದ್ಘಾಟಿಸಿದರು. ಗಾಂಧೀಜಿಯವರು ಹುಟ್ಟಿದ ಜಾಗ, ಅವರು ಓದುತ್ತಿದ್ದ ಕೊಠಡಿ, ಅವರ ಹಳೆಯ ಭಾವಚಿತ್ರಗಳಲ್ಲದೇ ಖಾದಿ ಭಂಡಾರ, ಪುಸ್ತಕಾಲಯ ಮೊದಲಾದ ಸಂಗ್ರಹ ಯೋಗ್ಯವಾದ ಸಂಗ್ರಹಾಲಯವನ್ನು ನೋಡಬಹುದು. ಪುಟ್ಟ ಹಳ್ಳಿಯಲ್ಲಿ ಜನಿಸಿದ ಗಾಂಧೀಜಿಯವರು ಮುಂದೊಂದು ದಿನ ಜಗತ್ತಿಗೇ ಮಹಾತ್ಮರೆನಿಸಿದ್ದು ನಿಜಕ್ಕೂ ಅದ್ಭುತವೇ ಸರಿ.

**ಸೋಮನಾಥ :** ಸನಾತನ ದೇವಾಲಯವೆಂದೇ ಖ್ಯಾತವಾದ ಸೋಮನಾಥ ದೇವಾಲಯವು 12 ಜ್ಯೋತಿರ್ಲಿಂಗಗಳಲ್ಲಿ ಆದಿ ಜ್ಯೋತಿರ್ಲಿಂಗ, ಮಾವ ದಕ್ಷ ಮಹಾರಾಜನಿಂದ ಶಾಪಕ್ಕೊಳಗಾದ ಚಂದ್ರನು ಶಾಪ ವಿಮೋಚನೆಗಾಗಿ ಇಲ್ಲಿ ಶಿವ ದೇವಾಲಯವನ್ನು ಕಟ್ಟಿದನೆಂದು ಪ್ರತೀತಿ. ಸೋಮ (ಚಂದ್ರ)ನನ್ನು ರಕ್ಷಿಸಿದ 'ಸೋಮನಾಥ' ದೇವಾಲಯವು 6 ಬಾರಿ ಮುಸ್ಲಿಮರ ದಾಳಿಯಿಂದ ನಾಶಗೊಂಡು 6 ಬಾರಿ ಪುನರ್ ನಿರ್ಮಾಣಗೊಂಡಿದೆ. ಚಾಲುಕ್ಯ ವಾಸ್ತುಶಿಲ್ಪ ಶೈಲಿಯ ಇಂದಿನ ಈ ದೇವಾಲಯ ಸ್ವಾತಂತ್ರ್ಯಾನಂತರ 1947, ನವೆಂಬರ್‌ನಲ್ಲಿ ಪ್ರಾರಂಭವಾಗಿ 1951ರಲ್ಲಿ ಪುನರ್ ನಿರ್ಮಾಣಗೊಂಡಿತು. ಸರ್ದಾರ್ ವಲ್ಲಭ ಭಾಯ್ ಪಟೇಲ್, ಆನಂತರ ಕೆ.ಎಂ. ಮುನ್ಷಿ ಅವರು ಈ ದೇವಾಲಯದ ಪುನರ್ ನಿರ್ಮಾಣ ಕಾರ್ಯ ಮಾಡಿದ್ದಾರೆ. ಅರಬ್ಬೀ ಸಮುದ್ರ ತೀರದಲ್ಲಿರುವ ಈ ಸೋಮನಾಥನ ದರ್ಶನ ಭಾಗ್ಯ ಎಲ್ಲರನ್ನೂ ಪುಳಕಿತರನ್ನಾಗಿಸಿತು. ಸೋಮನಾಥನ ಆರತಿ, ಅಲಂಕಾರ ನೋಡಿದಷ್ಟೂ ದಣಿವರಿಯದು.

ಕೃಷ್ಣನು ತನ್ನ ಅಂತಿಮ ಯಾತ್ರೆಯನ್ನು ಕೈಗೊಂಡ ಪವಿತ್ರ ಭೂಮಿಯನ್ನು ಕೂಡ ಇಲ್ಲಿ ಕಾಣಬಹುದು. ಕಪಿಲ, ಹಿರಣ ಹಾಗೂ ಸರಸ್ವತಿ ನದಿಗಳ ಸಂಗಮ ತೀರದಲ್ಲಿ ಕೃಷ್ಣ ತನ್ನ ನಿಜಧಾಮಕ್ಕೆ ನಡೆದ ಸ್ಥಳವನ್ನು ಇಲ್ಲಿ ನೋಡಬಹುದು.

ನಿಜ ಹೇಳಬೇಕೆಂದರೆ ಗುಜರಾತಿನ ಉದ್ದಗಲಗಳಲ್ಲಿ ಗಾಂಧಿ ನಮಗೆ ಕಂಡದ್ದು ಕೇವಲ ಅವರ ಸ್ಮಾರಕಗಳಲ್ಲಿ ಮಾತ್ರ. ಗಾಂಧೀಜಿ ಅವರು ಸಾಕ್ಷಾತ್ಕಾರವಾಗ ಬೇಕಾಗಿರುವುದು ನಮ್ಮ ನಿತ್ಯದ ವರ್ತನೆಯಲ್ಲಿ, ಕಾರ್ಯವೈಖರಿಯಲ್ಲಿ ಹಾಗೂ ಪ್ರಾಮಾಣಿಕತೆಯಲ್ಲಿ. ಇಡೀ ಜಗತ್ತನ್ನೇ ಆಕರ್ಷಿಸಿದ ಶತಮಾನದ ಮಹಾನ್ ಚೇತನ ಗಾಂಧಿ ಅವರ ತತ್ವಗಳು, ಆದರ್ಶಗಳು, ವಿಚಾರಗಳು ಅವರ ತವರು ರಾಜ್ಯದಲ್ಲೇ ಗೌಣವಾಗಿರುವುದು ನಿಜಕ್ಕೂ ಖೇದದ ಸಂಗತಿ.

ಈ ಪ್ರವಾಸದ ವ್ಯವಸ್ಥೆಯನ್ನು ಕಾರ್ಯದರ್ಶಿ ಸುಗುಣ ನಾಗೇಶ್ ಅವರು ಅಚ್ಚುಕಟ್ಟಾಗಿ ನಿರ್ವಹಿಸಿದರು. ಅಧ್ಯಕ್ಷೆ ಸ್ವರ್ಣಲತ ಮೃತ್ಯುಂಜಯ ಹಾಗೂ ಇತರರು ಸಹಕರಿಸಿ ಪ್ರವಾಸ ಯಶಸ್ವಿಗೊಳಿಸಿದರು. ಬಹುಕಾಲ ಮನದಾಳದಲ್ಲಿ ಮರೆಯಲಾಗದ ಅನುಭವದೊಂದಿಗೆ ಮರಳಿದೆವು.

❑ ಉಷಾ ಭರತಾದ್ರಿ

## ಅನಿಸಿಕೆ

ಶ್ರೀಮತಿ ಜ್ಯೋತ್ಸ್ನಾ ರಾವ್ ಅವರ ನಿಧನದ ಸುದ್ದಿ ತಿಳಿದು ಬಹಳ ದುಃಖವಾಯಿತು. ಜ್ಯೋತ್ಸ್ನಾ ರಾವ್ ಅವರು ದೆಹಲಿ ಕರ್ನಾಟಕ ಸಂಘ ಹಾಗೂ ಕನ್ನಡ ಭಾರತೀಗಾಗಿ ಸಲ್ಲಿಸಿದ ಸೇವೆಯನ್ನು ಕುರಿತಾದ ಲೇಖನಗಳನ್ನು ಸೆಪ್ಟೆಂಬರ್ ಸಂಚಿಕೆಯ ಅಭಿಮತದಲ್ಲಿ ಸೊಗಸಾಗಿ ನೀಡಿದ್ದೀರಿ. ಜನಕಪುರಿ ಕನ್ನಡ ಕೂಟದ 'ಸಾಂಸ್ಕೃತಿಕ ಸಮಾಗಮ' ಹಾಗೂ ಸುಧೀರ್ ಫಡ್ನೀಸ್ ಅವರ ಕಲಾ ಪ್ರದರ್ಶನದ ಸುದ್ದಿ ತಿಳಿದು ಸಂತೋಷವಾಯಿತು. ಶತಾಯುಷಿ ಪ್ರೊ. ಜಿ. ವೆಂಕಟಸುಬ್ಬಯ್ಯನವರ ಲೇಖನ ಸಾಂದರ್ಭಿಕವಾಗಿತ್ತು. ಮುಖಪುಟ ಹಾಗೂ ಹಿಂಬದಿಯ ಪುಟದ ಚಿತ್ರಗಳು ಅತ್ಯಂತ ಆಕರ್ಷಕವಾಗಿದ್ದವು. ಒಟ್ಟಾರೆ ಸಂಚಿಕೆ ಸೊಗಸಾಗಿ ಮೂಡಿ ಬಂದಿದೆ. ಅಭಿನಂದನೆಗಳು.

❑ ಕೃಷ್ಣಮೂರ್ತಿ ಕಲುಮಂಗಿ, ಮುಂಬೈ

ಸೆಪ್ಟೆಂಬರ್ ಸಂಚಿಕೆಯ ಅಭಿಮತದಲ್ಲಿ ಜ್ಯೋತ್ಸ್ನಾ ರಾವ್ ಅವರ ಬಹುಮುಖ ಪ್ರತಿಭೆಯನ್ನು ವಿವಿಧ ಲೇಖನಗಳ ಮೂಲಕ ತಿಳಿಸಿದ್ದಕ್ಕಾಗಿ ವಂದನೆಗಳು. ಕನ್ನಡ ಭಾರತೀ ಗಾಗಿ ಅವರು ಸಲ್ಲಿಸಿದ ಸೇವೆ ಅಪೂರ್ವ. ಈ ಮೂಲಕ ಅವರಿಗೆ ನೀವು ನೀಡಿದ ಶ್ರದ್ಧಾಂಜಲಿ ಮನಮುಟ್ಟುವಂತಿದೆ ಹಾಗೂ ಅವರಿಗೆ ಸಲ್ಲಿಸಿದ ಗೌರವವಾಗಿದೆ.

❑ ಎಂ.ವಿ. ನಾರಾಯಣ ರಾವ್, ಬೆಂಗಳೂರು

# ದೆಹಲಿಯಲ್ಲಿ ಕನ್ನಡ–ನಾ ಕಂಡಂತೆ



ನಾನು 1970ರಲ್ಲಿ ಐ.ಐ.ಟಿ. (ಇಂಡಿಯನ್ ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿ) ದೆಹಲಿಯಲ್ಲಿ ಅಧ್ಯಾಪಕನಾಗಿ ಸೇರಿದೆ. ಇದು ನನ್ನ ದೆಹಲಿ ಜೀವನದ ಬುನಾದಿ. ಇತ್ತೀಚೆಗೆ ಸೇವೆಯಿಂದ ನಿವೃತ್ತನಾಗಿ ಆಗಸ್ಟ್ 2012ಕ್ಕೆ ಬೆಂಗಳೂರಿಗೆ ಸ್ಥಳಾಂತರಿಸಲು ಯೋಚಿಸಿದೆ. ಈ 42 ವರ್ಷದ ದೀರ್ಘ ದೆಹಲಿ ಜೀವನದಲ್ಲಿ ನಾನಾ ರೀತಿಯ ಕನ್ನಡ ಚಟುವಟಿಕೆ ಮತ್ತು ಬೆಳವಣಿಗೆಯನ್ನು ನೋಡಿದೆ – ಈ ಸಮಯದಲ್ಲಿ 42 ಬಾರಿ ಅತೀ ಚಳಿಯಲ್ಲಿ ನಡುಗಿ, ಅತೀ ಸೆಕೆಯಲ್ಲಿ ಬೆಂದು ಮಾತೆ ಯಮುನೆಯ 42 ಮಹಾಪೂರಗಳನ್ನು ಕಂಡಾಯಿತು. ಇದು ಕನ್ನಡದ ಬಗ್ಗೆ ನನಗೆ ತಿಳಿದ ಸಂಗತಿಗಳ ಮತ್ತು ಅನಿಸಿಕೆಗಳ ಬಗ್ಗೆ ಗೀಚಿದ ಲೇಖನ.

ಭಾಷೆ ಮಾನವವರ್ಗಕ್ಕೆ ಮಾತ್ರ ಒದಗಿರುವ ಪ್ರಕೃತಿದತ್ತ ಕೊಡುಗೆ. ಹೀಗೆ ಪ್ರತಿಯೊಬ್ಬರಿಗೂ ಒಂದು ಮಾತೃ ಭಾಷೆ ಇದೆ. ಒಂದೇ ಭಾಷೆ ಮಾತಾಡುವವರು ಒಂದಾಗುವುದು ಸಹಜ (ಆಗಾಗ್ಗೆ ಚಕಮಕಿ ಕಂಡರೂ!) ಕನ್ನಡವೂ ಇದಕ್ಕೆ ಹೊರತಲ್ಲ. ಕರ್ನಾಟಕದಲ್ಲಿ ಕನ್ನಡಕ್ಕೆ ನಾಡಭಾಷೆ, ವ್ಯವಹಾರ ಭಾಷೆ, ಆಡಳಿತ ಭಾಷೆ, ಕಾನೂನು ಭಾಷೆ, ವ್ಯಾಪಾರ ಭಾಷೆ, ಶಿಕ್ಷಣ ಭಾಷೆ ಇತ್ಯಾದಿ ಸ್ಥಾನಗಳಿದ್ದು ಒಂದು ವಿಶೇಷತೆ ಇರುತ್ತದೆ. ಆದರೆ ಹೊರನಾಡಿನಲ್ಲಿ ಪರಿಸ್ಥಿತಿಯೇ ಬೇರೆ. ಕನ್ನಡಿಗರು ಕನ್ನಡಕ್ಕಾಗಿ ಹುಡುಕಬೇಕು. ಹೊರನಾಡ ಕನ್ನಡ ಸಂಘಗಳು ಮತ್ತು ಕನ್ನಡ ಚಟುವಟಿಕೆಗಳು ಕನ್ನಡಿಗರ ಭಾವನೆಗಳನ್ನು ಪ್ರಚರಿಸುವ ಮತ್ತು ಕನ್ನಡಿಗರನ್ನು ಒಂದಾಗಿಸುವ ವೇದಿಕೆ ಒದಗಿಸುತ್ತದೆ. ನಾನು ದೆಹಲಿಗೆ ಬಂದಾಗ ಹೀಗೆ ಕನ್ನಡಿಗರಿಗಾಗಿ ಹುಡುಕಲು ಯತ್ನಿಸಿದೆ. ಐ.ಐ.ಟಿ.ಯಲ್ಲಿ ಕೆಲ ಕನ್ನಡ ಅಧ್ಯಾಪಕರ ಮತ್ತು ಸಮವಯಸ್ಕ ಸ್ನಾತಕೋತ್ತರ ವಿದ್ಯಾರ್ಥಿಗಳ ಪರಿಚಯವಾಯಿತು. ಕನ್ನಡದಲ್ಲಿ ಆಗಾಗ್ಗೆ ಮುಖತಃ ಮಾತನಾಡುವ ಅವಕಾಶವಾಯಿತು. ಇಂದಿನಂತೆ ಮೊಬೈಲ್ ಇರಲಿಲ್ಲ. ಇಷ್ಟ ಬಂದವರೊಡನೆ ಮಾತಾಡಲು ನಮ್ಮ ಕನ್ನಡಿಗರ ಗುಂಪಿನ ಸಂಖ್ಯೆ ಕಡಿಮೆ ಇದ್ದದ್ದರಿಂದ ಅನೌಪಚಾರಿಕ ಮಿಲನಕ್ಕೆ ಕಷ್ಟವಿರಲಿಲ್ಲ. ಅವಿವಾಹಿತರಾದ ನಮಗೆ ಪ್ರೊ. ಇಂದಿರೇಶನ್, ಪ್ರೊ. ಯೋಗಾನರಸಿಂಹ ಇತ್ಯಾದಿ ಗೃಹಸ್ಥರ ಮನೆಗಳಿಗೆ ಮನ ಬಂದಾಗ ನುಗ್ಗುವ 'ಲೈಸೆನ್ಸ್' ಇತ್ತು. ರುಚಿಯಾದ ತಿನಿಸುಗಳ ಆಕರ್ಷಣೆ ಕೂಡ. ಐ.ಐ.ಟಿ.ಯಲ್ಲಿ.

ನನಗೆ ಒಂದು ಕೋಣೆಯ 'ಬ್ಯಾಚುಲರ್ಸ್' ವಸತಿ ಕೊಟ್ಟಿದ್ದರು. ಒಮ್ಮೊಮ್ಮೆ ಅಲ್ಲಲ್ಲಿ ಕನ್ನಡದ ಮಿತ್ರರೆಲ್ಲಾ ಸೇರಿ ಸಾಮೂಹಿಕವಾಗಿ ಉಪ್ಪಿಟ್ಟು ಮಾಡಿ ಸವಿಯುವ ಕಾರ್ಯಕ್ರಮ ಮಾಡುತ್ತಿದ್ದೆವು. ಆಗ ಒಬ್ಬೊಬ್ಬರಿಗೆ ಒಂದೊಂದು ಕೆಲಸ. ನಮ್ಮದೇ ಪ್ರಯೋಗ. ಆದದ್ದೇ ರುಚಿ. ಒಟ್ಟಿನಲ್ಲಿ 'ಉಪ್ಪಿಟ್ಟಿ'ನ ನಿಮಿತ್ತ ಸೇರಿ ಕನ್ನಡ ಮಾತಾಡಿ ನಲಿಯುವ ಅನುಭವ.

ಆಗ ಅಷ್ಟು ಸಕ್ರಿಯ ಕನ್ನಡ ಸಂಘಗಳು ಗಮನಕ್ಕೆ ಬರಲಿಲ್ಲ. ನಮ್ಮ ಕೆಲವರಿಗೆ ಒಂದು ಸಂಘದ ಅವಶ್ಯಕತೆ ಕಂಡಿತು. 1974ರ ಮಾರ್ಚ್‌ನಲ್ಲಿ ಐ.ಐ.ಟಿ. ಮತ್ತು ಜೆ.ಎನ್.ಯು.ವಿನ ಕೆಲ ಉತ್ಸಾಹಿ ತರುಣರು ಒಂದು ಕನ್ನಡ ಸಂಘ ಸ್ಥಾಪಿಸುವ ಬಗ್ಗೆ ಡಾ. ಯೋಗಾನರಸಿಂಹರ ಮನೆಯಲ್ಲಿ ಈ ಪ್ರದೇಶದ ಕನ್ನಡ ವಿದ್ಯಾರ್ಥಿ–ಅಧ್ಯಾಪಕರ ಸಭೆ ಕರೆದ ಪರಿಣಾಮ ಒಂದು ಸಂಘದ ಸ್ಥಾಪನೆಯಾಯಿತು. ಪ್ರೊ. ಪಿ.ವಿ. ಇಂದಿರೇಶನ್ ಪ್ರಥಮ ಅಧ್ಯಕ್ಷರು. ಐ.ಐ.ಟಿ., ಜೆ.ಎನ್.ಯು, ಎನ್.ಸಿ.ಇ.ಆರ್.ಟಿ. AIIMS ನ ವಿದ್ಯಾರ್ಥಿ, ಅಧ್ಯಾಪಕರಲ್ಲದೆ ದಕ್ಷಿಣ ದೆಹಲಿಯ ಸುತ್ತಮುತ್ತಲ ಪ್ರದೇಶದ ಕನ್ನಡಿಗರೆಲ್ಲರೂ ಸದಸ್ಯರಾಗಬಹುದೆಂದು ನಿರ್ಧರಿಸಲಾಯಿತು, ಐ.ಐ.ಟಿ.ಯನ್ನು ಕೇಂದ್ರಬಿಂದುವಾಗಿಟ್ಟುಕೊಂಡು. ಈ ಪ್ರದೇಶ ಭೌಗೋಳಿಕವಾಗಿ ಅರಾವಳಿ ಪರ್ವತ ಶ್ರೇಣಿಯ ತುದಿಯಲ್ಲಿರುವುದರಿಂದ ಇದಕ್ಕೆ 'ಅರಾವಳಿ ಕನ್ನಡ ಸಂಘ' ಎಂದು ನಾಮಕರಣವಾಯಿತು. ವಿದ್ಯಾರ್ಥಿಗಳ ಹುಮ್ಮಸ್ಸಿನಿಂದ ಮತ್ತು ಅಧ್ಯಾಪಕರ ಹಾಗೂ ಕುಟುಂಬಗಳ ಪ್ರೋತ್ಸಾಹದಿಂದ ಅನೇಕ ಜನಪ್ರಿಯ ಕಾರ್ಯಕ್ರಮಗಳು ರೂಪುಗೊಂಡವು.

ಗಣೇಶ ಚತುರ್ಥಿ, ಬೆಳದಿಂಗಳೂಟ, ವನಭೋಜನ, ರಾಮನವಮಿ, ಯುಗಾದಿ ಇತ್ಯಾದಿ ಮಿಲನದ ಕಾರ್ಯಕ್ರಮಗಳು ಮನೆಯಿಂದ ದೂರವಿದ್ದ ವಿದ್ಯಾರ್ಥಿಗಳಿಗೆ ಸಾಂತ್ವನ ತರುತ್ತಿತ್ತು. ಬಹುತೇಕ ಕಾರ್ಯಕ್ರಮಗಳ ಅಂತ್ಯದಲ್ಲಿ ಕುಟುಂಬದ ಸದಸ್ಯರು 'ಪಾಟ್‌ಲಕ್' ಪದ್ಧತಿಯಂತೆ ಮನೆಯಿಂದ ವಿವಿಧ ಖಾದ್ಯ ಪದಾರ್ಥಗಳನ್ನು ತಂದು ಎಲ್ಲರಿಗೂ ಉಣಿಸುತ್ತಿದ್ದರು. ಹಾಸ್ಟೆಲ್‌ನಲ್ಲಿ 'ಒರಟು ಚಪಾತಿ' ತಿಂದ ಹುಡುಗರಿಗೆ ಈ 'ಮನೆಯ ಊಟ' ಆಕರ್ಷಕವಾಗಿತ್ತು.

ಪ್ರತಿವರ್ಷ ಆಗಸ್ಟ್ 15 ಸ್ವಾತಂತ್ರ್ಯ ದಿನದಂದು ಹೊಸ ಸದಸ್ಯರನ್ನು ಸ್ವಾಗತಿಸುವ ಮೊದಲ ಕಾರ್ಯಕ್ರಮವಿರುತ್ತಿತ್ತು. ಕರ್ನಾಟಕದಿಂದ ಬಂದ ಹೊಸ ವಿದ್ಯಾರ್ಥಿಗಳಿಗೆ ಇದು ಒಂದು ಹರ್ಷಮಯ ಸಮಯ ಹೋಮ್ ಸಿಕ್‌ನೆಸ್ ಎದುರಿಸಲು.

ಗಣಪತಿ ಹಬ್ಬ, ರಾಮನವಮಿ ಸಾಮಾನ್ಯವಾಗಿ ಒಬ್ಬ ಪ್ರೊಫೆಸರ್ ಮನೆಯಲ್ಲಿ ನಡೆಯುತ್ತಿತ್ತು. ಬಹುತೇಕ ಇಂದಿರೇಶನ್, ಶೇಷಾದ್ರಿ ಅಥವಾ ನಮ್ಮ ಮನೆಯಲ್ಲಿ ವ್ಯವಸ್ಥೆ ಮಾಡುತ್ತಿದ್ದೆವು. ಭಜನೆ, ಗಾಯನ, ಪೂಜೆ, ಆರತಿ ಮತ್ತು ಭೋಜನ ಇದರ ಕ್ರಮ. ಬೆಳದಿಂಗಳೂಟ, ವನಭೋಜನಗಳು ಆಕರ್ಷಕ–ಒಟ್ಟಿಗೆ ನಲಿಯಲು ಇಂಡಿಯಾಗೇಟ್, ಡೀರ್‌ಪಾರ್ಕ್, ರೋಸ್‌ಗಾರ್ಡನ್, ನೆಹರೂ ಪಾರ್ಕ್, ಬುದ್ಧ ಜಯಂತಿ ಗಾರ್ಡನ್, ಭಡ್ಕಲ್ ಲೇಕ್, ಸೂರಜ್‌ಕುಂಡ್ ಇತ್ಯಾದಿ ಅನೇಕ ಸ್ಥಳಗಳಲ್ಲಿ ಸೇರಿದ್ದೆವು. ಆಟ, ಊಟ, ಗಾಯನ ಇತ್ಯಾದಿ ಮನರಂಜನೆ ಇದರಲ್ಲಿ. ಒಟ್ಟಿನಲ್ಲಿ ಕನ್ನಡಿಗರು ಒಟ್ಟಿಗೆ ಸೇರುವುದು ಗುರಿ.

ಯುಗಾದಿಯ ನಿಮಿತ್ತ ಐ.ಐ.ಟಿ. ಸಭಾಂಗಣದಲ್ಲಿ ಪ್ರತಿ ವರ್ಷ ಜರುಗುತ್ತಿದ್ದ ನೃತ್ಯ, ಸಂಗೀತ, ನಾಟಕಗಳನ್ನೊಳಗೊಂಡ ಸಾಂಸ್ಕೃತಿಕ ಕಾರ್ಯಕ್ರಮ ಜನಪ್ರಿಯವಾಯಿತು. ಎಂ.ಆರ್.ವಿ. ಸುಬ್ಬಯ್ಯ, ರವೀಂದ್ರನಾಥ್, ಶಾಂತಾರಾಮ್, ಪಾರ್ಥಸಾರಥಿ, ವಾಸುದೇವ, ಭಾಸ್ಕರ್, ಸಿ.ವಿ. ನಾಗರಾಜರಾವ್ (ಸಿ.ವಿ. ಅಶ್ವಥ್ ಸೋದರ) ಇತ್ಯಾದಿ ಕಲಾಪ್ರೇಮಿಗಳ ಉತ್ತೇಜನದಿಂದ ಈ ಯುಗಾದಿಯ ವಾರ್ಷಿಕ ಕಾರ್ಯಕ್ರಮ ದಕ್ಷಿಣ ದೆಹಲಿ ಕನ್ನಡಿಗರಿಂದ ತುಂಬಾ ಮೆಚ್ಚುಗೆ ಪಡೆಯಿತು. ಕೆಲ ತಿಂಗಳ ತಯಾರಿಯಿಂದ ಸದಸ್ಯರು ಉತ್ತಮ ಪ್ರದರ್ಶನಕ್ಕೆ ಯತ್ನಿಸುತ್ತಿದ್ದರು. ನಾಟಕಕ್ಕೆ ಬಹುತೇಕ ಸುಬ್ಬಯ್ಯನವರೇ ನಿರ್ದೇಶಕರು. 'ಕನ್ನಡ ಭಾರತಿ'ಯ ಹಳೆಯ ಕಲಾವಿದರಾದ ಅವರು ಕಳಪೆ ನಟನೆಯನ್ನು ಎಂದೂ ನಟಿಸುತ್ತಿರಲಿಲ್ಲ. ನಮ್ಮ ವಿದ್ಯಾರ್ಥಿಗಳನ್ನು ಬಯ್ದು, ತಿದ್ದಿ ಹೆಚ್ಚು ನಟನೆಯ ಹಿನ್ನೆಲೆ ಇಲ್ಲದವರಿಂದಲೂ ಉತ್ತಮ ಪ್ರದರ್ಶನಕ್ಕೆ ಕಾರಣಕರ್ತರಾದರು. ಲಘು ಮನೋರಂಜನೆಗಾಗಿ ತಿಳಿ ಹಾಸ್ಯದ ನಾಟಕಗಳನ್ನೇ ಆರಿಸುತ್ತಿದ್ದೆವು. ಪ್ರೇಕ್ಷಕರನ್ನು ನಗೆಗಡಲಲ್ಲಿ ಮುಳುಗಿಸುವುದು ಗುರಿ, ಅಳಿಸುವುದಲ್ಲ. ಇವುಗಳಲ್ಲಿ ಕೆ. ಗುಂಡಣ್ಣನವರ ನಾಟಕಗಳೇ ಹೆಚ್ಚು. ಕಲೆಯ ಕೊಲೆ, ಅಳಿಯ ದೇವರು, ಖೋಟಾ ಪೈಸ, ಯಮನ ಸೋಲು, ಕುದುರೆ ಮೊಟ್ಟೆ, ಲಾಟರಿ ಟಿಕೆಟ್, ಭರ್ಜರಿ ಕಿವುಡರು, ಅಸಲಿ–ನಕಲಿ, ಆಡಿದ ಕೆಲ ನಾಟಕಗಳು. ತಯಾರಿಯ ತಿಂಗಳುಗಳು ಸದಸ್ಯರ ಮನೆಗಳಲ್ಲಿ ಸಂಭ್ರಮದ ಸಮಯ. ನಮ್ಮ ಮನೆಯಲ್ಲದೇ ಶೇಷಾದ್ರಿ, ಸುಬ್ಬಯ್ಯ, ಪಾರ್ಥಸಾರಥಿ, ಭಾಸ್ಕರ್ ಇತರರ ಮನೆಗಳು ಸಕ್ರಿಯ ಕಾರ್ಯಕ್ಷೇತ್ರಗಳಾಗುತ್ತಿದ್ದುವು. ಒಂದೊಂದು ಮನೆಯಲ್ಲಿ ಒಂದೊಂದು ತಯಾರಿ ನಾಟಕ, ಮಕ್ಕಳ ನೃತ್ಯ, ಕೋಲಾಟ, ಗುಂಪುಗಾಯನ ಇತ್ಯಾದಿ. ಮನೆಯ ಗೃಹಿಣಿ ಪ್ರತಿನಿತ್ಯ ಕಾಫಿ, ತಿಂಡಿ ಸರಬರಾಜಿನಲ್ಲಿ ನಿರತರು. ಪ್ರತಿಯೊಬ್ಬರೂ ಸೇವಾಮನೋಭಾವದಿಂದ ದೆಹಲಿಯಲ್ಲಿ ಕನ್ನಡ ಚಟುವಟಿಕೆ ನಡೆಸುವುದರಲ್ಲಿ ಸಹಕರಿಸಿದರು.

ಮೇಲಿನ 'ರೆಗ್ಯುಲರ್' ಕಾರ್ಯಕ್ರಮಗಳಲ್ಲದೆ ಕೆಲವು ವಿಶೇಷ ಕಾರ್ಯಕ್ರಮಗಳೂ ಏರ್ಪಟ್ಟಿವೆ. ಡಾ. ಎಚ್.ವಿ. ಶ್ರೀನಿವಾಸಮೂರ್ತಿಯವರ ಪ್ರೇರಣೆಯಿಂದ ಕೆಲವರ್ಷ ಪುರಂದರ ದಾಸರ ಜಯಂತಿ ಆಚರಿಸಿದೆ–ಸುಶ್ರಾವ್ಯ ಕರ್ನಾಟಕ ಗಾಯನದೊಂದಿಗೆ. 1974ರಲ್ಲಿ ಆಗಿನ ಉಪರಾಷ್ಟ್ರಪತಿ ಶ್ರೀ ಬಿ.ಡಿ. ಜತ್ತಿಯವರಿಗೆ

ಸನ್ಮಾನವಾಯಿತು. 1977ರಲ್ಲಿ ಖ್ಯಾತ ಗಾಯಕ ಶ್ರೀ ಆರ್.ಕೆ. ಶ್ರೀಕಂಠನ್ ಅವರಿಗೆ ಸನ್ಮಾನ–ಅವರಿಂದ ಗಾಯನ. ಕೆಲವರ್ಷ ಯುಗಾದಿಯಂದು 'ಬೇವು–ಬೆಲ್ಲ' ಎಂಬ ಕಿರುಹೊತ್ತಿಗೆ ಹೊರತರುತ್ತಿದ್ದೆವು, ಸ್ಥಳೀಯ ಲೇಖಕರನ್ನೂ ಉತ್ತೇಜಿಸಲು. ಸ್ಮಿತಾ ಶೇಷಾದ್ರಿಯ ಭರತನಾಟ್ಯವೂ ಆಯಿತು.

30.10.1993ರಂದ ಸಂಘದ 20ನೇ ವರ್ಷದ ಸ್ಮರಣೆಗಾಗಿ ಭಾರಿ ಕಾರ್ಯಕ್ರಮ ಏರ್ಪಟ್ಟಿತ್ತು. ಶ್ರೀಮತಿ ಪದ್ಮಾ ರವೀಂದ್ರನಾಥ್‌ರ ವರ್ಣಚಿತ್ರ ಪ್ರದರ್ಶನ, ಸ್ಮರಣಸಂಚಿಕೆ ಬಿಡುಗಡೆ, ಮನೋರಂಜನಾ ಕಾರ್ಯಕ್ರಮ, ಪ್ರೊ. ಇಂದಿರೇಶನ್‌ರಿಗೆ ಗೌರವಾರ್ಪಣೆ ಇತ್ಯಾದಿ ಹಮ್ಮಿಕೊಂಡಿತ್ತು.

ಇದು ಅರಾವಳಿ ಕನ್ನಡ ಸಂಘ ನಡೆದು ಬಂದ ದಾರಿ. ಅದು ಹುಟ್ಟಿ ಪ್ರಬುದ್ಧಮಾನಕ್ಕೆ ಬರಲು ಅನೇಕ ಮಹನೀಯರು ಶ್ರಮಿಸಿದ್ದಾರೆ. ಹೆಚ್ಚು ಪ್ರಚಾರವಿಲ್ಲದೆ ಕನ್ನಡಕ್ಕೆ 'ಅಳಿಲು ಸೇವೆ' ಮಾಡಿದೆ. 'ರಾಜಾಶ್ರಯ' ಅಥವಾ ಧನ ಸಹಾಯವಿಲ್ಲದೆ ಸುಮಾರು 40 ವರ್ಷ ಸತತವಾಗಿ ನಡೆಸಿಕೊಂಡು ಬರುವುದು ಕಠಿಣ. ವರ್ಷಗಳುರುಳಿದಂತೆ ಅರಾವಳಿ ಕನ್ನಡ ಸಂಘದ ಕಾರ್ಯಕ್ರಮಗಳು ಕುಂಠಿತವಾದುವು–ವರ್ಷಕ್ಕೆ 2–3 ಕಾರ್ಯಕ್ರಮಗಳನ್ನು ಬಿಟ್ಟು. ಟಿ.ವಿ., ಇಂಟರ್‌ನೆಟ್ ಪ್ರಭಾವಿತ ವಿದ್ಯಾರ್ಥಿಗಳಿಗೆ ಕಾರ್ಯಕ್ರಮ ಏರ್ಪಡಿಸಲು ಹೆಚ್ಚು ಸಮಯವಿರಲಿಲ್ಲ, ಉತ್ಸಾಹವೂ ಕುಂಠಿತು. ಆದರೆ ಈಗ ಒಂದು ಹೊಸ ರೂಪದಲ್ಲಿ ಸಂಘದ ಸಿ–ಗ್ರೂಪ್ ಮಾಡಿದ್ದಾರೆ. ಹೊಸ ರೀತಿಯ ಇಂಟರ್‍ಯಾಕ್ಷನ್, ಐ.ಐ.ಟಿ. ಸಭಾಂಗಣಕ್ಕೆ ಹೆಚ್ಚು ಹಣ ವಿಧಿಸಿದರು. ಸಾಂಸ್ಕೃತಿಕ ಕಾರ್ಯಕ್ರಮ ನಿಂತಿತು. ಪ್ರೋತ್ಸಾಹಿಸುತ್ತಿದ್ದ ಹಿರಿಯರು ನಿವೃತ್ತಿ



ಹೊಂದಿ ಒಳನಾಡಿಗೆ ಮರಳಿದರು. ಕನ್ನಡ ಅಧ್ಯಾಪಕರೂ ಕಡಿಮೆಯಾದರು. ಹೊಸ ಪೀಳಿಗೆ ಮೌಲ್ಯಗಳು ಬದಲಾದುವು. ಹೀಗೆ 'ಭೂತ' ಚಟುವಟಿಕೆಗಳನ್ನು ಮೆಲುಕು ಹಾಕುವಂತಾಯಿತು. ಭವಿಷ್ಯವೂ ಚಟುವಟಿಕೆಯಿಂದಿರಲೆಂದು ಹಾರೈಸೋಣ, ಪ್ರೋತ್ಸಾಹಿಸೋಣ.

❑ **ಪ್ರೊ. ಎಸ್. ಶ್ರೀನಿವಾಸ ಮೂರ್ತಿ, ಐ.ಐ.ಟಿ. ನವದೆಹಲಿ**

# ಯು. ಪ್ರಭಾಕರ ರಾವ್ ಒಂದು ನೆನಪು

**ಕಳೆದ ವರ್ಷ ಸೆಪ್ಟೆಂಬರ್ 14ರಂದು ನಿಧನರಾದ ಯು. ಪ್ರಭಾಕರ ರಾವ್ ಅವರ ನೆನಪಿನಲ್ಲಿ ಈ ಲೇಖನವನ್ನು ಕಳುಹಿಸಿದ ಲೇಖಕರಿಗೆ ವಂದನೆಗಳು.**

ಪ್ರಭಾಕರ ರಾವ್ ನಿಜಕ್ಕೂ ಒಬ್ಬ ಮೇಧಾವಿಯಾಗಿದ್ದರು. ಆಧುನಿಕ ರಂಗದಲ್ಲಿ ನವೀನ ಪರಿಕಲ್ಪನೆಗಳನ್ನು ಪ್ರಯೋಗಿಸಲು ಕನ್ನಡ ಭಾರತೀ ಅವರಿಗೆ ಒಂದು ಸರಿಯಾದ ವೇದಿಕೆಯನ್ನು ಒದಗಿಸಿತು. ಅದು ಪರಿಕರ ವಿನ್ಯಾಸವಿರಲಿ, ರಂಗವಿನ್ಯಾಸವಿರಲಿ, ಸಂಗೀತ, ನಟನೆ ಯಾವುದೇ ಇರಲಿ, ನಿರ್ದೇಶನದ ಬಗ್ಗೆ ಅವರಿಗೆ ಅತೀವವಾದ ಒಲವಿತ್ತು. ಅವರು ಈ ಎಲ್ಲಾ ವಿಭಾಗಗಳಲ್ಲಿ ಒಬ್ಬ ಅದ್ಭುತ ಕಲ್ಪನೆ ಉಳ್ಳವರಾಗಿದ್ದರು. ಅವರೊಂದಿಗೆ ಒಡನಾಡಿದ ನಾನು ಧನ್ಯನೆಂದುಕೊಳ್ಳುತ್ತೇನೆ. ನಾಟಕಗಳ ಒಳಹರಿವನ್ನು ಅರಿತು ನಟನೆಯಲ್ಲಿ ಅದನ್ನು ಹೊರ ತರುವುದನ್ನು ನಾನು ಅರ್ಥೈಸಿಕೊಳ್ಳುವುದಕ್ಕೆ ಕಾರಣೀಭೂತರೇ ಅವರು. ಯಾವುದೇ ಲೇಖಕನ ಕೆಲಸಗಳನ್ನು (ಎಷ್ಟು ಸಾಧ್ಯವೋ ಅಷ್ಟು) ಅಧ್ಯಯನ ಮಾಡಿ ಅವರ ತತ್ವಶಾಸ್ತ್ರವನ್ನು ಸರಿಯಾಗಿ ಅರ್ಥೈಸಿಕೊಂಡು ಮುಂದೆ ಆತನ ನಾಟಕಗಳನ್ನು ಆಡಲು ಪ್ರಯತ್ನಿಸುವ ಅಗತ್ಯವಿರುತ್ತದೆ ಎಂದು ಹೇಳಿ ನನ್ನಲ್ಲಿ ಅಧ್ಯಯನದ ಆಸಕ್ತಿ ಹುಟ್ಟಿಸಲು ಮೂಲಕಾರಣೀಭೂತರು ಶ್ರೀ ಪ್ರಭಾಕರ ರಾವ್. ಒಬ್ಬ ನಟನಾಗಿ ನನಗೆ ಇಂದಿಗೂ ಇದೇ ಸಹಾಯ ಮಾಡುತ್ತಿದೆ. ನನ್ನ ನಟನಾ ವೃತ್ತಿಗೆ ಮತ್ತು ನನ್ನಮಟ್ಟಿಗೆ ಎಲ್ಲವೂ ಆಗಿದ್ದ ಈ ವ್ಯಕ್ತಿಗೆ ನನ್ನ ಮಿಲಿಟರಿ ಸೆಲ್ಯೂಟ್ !

**ಅವರೊಂದಿಗೆ ನನ್ನ ಅನುಭವಗಳನ್ನು ಹೇಳುವುದಾದರೆ :**

1. ಅವರೊಬ್ಬ ಆತ್ಮೀಯ ವ್ಯಕ್ತಿಯಾಗಿದ್ದು ನಿಜ, ಆದರೆ ಒಮ್ಮೆ ಕೈಯಲ್ಲಿ ಸಿಗರೇಟು ಹಿಡಿದು ನಿರ್ದೇಶನದ ಕುರ್ಚಿಯಲ್ಲಿ ಕುಳಿತಾಗ ಅವರೊಬ್ಬ ಬೇರೆಯೇ ಆದ ವ್ಯಕ್ತಿಯಾಗಿಬಿಡುತ್ತಿದ್ದರು. ನಾಟಕಗಳ ತಾಲೀಮಿನಲ್ಲಿ ಅವರು ಎಷ್ಟು ಮೈಮರೆಯುತ್ತಿದ್ದರೆಂದರೆ ಆ ಕ್ಷಣದಲ್ಲಿ ತಮ್ಮ ಸುತ್ತಮುತ್ತಲಿನ ಜನರಿಗೆ ತಾವು ಯಾವ ರೀತಿ ಪರಿಣಾಮ ಬೀರುತ್ತಿದ್ದೇನೆ ಎಂಬುದರ ಪರಿವೆಯೇ ಇರುತ್ತಿರಲಿಲ್ಲ. ಇದು ಕೆಲವು ಬಾರಿ ನಿರ್ವಹಿಸುವುದಕ್ಕೆ ಕಷ್ಟ ಎನಿಸುವಷ್ಟರ ಮಟ್ಟಿಗೆ ಸಮಸ್ಯೆ ಉಂಟುಮಾಡುತ್ತಿತ್ತು. ನಾಟಕ ಮುಂದುವರಿಯುವುದೇ ಇಲ್ಲ ಎನ್ನುವಷ್ಟರ ಮಟ್ಟಿಗೆ ಬಂದಂಥ ಘಟನೆಗಳೂ ಇವೆ. ಆದರೆ ಸಮಯಕ್ಕೆ ಸರಿಯಾಗಿ ಎಂ.ವಿ. ನಾರಾಯಣ ರಾವ್ ಅವರ ಹಸ್ತಕ್ಷೇಪದಿಂದ ಪರಿಸ್ಥಿತಿ ತಿಳಿಗೊಂಡು ಆ ನಾಟಕಗಳು ಸಾರ್ಥಕ ಅಂತ್ಯ ಕಾಣುತ್ತಿದ್ದವು ಮತ್ತು ಮುಂದಿನ ನಾಟಕದ ತಯಾರಿಯಲ್ಲಿ ಎಲ್ಲರೂ ಸಿದ್ಧರಾಗಿ ನಿಲ್ಲುತ್ತಿದ್ದರು–ಅದೇ ನಿರ್ದೇಶಕನ ನಿರ್ದೇಶನದಲ್ಲಿ ಏನೂ ಆಗೇ ಇಲ್ಲ ಅನ್ನುವ ಹಾಗೆ.
2. 'ನಾನೇ ಬಿಜ್ಜಳ' ನಾಟಕದ ಮೊದಲ ಪ್ರದರ್ಶನಕ್ಕೆ ಕೇವಲ 5ದಿನಗಳು ಬಾಕಿ ಉಳಿದಿವೆ. ಬಿಜ್ಜಳನ ಪಾತ್ರ ನಾನೇ ಮಾಡುವವನಿದ್ದೆ. ಅಲ್ಲಿಯವರೆಗೆ ನನ್ನ ಧ್ವನಿಯ ಏರಿಳಿತಗಳನ್ನು ಸರಿಯಾಗಿ ನಿಯಂತ್ರಿಸಲು ನನ್ನ ಗಂಟಲನ್ನು ಚೆನ್ನಾಗಿ ಜೋಪಾನ ಮಾಡಿಕೊಂಡಿದ್ದೆ. ಅದೇಕೋ ಪ್ರಭಾಕರ ರಾಯರು ನನ್ನ ಧ್ವನಿಯನ್ನು ನನ್ನ ಶಕ್ತಿ ಮೀರಿ ಏರಿಸಲು ಹೇಳಿದರು. ನನ್ನ ಶಕ್ತಿಮೀರಿ ಧ್ವನಿ ಏರಿಸುವುದರಿಂದ ಧ್ವನಿಯ ಮೇಲಿನ ನಿಯಂತ್ರಣವನ್ನು ಸಂಪೂರ್ಣವಾಗಿ ಕಳೆದುಕೊಳ್ಳಬಹುದು ಎಂದು ರಾಯರಿಗೆ ಹೇಳಿದಾಗ ಅವರು ನನ್ನ ಮಾತನ್ನು ತಳ್ಳಿಹಾಕಿದರು. ನಾನೂ ನಿಜವಾದ ಸೈನಿಕನ ಹಾಗೆ ಅವರ ಆಜ್ಞೆಗಳನ್ನು ಪಾಲಿಸಿದೆ. ಮರುದಿನ ಬೆಳಿಗ್ಗೆ ಎದ್ದಾಗ ನನಗೆ ನನ್ನ ಧ್ವನಿ ಕಳೆದುಕೊಂಡೆನೋ ಎನ್ನುವ ಅನುಭವ. ನಾನು ಡಾಕ್ಟರ್‌ರನ್ನು ಕೇಳಿದಾಗ ಅವರು ಒಂದು ತಿಂಗಳ ವಿಶ್ರಾಂತಿಯಿಂದ ಸರಿಹೋಗಬಹುದು ಎಂದು ಸಲಹೆ ನೀಡಿದರು. ಅದಾಗಲೇ ಒಂದು ತಿಂಗಳ ತಾಲೀಮು ನಡೆದು ಹೋಗಿತ್ತು. ಯಾರು ಏನೆಲ್ಲ ಹೇಳಿದರೋ ಅದೆಲ್ಲಾ ಔಷಧಿ ಮಾಡಿದೆ. ಎಂ.ವಿ. ನಾರಾಯಣ ರಾವ್ ಕರೋಲ್‌ಬಾಗಿನಿಂದ ನಾನಿದ್ದ ಜನ್‌ಪಥಕ್ಕೆ ದಿನಾಲೂ ಆಯೋಡಿನ್ ಹಚ್ಚಲು ಬರುತ್ತಿದ್ದರು. ಇವೆಲ್ಲವುಗಳಿಂದ ಏನೂ ಪರಿಣಾಮ ಕಾಣಲಿಲ್ಲ. ಕೊನೆಯ ಕೆಲವು ದಿನಗಳ ತಾಲೀಮಿನಲ್ಲಿ ನಾನು ಮೂಕಾಭಿನಯ ಮಾಡಿದೆ. ಮೊದಲ ಪ್ರದರ್ಶನದಲ್ಲಿ ನನ್ನ ಧ್ವನಿಯ ಹೊರತಾಗಿ ಉಳಿದೆಲ್ಲವೂ ಚೆನ್ನಾಗಿ ನಡೆದವು. ಪ್ರಭಾಕರ ರಾವ್ ನನ್ನಲ್ಲಿ ಕ್ಷಮೆ ಕೇಳಿದರು. ಆದರೆ ಸುದ್ದಿ ಪತ್ರಿಕೆಗಳಲ್ಲಿ ಮತ್ತು ನಿಯತಕಾಲಿಕೆಗಳಲ್ಲಿ ನಾಟಕವನ್ನು ಹೊಗಳಲಾಗಿತ್ತು. ಅದರಲ್ಲೂ ನನ್ನ ಧ್ವನಿಯ ಬದಲಾವಣೆಯನ್ನು ಮತ್ತು ಧ್ವನಿಯ ಮೇಲಿನ ಹಿಡಿತವನ್ನು ಹೊಗಳಿ ಬರೆಯಲಾಗಿತ್ತು. ನಾನು ಮತ್ತು ಪ್ರಭಾಕರ ರಾವ್ ಹೊಟ್ಟೆ ಹುಣ್ಣಾಗುವಂತೆ ನಕ್ಕೆವು. ಆ ನಗುವಿನ ಸುಖ ಹೆಚ್ಚು ದಿನ ಇರಲಿಲ್ಲ. ನನ್ನ ಧ್ವನಿಪೆಟ್ಟಿಗೆ ಶಾಶ್ವತವಾಗಿ ಕೆಟ್ಟು ಹೋಯಿತು. ಪ್ರಭಾಕರ ರಾವ್ ತುಂಬಾ ಬೇಸರ ಪಟ್ಟುಕೊಂಡರು. ಅದೃಷ್ಟವಶಾತ್ ಆ ತೊಂದರೆ ಆಗಾಗ ಗಂಟಲು ಸರಿಪಡಿಸಿಕೊಳ್ಳುವಷ್ಟಕ್ಕೇ ಸೀಮಿತವಾಯ್ತು. ಇದು ನನ್ನ ನಟನೆಗೆ ಯಾವುದೇ ಪರಿಣಾಮ ಬೀರಲಿಲ್ಲ.

ಅವರು ನಮ್ಮನ್ನಗಲುವ ಕೆಲವು ದಿನ ಮೊದಲು ಮಂಗಳೂರಿಗೆ ನಾನು ಅವರನ್ನು ಭೇಟಿ ಮಾಡಲು ಹೋದಾಗ ಇವೆಲ್ಲವೂ ನೆನಪಿಗೆ ಬಂದವು. ಅವರು ವಿಶೇಷವಾಗಿ ನನ್ನ ಧ್ವನಿಪೆಟ್ಟಿಗೆಯ ಬಗ್ಗೆ ವಿಚಾರಿಸಿದರು. ಈಗ ಅವರಿಲ್ಲ. ಆದರೆ ಅವರು ಇದನ್ನ ಕೇಳಿ ನಗುತ್ತಿರಬಹುದು. . . . . .

❑ **ದತ್ತಣ್ಣ (ಎಚ್.ಜಿ. ದತ್ತಾತ್ರೇಯ)**

**ಭಾಷಾಂತರಿತ ಲೇಖನ : ಸಂತೋಷ್ ಕುಮಾರ್ ಉಪಾಧ್ಯಾಯ**

# ಅರ್ಪಣೆ ಯಾರಿಗೆ...?

"ವೆಂಕಟ್, ಟೈಮೆಷ್ಟಾಗಿದೆಯೋ"

"ಒಂದು ಗಂಟೆಯಾಗುತ್ತಿದೆ ಚಿಕ್ಕಪ್ಪಾ..." ಕೈಗಡಿಯಾರವನ್ನು ನೋಡಿ ಹೇಳಿದ ವೆಂಕಟ್.

"ನಾವು 'ಉಯ್ಯೂರು' ತಲುಪಿದಂತಿದೆ..." ಕಾರಿನ ಕಿಟಕಿಯ ಬಾಗಿಲಿನಿಂದ ಷುಗರ್ ಫ್ಯಾಕ್ಟರಿಯತ್ತ ನೋಡುತ್ತಾ ಹೇಳಿದ ಸುಬ್ಬಾರಾವ್.

"ಹೌದ್ಸಾರ್" ಎಂದ ಡ್ರೈವರ್.

"ಸೆಂಟರ್‌ನಲ್ಲಿ ನಿಲ್ಸಪ್ಪಾ...ಟೀ ಕುಡಿಯೋಣಂತೆ..."

"ಆಯ್ತು ಸಾರ್..."

ಸ್ವಲ್ಪಹೊತ್ತಿನಲ್ಲಿ ಕಾರು ಉಯ್ಯೂರು ಸೆಂಟರ್‌ನಲ್ಲಿ ನಿಂತಿತು. ದೀಪಗಳ ಬೆಳಕಿನಲ್ಲಿ ಆ ಸ್ಥಳವು ಹಾಡುಹಗಲಿನಂತೆ ಕಂಡಿತಾಗಲಿ, ಎಲ್ಲಿಯೂ ಜನಸಂಚಾರವು ಇರಲಿಲ್ಲ. 'ಕರ್ಫ್ಯೂ' ಸಂದರ್ಭದಲ್ಲಿಯಂತೆ ಅಂಗಡಿಗಳೆಲ್ಲವೂ ಮುಚ್ಚಿಕೊಂಡಿದ್ದವು. ಕಿಟಕಿಯ ಗಾಜನ್ನು ಕೆಳಗೆ ಇಳಿಸಿ ಎಲ್ಲ ಕಡೆಯೂ ಪರೀಕ್ಷೆಯಾಗಿ ನೋಡಿದ ಸುಬ್ಬಾರಾವ್.

"ವೆಂಕಟ್, ಎಲ್ಲಿಯೂ ಟೀ ಅಂಗಡೀನೇ ಕಾಣ್ತಾ ಇಲ್ಲ ಕಣೋ..."

"ಚಿಕ್ಕಪ್ಪಾ, ಅರ್ಧರಾತ್ರಿ ಸಮಯದಲ್ಲಿ ಯಾರಾದರೂ ಟೀ ಅಂಗಡಿ ಯಾಕೆ ತೆರೆದಿಡ್ತಾರೆ"

"ತುಂಬಾ ಚಳಿಯಾಗ್ತಿದೆ ಕಣೋ...ಟೀ ಕುಡಿಯದಿದ್ದರೆ ಮೈಯಲ್ಲಿ ಕಾವೇ ಏರೋಲ್ಲ"

"ಈಗ ನಮಗೋಸ್ಕರ ಟೀ ಯಾರು ಮಾಡಿಕೊಡ್ತಾರೆ?"

"ಈಗ ನೆನಪಾಯಿತು ನೋಡು...ಇಲ್ಲಿ ಚಲಪತಿರಾವ್ ಅಂತ ನಮ್ಮ ಶಿಷ್ಯನೊಬ್ಬನಿರಬೇಕು. ಡ್ರೈವರ್ ಕಾರನ್ನು ಕೊಂಚ ಹಿಂದಕ್ಕೆ ತಿರುಗಿಸಿ ಬಲಗಡೆಗೆ ಎರಡನೇ ಓಣಿಯೊಳಗೆ ತೊಗೊಂಡುಹೋಗು!"

"ಆಯ್ತು ಸಾರ್" ಎನ್ನುತ್ತಾ ಡ್ರೈವರ್ ಕಾರನ್ನು ಹಿಂದಕ್ಕೆ ತಿರುಗಿಸಿದ.

ಕಾರು ಆ ಓಣಿಯೊಳಗೆ ಹೊರಳಿದೊಡನೆ "ಸ್ವಲ್ಪ ಮೆಲ್ಲಗೆ ನಡೆಸು" ಹೊರಗಡೆ ಮನೆಗಳತ್ತ ನೋಡುತ್ತಾ ಹೇಳಿದ ಸುಬ್ಬಾರಾವ್. ಕಾರು ನಿಧಾನವಾಗಿ ಚಲಿಸುತ್ತಿದ್ದಾಗ ಇದ್ದಕ್ಕಿದ್ದಂತೆ "ಆ...ಇದೇ...ಇಲ್ಲೇ ನಿಲ್ಲಿಸು" ಎಂದ ಜೋರಾಗಿ. ಕಾರು ನಿಂತಿತು.

"ಇಳಿಯಪ್ಪಾ" ಎಂದು ವೆಂಕಟ್‌ಗೆ ಹೇಳುತ್ತಾ ಬಾಗಿಲು ತೆರೆದು ಮೊದಲು ತಾನು ಇಳಿದ ಸುಬ್ಬಾರಾವ್. ನಂತರ ಇಳಿದ ವೆಂಕಟ್ ಚಿಕ್ಕಪ್ಪನನ್ನು ಹಿಂಬಾಲಿಸಿದ.

ಎದುರಿಗೆ ಎತ್ತರವಾದ ಗೇಟ್. ಅದರ ಬಳಿ ಮೂವರು ಕಾವಲುಗಾರರು ಕಂಡುಬಂದರು .

ಅವರಲ್ಲೊಬ್ಬ ಸುಬ್ಬಾರಾವ್ ಅವರನ್ನು ಗುರುತುಹಿಡಿದು "ನಮಸ್ಕಾರ ಡಾಕ್ಟರೇ!" ಎಂದ ಸೆಲ್ಯೂಟ್ ಹೊಡೆದು. ಅವನು ಒಂದೊಮ್ಮೆ ಹೋಂಗಾರ್ಡ್ ಆಗಿದ್ದ.

"ಏನೋ ನಮ್ಮ ಶಿಷ್ಯನು ಊರಾಗಿದ್ದಾನಾ?" ಸುಬ್ಬಾರಾವ್ ಸಲಿಗೆಯಿಂದ ಕೇಳಿದ.

"ಇದ್ದಾರೆ ಸಾರ್, ಮಾಳಿಗೆಮೇಲೆ ನಿದ್ದೆ ಹೋಗ್ತಿದ್ದಾರೆ"

"ಹೋಗಿ ಎಬ್ಬಿಸು, ನಾನು ಬಂದಿರುವೆನೆಂದು ಹೇಳು"

"ಹಾಗೇ ಆಗ್ಲೀ ಸಾರ್...ಮೊದಲು ನೀವು ಒಳಗೆ ಬಂದು ಕೂತ್ಕೊಳ್ಳಿ" ಎನ್ನುತ್ತಾ ಗೇಟ್ ತೆರೆದು ಒಳಗೆ ಕರೆದೊಯ್ದ. ವೆಂಕಟ್ ಎಲ್ಲ ದಿಕ್ಕುಗಳತ್ತ ಆಶ್ಚರ್ಯದಿಂದ ನೋಡುತ್ತಿದ್ದ.

"ಇಲ್ಲಿ ಕೂತ್ಕೊಳ್ಳಿ" ಎನ್ನುತ್ತಾ ವಿಜಿಟರ್ಸ್ ರೂಮಿನಲ್ಲಿ ಕೂಡಿಸಿದ.

ವೆಂಕಟ್ ಗೋಡೆ ಮೇಲಿದ್ದ ತೈಲ ವರ್ಣಚಿತ್ರಗಳನ್ನು ನೋಡುವುದಲ್ಲಿ ತಲ್ಲೀನನಾಗಿದ್ದಾಗ "ಗುರುಗಳಿಗೆ ನಮಸ್ಕಾರ" ಎನ್ನುತ್ತಾ ಪ್ರವೇಶಿಸಿದ ಚಲಪತಿರಾವ್. ಮುಖದಮೇಲೆ ನಿದ್ರೆಯ ಕಳೆ ಇನ್ನೂ ಹೋಗಿರಲಿಲ್ಲ.

"ಬಾರಯ್ಯಾ ಚಲಪತಿ!" ನಗುತ್ತಾ ಮಾತನಾಡಿಸಿದ ಸುಬ್ಬಾರಾವ್.

"ಏನಿಂತಹ ರಾತ್ರಿಯಲ್ಲಿ ಬಂದಿರುವಿರಿ?" ಅಲ್ಲಿದ್ದ ಒಂದು ಕುರ್ಚಿಯಲ್ಲಿ ಕೂಡುತ್ತಾ ಕೇಳಿದ ಚಲಪತಿರಾವ್. ಪಟ್ಟೆ ಲುಂಗಿ, ಉದ್ದ ತೋಳುಗಳ ಅಂಗಿಯನ್ನು ಧರಿಸಿದ್ದ. ಆತನದು ಸಾಧಾರಣ ಮೈಕಟ್ಟು.

"ಮಚೀಲಿಪಟ್ಣಂನಲ್ಲಿರುವ ಬಳಗದವರ ಮನೆಗೆ ಹೋಗಿ ಬರುತ್ತಿದ್ದಾಗ...ಉಯ್ಯೂರು ಬಂದೊಡನೆಯೇ ನೀನು ನೆನಪಿಗೆ ಬಂದೆ ಕಣಪ್ಪಾ..."

"ಎಷ್ಟೇಯಾದರೂ ನಿಮ್ಮ ಪ್ರಿಯಶಿಷ್ಯನಲ್ವೇ?" ನಕ್ಕ ಚಲಪತಿರಾವ್.

"ಅದರಲ್ಲಿ ಅನುಮಾನವೆಲ್ಲಿದೆ? ಅದು ಸರಿ ಅನ್ನು...ಚಲಪತೀ... ಒಳ್ಳೇ ಟೀ ಕುಡಿಸಯ್ಯಾ...ನಿಮ್ಮ ಮನೆಯಲ್ಲಿ ಟೀ ಕುಡಿದು ತುಂಬಾ ಕಾಲವಾಯಿತು"

"ಅದೇನು ಮಹಾ...ಯಾರೋ ಅಲ್ಲಿ? ರಾಂಬಾಬೂ..." ಕೂಗಿದ.

"ಸಾರ್..."

"ಎಲ್ಲರಿಗೂ ಟೀ..."

"ಹಾಗೇ ಆಗ್ಲೀ ಸಾರ್" ಎಂದು ಹೊರಟುಹೋದ ರಾಂಬಾಬು.

"ಹೇಳಿ ಗುರುಗಳೇ...ಈ ನಡುವೆ ನಿಮ್ಮ ವಿಶೇಷಗಳಾವೂ ತಿಳಿದು ಬರುತ್ತಿಲ್ಲ" ಎಂದ ಆರಾಮವಾಗಿ ಹಿಂದಕ್ಕೆ ವಾಲುತ್ತಾ ಚಲಪತಿರಾವ್.

"ವಿಶೇಷಗಳು ತುಂಬಾನೇ ಇವೆ. ಆರೋಗ್ಯ ಪರಿರಕ್ಷಣೆಯ ವಿಷಯವಾಗಿ ಸಾಲಾಗಿ ಪುಸ್ತಕಗಳು ಬರೆಯುತ್ತಿರುವೆ..."

"ತುಂಬಾ ಸಂತೋಷ"

"ಮೊದಲ ಪುಸ್ತಕವನ್ನು ಗೋವಿಂದರಾವ್ ಅವರಿಗೆ ಅರ್ಪಣೆ ಮಾಡಿದೆ. ಅವರು ಹೋಗ್ಬಿಟ್ಟರು..."

"ಏನೂ...ಗೋವಿಂದರಾವ್ ಅವರು ಕಾಲವಾದರೇ?!"

"ನನ್ನ ಪುಸ್ತಕವನ್ನು ಅರ್ಪಣೆ ಮಾಡಿದಮೇಲೆ ಹೋಗ್ಬಿಟ್ರು. ಅದೇ ನನ್ನ ವ್ಯಥೆ. ಇನ್ನು ಎರಡನೇ ಪುಸ್ತಕವನ್ನು ಬಿಜಿನೆಸ್ ಮ್ಯಾಗ್ನೇಟ್ ಪಾಪಾರಾವ್ ಅವರಿಗೆ ಕೊಟ್ಟೆ"

"ಏನು...ಅಂಕಿತವೇ?!"

"ಹೌದು. ಅರ್ಪಣೆ ಮಾಡದಿದ್ದರೆ ನನಗೆ ತೋಚುವುದಿಲ್ಲ. ಪಾಪಾರಾವ್ ಕೂಡಾ ಅರ್ಪಣೆ ಸ್ವೀಕರಿಸಿದ ಹತ್ತುದಿವಸಗಳಲ್ಲಿ ಹೋಗ್ಬಿಟ್ರು..."

"ಏನೂ ಪಾಪಾರಾವ್ ಕೂಡಾ?!"

"ಅದೇ ನನ್ನ ವ್ಯಥೆ! 'ಜಾತಸ್ಯ ಹೀ ಧೃವೋ ಮೃತ್ಯುಃ'...ಏನ್ ಮಾಡ್ಲಿಕ್ಕಾಗುತ್ತೆ. ಹುಟ್ಟಿದವನು ಸಾಯಲೇಬೇಕಲ್ಲವೇ? ಇನ್ನು ನನ್ನ ಮೂರನೇ ಪುಸ್ತಕವನ್ನು ಲಾಯರ್ ವಿಶ್ವೇಶ್ವರರಾವ್ ಅವರಿಗೆ ಅರ್ಪಣೆ ಮಾಡಿದೆ..."

"ಗ್ರಹಚಾರ ಕಡಿಮೆಯಾಗಿ ಆತನು ಸಹ ಹೋಗ್ಬಿಟ್ನಾ?!"

ಅನುಮಾನದಿಂದ ಕೇಳಿದ ಚಲಪತಿರಾವ್.

"ಅದೇ ನನ್ನ ವ್ಯಥೆ! " ನಿಟ್ಟುಸಿರುಬಿಡುತ್ತಾ ಹೇಳಿದ ಸುಬ್ಬಾರಾವ್.

ಅಷ್ಟರಲ್ಲಿ ರಾಂಬಾಬು ಟೀ ಕಪ್ಪುಗಳನ್ನು ಹಿಡಿದು ಬಂದ. ಎಲ್ಲರಿಗೂ ಒಂದೊಂದು ಕಪ್ಪನ್ನು ಕೊಟ್ಟ. ಬಿಸಿ ಬಿಸಿ ಟೀ ಕುಡಿದನಂತರ ಸುಬ್ಬಾರಾವ್‌ನ ಮೈಯಿಂದ ಚಳಿಯು ಮಾಯವಾಗಿ ಹುಷಾರು ಕಾಣಿಸಿಕೊಂಡಿತು.

"ಊಂ...ಆಮೇಲೆ?!" ಆಸಕ್ತಿಯಿಂದ ಕೇಳಿದ ಚಲಪತಿರಾವ್.

"ಆಮೇಲೇನಿದೆ? ಈಗ ನಾಲ್ಕನೇ ಪುಸ್ತಕ ಸಿದ್ಧವಾಗಿದೆ. ಅದನ್ನು ನಿನಗೆ ಅರ್ಪಣೆ ಕೊಡಬೇಕೆಂದು ಬಯಸಿರುವೆನು..." ಆರಾಮವಾಗಿ ಸಿಗರೇಟನ್ನು ಹೊತ್ತಿಸಿಕೊಳ್ಳುತ್ತಾ ಹೇಳಿದ ಸುಬ್ಬಾರಾವ್.

ಇದ್ದಕ್ಕಿದ್ದಂತೆ ಚಲಪತಿರಾವ್‌ನ ಕೈಯಲ್ಲಿದ್ದ ಟೀ ಕಪ್ಪು ಜಾರಿ ಕೆಳಗೆಬಿದ್ದು ಫಳ್ಳೆಂದು ಒಡೆಯಿತು.

"ನಾನೇನು ದ್ರೋಹ ಮಾಡಿರುವೆ ಗುರುಗಳೇ ನಿಮಗೆ...ನಿಮ್ಮ ಹೆಸರನ್ನು ಹೇಳಿಕೊಂಡು ಹೀಗೇ ಕ್ಷೇಮವಾಗಿ ಬದುಕಲುಬಿಡಿ...ಆ ಅರ್ಪಣೆ ಯಾವುದೋ ನನ್ನ ವಿರೋಧ ಪಕ್ಷದ ನಾಗೇಶ್ವರರಾವ್‌ಗೆ ಕೊಡಿ...ನಿಮಗೆ ಪುಣ್ಯವಿರುತ್ತೆ" ಕೈಗಳನ್ನು ಜೋಡಿಸಿದ ಚಲಪತಿರಾವ್.

"ಅಷ್ಟೇಅಂತೀಯಾ?!" ಸುಬ್ಬಾರಾವ್ ಕರುಣೆಯಿಂದ ಕೇಳಿದ.

"ದಯಮಾಡಿ ನನ್ನನ್ನು ನಿಮ್ಮ ಲಿಸ್ಟ್‌ನಿಂದ ತೆಗೆದುಬಿಡಿ...ಇದೋ ಈ ಐದುಸಾವಿರಗಳನ್ನು ಗುರುದಕ್ಷಿಣೆಯಾಗಿ ಇಟ್ಟುಕೊಳ್ಳಿ" ಎನ್ನುತ್ತಾ ಸುಬ್ಬಾರಾವ್ ಅವರ ಜೇಬಿನೊಳಗೆ ನೋಟುಗಳನ್ನು ಕುಕ್ಕಿದ ಚಲಪತಿರಾವ್.

"ಸರಿ...ಏನ್ ಮಾಡ್ಲಿಕ್ಕಾಗುತ್ತೆ...ನನ್ನ ಪುಸ್ತಕವನ್ನು ನಿನಗೆ ಅರ್ಪಣೆ ಮಾಡುವ ಭಾಗ್ಯ ಇಲ್ಲವಾಯಿತು. ಈಗಾಗಲೇ ತುಂಬಾ ರಾತ್ರಿಯಾಗಿದೆ. ಬರ್ತೇನೆ..." ಎನ್ನುತ್ತಾ ಎದ್ದ ಸುಬ್ಬಾರಾವ್.

ಚಲಪತಿರಾವ್ ಗೇಟಿನವರೆಗೂ ಬಂದು ಬೀಳ್ಕೊಟ್ಟ.

ಕಾರು ವಿಜಯವಾಡದತ್ತ ಓಡತೊಡಗಿದಾಗ ವೆಂಕಟ್‌ಗೆ ಅನುಮಾನ ಬಂದು ಕೇಳಿದ – "ಚಿಕ್ಕಪ್ಪಾ, ನೀವಿಷ್ಟು ಪುಸ್ತಕಗಳನ್ನು ಯಾವಾಗ ಬರೆದಿರಿ?!"

ಸುಬ್ಬಾರಾವ್ ನಗುತ್ತಾ "ಅಂತಹ ಬುದ್ಧಿಯಿಲ್ಲದ ಪ್ರಶ್ನೆಗಳನ್ನು ಮಾಡಬೇಡ ಕಣೋ. ಜೀವನವೇ ದೊಡ್ಡ ಫಿಕ್ಷನ್. ಅದರಲ್ಲಿ ಇದೊಂದು ಸಣ್ಣ ಫಿಕ್ಷನ್. ನಾನು ನಿಜವಾಗಿಯೂ ಪುಸ್ತಕಗಳನ್ನು ಬರೆದು ಯಾರಿಗಾದರೂ ಅರ್ಪಣೆ ಮಾಡಿದರೆ...ಖಚಿತವಾಗಿ ನಾನು ಹೇಳಿದಹಾಗೆಯೇ ನಡೆಯುತ್ತದೆ. ಹಾಗೆಂದೇ ಪ್ರಜಾಕ್ಷೇಮವನ್ನು ಬಯಸಿ ಪುಸ್ತಕಗಳನ್ನು ಬರೆಯುತ್ತಿಲ್ಲ! ಬರೆಯಬೇಕೆಂದು ಅನಿಸಿದಾಗಲೆಲ್ಲ ಬರೆದಹಾಗೆಯೇ ಹೇಳಿಕೊಳ್ಳುತ್ತಿರುತ್ತೇನೆ. ಈಗ ನಮಗೆ ಒಂದು ಐದು ಸಾವಿರಗಳು ಪುಗಸಟ್ಟೆಯಾಗಿ ಸಿಕ್ಕಿತಲ್ವಾ? ಅದೂ ನನ್ನ ಫಿಕ್ಷನ್‌ಗೆ ಲಾಭ. ಮತ್ತಿನ್ನಾವ ಪ್ರಶ್ನೆಯನ್ನೂ ಕೇಳದೇ ಸೀಟಿನಲ್ಲಿ ಹಿಂದಕ್ಕೆ ಜಾರಿಕೊಂಡು ನಿದ್ದೆಮಾಡು. ಡ್ರೈವರ್ ! ನಾನು ಕೂಡಾ ಮಲಗ್ತೇನೆ. ನೀನು ಮಾತ್ರ ನಿದ್ದೆಹೋಗದೇ...ವಿಜಯವಾಡ ಸೇರಿದನಂತರ ನಮ್ಮನ್ನು ಎಬ್ಬಿಸು... ಆಯ್ತಾ?" ಅಂದರು.

"ಆಯ್ತು ಸಾರ್" ಎಂದ ಡ್ರೈವರ್ ಆಕಳಿಸುತ್ತಲೇ.

ಕಾರು ವಿಜಯವಾಡದ ಕಡೆಗೆ ವೇಗವಾಗಿ ಓಡುತ್ತಲೇ ಇತ್ತು.

***

ಮೂಲ ತೆಲುಗು : ಕಾಟೂರಿ ರವೀಂದ್ರ ತ್ರಿವಿಕ್ರಮ್

ಅನುವಾದ : ಕೃಷ್ಣಮೂರ್ತಿ ಕಲುಮಂಗಿ

## ಅಗಲಿದ ಗೆಳತಿಗೆ

ಹೋಗಿಬಾ ಗೆಳತಿ ಹೋಗಿಬಾ. ಹೋಗಿಬಾ. .

ನಿನ್ನ ಮರೆಯಲಾಗದು ಹೋಗಿಬಾ.
ನನ್ನ ನಿನ್ನ ಸ್ನೇಹ ಇಂದು ನೆನ್ನೆಯದಲ್ಲ
ಯಾವ ಜನುಮದ ಅನುಬಂಧವೋ ನಾಕಾಣೆ.
ಮುತ್ತಿನಂತಹ ಮೂರು ಹೆಣ್ಣು ಮಕ್ಕಳ ತಾಯಿ ನೀನು

ಅದೇನು ಉತ್ಸಾಹ ನಿನ್ನಲಿ
ನಾಟ್ಯ, ತಿಳಿಹಾಸ್ಯ, ನಾಟಕ ಇವೇ ನಿನ್ನ
ಬದುಕಿನ ಹಾಸುಹೊಕ್ಕು.

ಧೈರ್ಯ, ಕೆಚ್ಚೆದೆ ನಿನ್ನ ಜೀವದುಸಿರು
ಯಾರು ಬರುವರು ನಿನ್ನ ಜಾಗಕೆ.
ಕನ್ನಡ–ಭಾರತಿಯ ಕೊರತೆ ತುಂಬಲು.
ಗೆಳತಿ–ನಿನ್ನ ನೆನಪೇ ನಮಗೆ ಸಿರಿಸಂಪತ್ತು.

ಲೀಲಾ ರಾವ್, ಬೆಂಗಳೂರು

(ದಿವಂಗತ ಜ್ಯೋತ್ಸ್ನಾ ರಾವ್ ಅವರ ನೆನಪಿನಲ್ಲಿ)


ಕರ್ನಾಟಕ ಸರ್ಕಾರ
ವಾರ್ತಾ ಇಲಾಖೆ
ಹಾಗೂ
ಕರ್ನಾಟಕ ಭವನ, ನವದೆಹಲಿ
ಸಂಯುಕ್ತ ಆಶ್ರಯದಲ್ಲಿ

**ಕರ್ನಾಟಕ ರಾಜ್ಯೋತ್ಸವ ಸಮಾರಂಭ–2012**

ದಿನಾಂಕ : 01.11.2012
ಸಮಯ : ಸಂಜೆ 5.00ಕ್ಕೆ
ಸ್ಥಳ : ದೆಹಲಿ ಕರ್ನಾಟಕ ಸಂಘದ ಸಭಾಂಗಣ ರಾವ್ ತುಲಾರಾಂ ಮಾರ್ಗ, ಸೆಕ್ಟರ್–12, ಆರ್.ಕೆ.ಪುರಂ, ನವದೆಹಲಿ–110022

ರಂಗಾಯಣದ ಕಲಾವಿದರಿಂದ ಹಾಸ್ಯಮಯ ನಾಟಕ

**"ಕೃಷ್ಣೇಗೌಡರ ಆನೆ"**

ರಚನೆ : ಪೂರ್ಣಚಂದ್ರ ತೇಜಸ್ವಿ
ಹಾಗೂ

**ನೃತ್ಯರೂಪಕ, ಕಂಸಾಳೆ ಹಾಗೂ ಸುಗಮ ಸಂಗೀತ**

ತಮಗೆ ಸ್ವಾಗತ

ಕಾರ್ಯಕ್ರಮದ ನಂತರ ಭೋಜನದ ವ್ಯವಸ್ಥೆ ಇದೆ

# ಪ್ರೇಮ ಸೌಧಕ್ಕೆ ಯಮುನೆಯ ಹಾದಿ

ಜನಸಂಖ್ಯೆ ಭಾರತಕ್ಕೆ ದೊಡ್ಡ ಸಮಸ್ಯೆ ಎನ್ನುವುದು ಈಗ ಹೆಚ್ಚು ಕಾಡುವುದಿಲ್ಲ. ಅದನ್ನು ಮಾನವ ಸಂಪನ್ಮೂಲ ಎಂದು ಭಾವಿಸಿ ಸಮಾಧಾನ ಮಾಡಿಕೊಳ್ಳುವುದನ್ನು ದೇಶ ರೂಢಿಸಿಕೊಳ್ಳತೊಡಗಿದೆ. ಈಗ ಏನಿದ್ದರೂ ವಾಹನ ದಟ್ಟಣೆಯದೇ ಸಮಸ್ಯೆ. ಎಲ್ಲಿಂದ ಎಲ್ಲಿಗೆ ಹೊರಟರೂ ಟ್ರಾಫಿಕ್ ಜಾಮ್. ರಸ್ತೆಯನ್ನು ಅಗಲ ಮಾಡಹೊರಟರೆ ಆ ಕಾಮಗಾರಿ ಮುಗಿಯುವ ಹೊತ್ತಿಗೇ ರಸ್ತೆ ಮತ್ತೆ ಕಿರಿದಾಗುತ್ತದೆ. ಮಹಾನಗರಗಳಿಗಷ್ಟೇ ಸೀಮಿತವಾಗಿದ್ದ ಈ ಟ್ರಾಫಿಕ್ ಸಮಸ್ಯೆ ಈಗ ಆ ನಗರಗಳಾಚೆಗೂ ಬೆಳೆದಿದೆ. ಎರಡು ನಗರಗಳ ದೂರ ಅಷ್ಟೇ ಇದ್ದರೂ ತಲುಪುವ ಸಮಯ ಮಾತ್ರ ಜಾಸ್ತಿಯಾಗುತ್ತಿದೆ. ಈ ಕಾರಣಕ್ಕಾಗಿಯೇ ಫ್ಲೈ ಓವರ್ ಬಂದವು. ಅಂಡರ್ ಪಾಸ್, ಎಕ್ಸ್‌ಪ್ರೆಸ್ ವೇ . . . ಹೀಗೆ ಪ್ರಯಾಣದ ಸಮಯ ತಗ್ಗಿಸುವ ನೂರಾರು ವಿಧಗಳು ಬಂದವು. ನಾಳಿನ ನೆಮ್ಮದಿಗಾಗಿ ನಡೆಯುವ ಹೊಸ ಪ್ರಯೋಗಗಳಿಗೊಂದು ಗರಿಯೆಂಬಂತೆ ದೇಶದ ಅತೀ ಉದ್ದದ ಎಕ್ಸ್‌ಪ್ರೆಸ್ ವೇಯೊಂದು ಈಗ ತಲೆಯೆತ್ತಿದೆ. ಅದೇ ನೋಯ್ಡಾ–ಆಗ್ರಾ ಯಮುನಾ ಎಕ್ಸ್‌ಪ್ರೆಸ್ ವೇ. ಅದು ಹೇಗಿದೆ? ಬನ್ನಿ, ಒಂದು ಸುತ್ತು ಹೋಗಿ ಬರೋಣ.

ವಿಶೇಷ ವೇ : 25 ಸಿಸಿಟಿವಿ ಕ್ಯಾಮರಾ, 25 ವಿಡಿಯೋ ಇನ್ಸಿಡೆಂಟ್ ಡಿಟೆನ್ಷನ್ ಸಿಸ್ಟಮ್, ರಸ್ತೆ ಸುರಕ್ಷತೆ ಕುರಿತ ಮಾಹಿತಿಯುಳ್ಳ 30 ಬೋರ್ಡ್‌ಗಳು, ಹವಾಮಾನ ಮಾಹಿತಿ, ಫೈರ್ ಬ್ರಿಗೇಡ್‌ಗಳು, 36 ರಕ್ಷಣಾ ವಾಹನಗಳು, ಶೌಚಾಲಯ, ಆಹಾರ ವ್ಯವಸ್ಥೆ, ಪ್ರಾಥಮಿಕ ಚಿಕಿತ್ಸೆ, 5 ಅಂಬ್ಯುಲೆನ್ಸ್, 3 ಟೋಲ್ ಪ್ಲಾಜಾ, 70 ಅಂಡರ್‌ಪಾಸ್, 50 ಚಿಕ್ಕ ಸೇತುವೆಗಳು, 5ಲಕ್ಷ ಮರಗಳು, 28 ಸರ್ವಿಸ್ ಲೇನ್‌ಗಳು.

ಮಮ್ತಾಜ್‌ಳ ನೆನಪಿಗಾಗಿ ತಾಜ್‌ಮಹಲನ್ನು ಕಟ್ಟಿದ ಷಾ ಜಹಾನ್‌ನನ್ನು ಅದೆಷ್ಟು ಪ್ರೇಮಿಗಳು ಮಾದರಿಯಾಗಿಟ್ಟುಕೊಂಡಿರಬೇಡ. ಅದಕ್ಕಾಗಿಯೇ ಜೀವನದಲ್ಲಿ ಒಮ್ಮೆಯಾದರೂ ತಾಜ್‌ಮಹಲನ್ನು ನೋಡುವ ಆಸೆ ಪ್ರೇಮಿಗಳಿಗೆ. ಯಮುನಾ ಎಕ್ಸ್‌ಪ್ರೆಸ್ ವೇಯಲ್ಲಿ ಹೊರಟರೆ ಇಂಥ ಪ್ರೇಮಿಗಳ ದಂಡೇ ಸಿಗುತ್ತದೆ. ಎಕ್ಸ್‌ಪ್ರೆಸ್ ವೇ ಬದಿಯಲ್ಲಿ ಏಕಾಂತ. ಅದು ಪ್ರೇಮಲೋಕ, ಪ್ರೇಮಿಗಳಿಗಿದು ತ್ರಿಶಂಕುವಿನ ಸ್ವರ್ಗವಿದ್ದ ಹಾಗೆ. ಸೂರ್ಯ ಮುಳುಗುವ ಹೊತ್ತಿನಲ್ಲಿ ಪ್ರೇಮಿಗಳು ತಮ್ಮದೇ ಆದ ಲೋಕದಲ್ಲಿ ಮುಳುಗಿ ಹೋಗುವ ದೃಶ್ಯ ಇಲ್ಲಿ ಸಾಮಾನ್ಯ.

ಗ್ರೇಟರ್ ನೋಯ್ಡಾದಿಂದ ಆರಂಭವಾಗಿ ಆಗ್ರಾವರೆಗಿನ 165 ಕಿ.ಮೀ. ಉದ್ದಕ್ಕೂ ಯಮುನಾ ನದಿ ದಂಡೆ. ತಾಜ್‌ಮಹಲ್ ಸೌಂದರ್ಯ ಸವಿಯಲು ಹೊರಡುವವರಿಗೆ ಈ ದಾರಿಯಲ್ಲಿ ಸಾಗುವುದು ಪ್ರಯಾಸದ ಪಯಣ. ದೆಹಲಿಯಿಂದ ಹೊರಟು ಫರಿದಾಬಾದ್, ಬಲ್ಲಬ್‌ಗಢ, ಪಲ್ವಲ್ ಮಾರ್ಗವಾಗಿ ರಾಷ್ಟ್ರೀಯ ಹೆದ್ದಾರಿ–2ರಲ್ಲಿ ದಾರಿ ಸವೆಸಿದವರು ತಾಜ್ ಮುಟ್ಟು ಹೊತ್ತಿಗೆ 'ಸಾಕಪ್ಪಾ ಸಾಕು' ಎನ್ನುವವರೇ ಹೆಚ್ಚು. ದಟ್ಟವಾದ ಟ್ರಾಫಿಕ್, ಐದು ತಾಸುಗಳ ಪ್ರಯಾಣ ಎಲ್ಲವೂ ಪ್ರೇಮಸೌಧವನ್ನು ನೋಡುವ ಖುಷಿಯನ್ನು ಕಡಿಮೆ ಮಾಡಿ ಬಿಡುತ್ತಿದ್ದವು. . . ಈಗ . . ಯಮುನಾ ಎಕ್ಸ್‌ಪ್ರೆಸ್‌ವೇ . . .

ಉತ್ತರ ಪ್ರದೇಶದಲ್ಲಿ ಹೊಸದಾಗಿ ನಿರ್ಮಾಣವಾದ ನೋಯ್ಡಾ–ಆಗ್ರಾ ಯಮುನಾ ಎಕ್ಸ್‌ಪ್ರೆಸ್ ವೇ ಮೇಲೆ ಸಾಗುವುದು ಬೆರಳು ಹಿಡಿದು ನಡೆದಂತೆ ಸಲೀಸು. ಈ ರಸ್ತೆ ತುಂಬಾ ಚೆನ್ನಾಗಿದೆ ಎಂಬ ಸುದ್ದಿ ಕಿವಿಗೆ ಬಿದ್ದಾಗ, ಆ ರಸ್ತೆಯನ್ನು ನೋಡಬೇಕೆಂಬ ಹಂಬಲ ನನ್ನಲ್ಲೂ ಕುಡಿಯೊಡೆದಿತ್ತು. ಸ್ನೇಹಿತನೊಂದಿಗೆ ಕಾರಲ್ಲಿ ಕುಳಿತು ದೆಹಲಿಯ ಪರಿ ಚೌಕನ್ನು ದಾಟಿ, 'ಯಮುನಾ ಎಕ್ಸ್‌ಪ್ರೆಸ್ ವೇ ರಸ್ತೆಗೆ ಸ್ವಾಗತ' ಎಂಬ ಬೋರ್ಡ್ ನೋಡುತ್ತಿದ್ದಂತೆಯೇ ಹೊಸ ಹುಮ್ಮಸ್ಸು ಬಂದಿತ್ತು. ತಾಜ್‌ಮಹಲ್‌ಗೆ ಹೋಗುವ ಖುಷಿಯನ್ನು ಇಮ್ಮಡಿಗೊಳಿಸುವಂತೆ ಇತ್ತು ಯಮುನಾ ಎಕ್ಸ್‌ಪ್ರೆಸ್ ವೇ. ಇದಕ್ಕೆ ತಾಜ್ ಎಕ್ಸ್‌ಪ್ರೆಸ್ ವೇ ಅಂತಲೂ ಕರೆಯುತ್ತಾರೆ. ಉದ್ದನೆಯ, ಸಪಾಟಾದ, ಕೊನೆಯೇ ಇಲ್ಲವೇನೋ ಎಂಬಂತೆ ಕಾಣುವ ಈ ರಸ್ತೆಯನ್ನು ಹಿಂದೆಂದೂ ನೋಡದಿದ್ದ ನನ್ನ ಕಣ್ಣುಗಳಿಗೆ ಹಬ್ಬ. ರಸ್ತೆಗಳು ದೇಶದ ಜೀವನಾಡಿಗಳು ಎಂಬ ಮಾತಿದೆ. ಯಮುನಾ ಎಕ್ಸ್‌ಪ್ರೆಸ್ ವೇ ಹಾಗೇ ಉತ್ತರ ಪ್ರದೇಶ ಆರ್ಥಿಕತೆಗೆ ಜೀವ ತುಂಬುತ್ತದೋ ಏನೋ ಕಾದು ನೋಡೋಣ. ಆದರೆ ಈ ನುಣ್ಣನೆಯ ರಸ್ತೆಯ ಮೇಲೆ ಕಾಲಿಡುವವರ ಜೇಬು ಸ್ವಲ್ಪ ಸಡಿಲಾಗುವುದು ಖಚಿತ. ಯಾಕೆಂದ್ರೆ ಇದು ಪುಗಸಟ್ಟೆ ಪ್ರಯಾಣವಲ್ಲ. ಬೈಕ್ ಸವಾರರು 150/– ರೂ., ನಾಲ್ಕು ಚಕ್ರದ ವಾಹನಗಳು 346/– ರೂ., ಬಸ್ಸು ಮತ್ತು ಟ್ರಕ್‌ಗಳು 1,089/– ರೂ., ಅತಿ ಭಾರದ ವಾಹನಗಳು 1,666/– ರೂ. ಟೋಲ್ (ಬಾಡಿಗೆ) ಕೊಟ್ಟು ಈ ರಸ್ತೆಯಲ್ಲಿ ಪ್ರಯಾಣ ಮಾಡಬಹುದು. ಇಷ್ಟು ಹಣ ನೀಡಲು ನೀವು ತಯಾರಿದ್ದರೆ ಯಮುನಾ ಎಕ್ಸ್‌ಪ್ರೆಸ್ ವೇ ಪ್ರಯಾಣದ ಸುಖ ಅನುಭವಿಸಬಹುದು.

ಯಮುನಾ ಎಕ್ಸ್‌ಪ್ರೆಸ್ ವೇನಲ್ಲಿ ಯಾವುದೇ ಪೆಟ್ರೋಲ್ ಅಥವಾ ಗ್ಯಾಸ್ ಸ್ಟೇಷನ್‌ಗಳಿಲ್ಲದಿರುವುದರ ಬಗ್ಗೆ ಈಗಾಗಲೇ ಹಲವು ಪ್ರಯಾಣಿಕರು ಅಸಮಾಧಾನಗೊಂಡಿದ್ದಾರೆ. ಹೀಗಾಗಿ ಪೆಟ್ರೋಲ್ ಬಂಕ್‌ಗಳನ್ನು ತೆರೆವ ಚಿಂತನೆಗೆ ಆದ್ಯತೆ ನೀಡಲು ಉತ್ತರ ಪ್ರದೇಶ ಮುಂದಾಗಿದೆ. ಇದು ಒಳ್ಳೆಯ ಬೆಳವಣಿಗೆ. ಮುಂದಿನ ದಿನಗಳಲ್ಲಿ ರಸ್ತೆ ಮಧ್ಯಭಾಗದಲ್ಲಿ ಕಾಣಸಿಗುವ ಟಪ್ಪಾಲ್ ಎಂಬ ಹಳ್ಳಿಯ ಬಳಿ ಪೆಟ್ರೋಲ್ ಬಂಕ್ ತೆರೆಯುವ ಸಾಧ್ಯತೆ ಇದೆ. ಅಲ್ಲಿಯವರೆಗೆ ಯಮುನಾ ಎಕ್ಸ್‌ಪ್ರೆಸ್ ವೇ ಮಾರ್ಗವನ್ನು ಬಯಸುವ ಮಂದಿ ಮೊದಲು ತಮ್ಮ ವಾಹನಗಳ ಇಂಧನ ಟ್ಯಾಂಕ್‌ಗಳು ಭರ್ತಿಯಾಗಿವೆಯೇ ಎಂಬುದನ್ನು ಖಾತರಿಪಡಿಸಿಕೊಳ್ಳುವುದು ಅಗತ್ಯ.



ಕಾರುಗಳಿಗೆ 100 ಕಿ.ಮೀ. ವೇಗ ಮತ್ತು ಬಸ್ಸು, ಟ್ರಕ್‌ಗಳಿಗೆ 60ಕಿ.ಮೀ. ವೇಗದ ಮಿತಿಯ ಅವಕಾಶ ನೀಡಲಾಗಿದೆ. ಹಾಗೆಯೇ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಪ್ರತಿಯೊಂದು ಟೋಲ್ ಪ್ಲಾಜಾದಲ್ಲಿ ಅಗ್ನಿಶಾಮಕ ವಾಹನಗಳು, ಅಂಬ್ಯುಲೆನ್ಸ್‌ಗಳು ದಿನದ 24 ಗಂಟೆಗಳು ಸೇವೆಗೆ ಸಿದ್ಧವಾಗಿ ನಿಂತಿವೆ. ರಸ್ತೆ ಮಧ್ಯದಲ್ಲಿ ವಾಹನ ಸಮಸ್ಯೆ ಅಥವಾ ಯಾವುದೇ ರೀತಿಯ ಸಮಸ್ಯೆಯಾದರೂ, ಪ್ರತಿ ಕಿಲೊ ಮೀಟರ್‌ವೊಂದಕ್ಕೆ ಅಳವಡಿಸಲಾಗಿರುವ ಟೆಲಿಫೋನ್ ಬೂತ್‌ನಿಂದ ತುರ್ತು ಕರೆಯ ನಂಬರ್‌ಗೆ ಫೋನಾಯಿಸಿದರೆ ಸಂಬಂಧಪಟ್ಟ ಸಿಬ್ಬಂದಿ ಆಗಮಿಸಿ, ಸಮಸ್ಯೆ ಬಗೆಹರಿಸುತ್ತಾರೆ. ಅತ್ಯಾಧುನಿಕ ವ್ಯವಸ್ಥೆಗಳುಳ್ಳ ಅಂಬುಲೆನ್ಸ್‌ಗಳಲ್ಲಿ 24ಗಂಟೆಯೂ ವೈದ್ಯರು ಲಭ್ಯ ಎಂದು ಟೋಲ್ ಪ್ಲಾಜಾದಲ್ಲಿರುವ ಅಧಿಕಾರಿಗಳು ಹೇಳುತ್ತಾರೆ. ಆ ಮೂಲಕ ರಸ್ತೆಯಲ್ಲಿನ ಪ್ರಯಾಣ ನೆಮ್ಮದಿಯ ಜೊತೆಗೆ ಸುರಕ್ಷತೆಯನ್ನೂ ನೀಡುತ್ತದೆ ಎಂದಾಯಿತು. ಪ್ರತಿ ಟೋಲ್ ಪ್ಲಾಜಾದಲ್ಲೂ ಹೋಟೆಲ್ ರೆಸ್ಟೋರೆಂಟ್‌ಗಳನ್ನು ತೆರೆಯಲಾಗಿದೆ. ಹಾಗೆಯೇ ಆಧುನಿಕ ಮಾದರಿಯ ಶೌಚಾಲಯಗಳ ವ್ಯವಸ್ಥೆಯೂ ಇರುವುದು ಗಮನಾರ್ಹ.

100ಕಿ.ಮೀ. ವೇಗದಲ್ಲಿ ಚಲಾಯಿಸುವುದು ಅಪಘಾತಕ್ಕೆ ದಾರಿ ಮಾಡುವುದಿಲ್ಲವೇ ಎಂಬ ಪ್ರಶ್ನೆ ಸಹಜ. ನಿಯಂತ್ರಣ ತಪ್ಪಿ ಅಪಘಾತಗಳಾಗದು ಎನ್ನಲು ಸಾಧ್ಯವೂ ಇಲ್ಲ. 100ಕಿ.ಮೀ. ಗಿಂತಲೂ ಹೆಚ್ಚು ವೇಗದಲ್ಲಿ ವಾಹನಗಳು ಸಂಚರಿಸುತ್ತಿರುವುದು ಸಮಸ್ಯೆಗೆ ಅನುವು ಮಾಡಿಕೊಡದೇ ಇರದು. ಹಾಗಾಗಿ ನಿಮ್ಮ ಎಚ್ಚರದಲ್ಲಿ ನೀವು ಇರುವುದು ಉತ್ತಮ ಎಂಬ ಸಲಹೆಯನ್ನು ನೀಡಬಹುದಷ್ಟೇ !

**ಎಷ್ಟು ಖರ್ಚಾಯಿತು ?**

ಅಂದಹಾಗೆ ಈ ಯೋಜನೆಯ ಒಟ್ಟು ವೆಚ್ಚ 12,389/– ಕೋಟಿ ರೂಪಾಯಿ, 2001ರಲ್ಲಿ ಯೋಜನೆ ಪ್ರಸ್ತಾವ ಮುಂದಿಟ್ಟದ್ದಾಗ ಒಟ್ಟು ವೆಚ್ಚ 3 ಸಾವಿರ ಕೋಟಿ ರೂ. ಎಂದೇ ಲೆಕ್ಕ ಹಾಕಲಾಗಿತ್ತು. ಆದರೆ ಕಾಲಾಂತರದಲ್ಲಿ ಭೂಸ್ವಾಧೀನ, ರೈತರಿಗೆ ಪರಿಹಾರ ಸೇರಿದಂತೆ ಹತ್ತು ಹಲವು ಅಡ್ಡಿ ಅಡಚಣೆಗಳು ಎದುರಾಗಿ, ಯೋಜನೆ ವಿಳಂಬದ ಹಾದಿಯನ್ನು ಪಡೆದುಕೊಂಡಿತ್ತು. ಪರಿಣಾಮವಾಗಿ ಯೋಜನೆಯ ವೆಚ್ಚ ನಾಲ್ಕುಪಟ್ಟು ಹೆಚ್ಚಾಯಿತು.

ಎಕ್ಸ್‌ಪ್ರೆಸ್ ವೇ ಗೆ 2001ರಲ್ಲಿ ಚಾಲನೆ ನೀಡಿದವರು ಉತ್ತರಪ್ರದೇಶದ ಅಂದಿನ ಮುಖ್ಯಮಂತ್ರಿ ಮಾಯಾವತಿ. ರೈತರ ವ್ಯಾಪಕ ವಿರೋಧಗಳ ನಡುವೆಯೇ ಈ ಯೋಜನೆ ಕೈಗೆತ್ತಿಕೊಳ್ಳಲಾಗಿತ್ತು. ಆದರೆ 2003ರಲ್ಲಿ ಸರ್ಕಾರ ಬದಲಾದ ಕಾರಣ ಯೋಜನೆ ನೆನೆಗುದಿಗೆ ಬಿದ್ದಿತು. 2007ರಲ್ಲಿ ಮತ್ತೆ ಮಾಯಾವತಿ ಅಧಿಕಾರದ ಗದ್ದುಗೆ ಏರಿದ ಬಳಿಕ ಯಮುನಾ ಎಕ್ಸ್‌ಪ್ರೆಸ್ ವೇ ಯೋಜನೆ ಕಾಮಗಾರಿ ವೇಗ ಪಡೆದುಕೊಂಡಿತು. ಯಮುನಾ ಎಕ್ಸ್‌ಪ್ರೆಸ್ ವೇ ನಿರ್ಮಾಣದ ಎಲ್ಲಾ ಕ್ರೆಡಿಟ್ ಜೇಪಿ ಗ್ರೂಪ್‌ಗೆ ಸಲ್ಲುತ್ತದೆ. 2012ರಲ್ಲಿ ತನ್ನ ಸಂಪೂರ್ಣ ಕಾಮಗಾರಿ ಮುಕ್ತಾಯವಾಗಿದೆ ಎಂಬ ಮಾಹಿತಿಯನ್ನು ಸರ್ಕಾರಕ್ಕೆ ನೀಡಿದ ನಂತರ ಉತ್ತರಪ್ರದೇಶದ ಈಗಿನ ಮುಖ್ಯಮಂತ್ರಿ ಅಖಿಲೇಶ್ ಯಾದವ್ ಅವರು ಇತ್ತೀಚೆಗೆ ಯಮುನಾ ಎಕ್ಸ್‌ಪ್ರೆಸ್ ವೇ ಗೆ ಚಾಲನೆ ನೀಡಿದರು.

ಭಾರತದ ಹಲವು ಮಹಾನಗರಗಳಲ್ಲಿ ಟ್ರಾಫಿಕ್ ದಟ್ಟಣೆ ಬಹುದೊಡ್ಡ ಸಮಸ್ಯೆಯಾಗಿ ಕಾಡುತ್ತಿರುವ ಇಂದಿನ ದಿನಗಳಲ್ಲಿ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ಅತಿ ಉದ್ದನೆಯ ಮತ್ತು 6 ಲೇನ್‌ಗಳುಳ್ಳ ರಸ್ತೆ ನಿರ್ಮಾಣವಾಗುವುದು ಉತ್ತಮ ಬೆಳವಣಿಗೆ. ಮುಂದಿನ ತಲೆಮಾರಿಗೆ ಇದು ಅತ್ಯಂತ ಅನುಕೂಲವಾಗುವುದರಲ್ಲಿ ಅನುಮಾನವೇ ಇಲ್ಲ. ಆದರೆ ಈ ಅಭಿವೃದ್ಧಿಗೆ ರೈತರು ತಮ್ಮ ಭೂಮಿಯನ್ನು ಅಡವಿಡಬೇಕಾಗಿ ಬಂದದ್ದು ಮಾತ್ರ ಕರಾಳ ವಾಸ್ತವ. ಹಾಗಾಗಿ ಇಲ್ಲಿನ ರೈತರ ಧ್ವನಿಗೆ ಬೆಲೆ ನೀಡುವುದು ಸರ್ಕಾರದ ಆದ್ಯತೆಯಾಗಲೇಬೇಕು.

ಇನ್ನು ರಸ್ತೆ ಪ್ರಮಾಣದ ವಿಚಾರಕ್ಕೆ ಬರೋಣ. ಟೋಲ್ ದರ ಸ್ವಲ್ಪ ಜಾಸ್ತಿಯೇ ಆಯಿತೆಂದು ನಿಮಗೆ ಅನಿಸಿದರೂ ಪರವಾಗಿಲ್ಲ. ಆದರೆ ದೆಹಲಿ ಸೇರಿದಂತೆ ಉತ್ತರ ಭಾರತ ಪ್ರವಾಸ ಮಾಡಬಯಸುವ ಮಂದಿ, ಯಮುನಾ ಎಕ್ಸ್‌ಪ್ರೆಸ್ ವೇ ಮೈಮನಗಳಲ್ಲಿ ತುಂಬುವ ಹಿತಾನುಭವವನ್ನು ಒಮ್ಮೆಯಾದರೂ ಸವಿಯಬೇಕು !

❑ ಕೆ. ರಾಘವ ಶರ್ಮ, ಕೃಪೆ : ವಿಜಯವಾಣಿ

# ಮೈಸೂರು ದಸರಾ ಎಷ್ಟೊಂದು ಸುಂದರ !



ರಾಜಪ್ರಭುತ್ವದ ಕಾಲಘಟ್ಟದಲ್ಲಿ ನಾಡಹಬ್ಬಗಳನ್ನು ಆಚರಿಸುವುದು ಭಾರತೀಯ ಚರಿತ್ರೆಯಲ್ಲಿ ಪರಂಪರೆಯಾಗಿ ಬೆಳೆದುಬಂದಿದೆ. ಕೇರಳದ ಓಣಂ, ಅಸ್ಸಾಮಿನ ಬಿಹು, ಬಂಗಾಲದ ದುರ್ಗಾಷ್ಟಮಿ, ಮಹಾರಾಷ್ಟ್ರದ ಕೃಷ್ಣಾಷ್ಟಮಿ ಹೀಗೆ ಧಾರ್ಮಿಕ ಸಂಪ್ರದಾಯಗಳ ಹಿನ್ನೆಲೆಯಲ್ಲೇ ಅನೇಕ ರೀತಿಯ ಹಬ್ಬಗಳನ್ನು ಆಚರಿಸುವ ಮೂಲಕ ನಾಡಿನ ಐಕಮತ್ಯವನ್ನು ಸಾರುವುದು ರಾಜಪ್ರಭುತ್ವದ ಪ್ರಮುಖ ಧ್ಯೇಯವಾಗಿದ್ದಿರಬಹುದು. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ಅನೇಕ ಸಂಕಷ್ಟ, ಕ್ಷೋಭೆಗಳನ್ನು ಎದುರಿಸುವ ಸಾಮಾನ್ಯ ಜನತೆಗೆ ನಾಡಹಬ್ಬ ಅಥವಾ ಜಾತ್ರೆಗಳ ಮೂಲಕ ಮನರಂಜನೆ ಒದಗಿಸಿ, ಪ್ರಭುತ್ವಕ್ಕೆ ಪ್ರತಿರೋಧ ವ್ಯಕ್ತಪಡಿಸದಂತೆ ನೋಡಿಕೊಳ್ಳುವ ರಾಜತಂತ್ರವೂ ಆಗಿರಬಹುದು. ಹಾಗಾಗಿಯೇ ಸಣ್ಣ ಪುಟ್ಟ ರಾಜ ಸಂಸ್ಥಾನಗಳಲ್ಲೂ ಸಹ ಇದೇ ರೀತಿಯ ನಾಡಹಬ್ಬಗಳು ನಡೆಯುತ್ತವೆ. ದಸರಾ ಹಬ್ಬವೂ ಅನೇಕ ರಾಜ್ಯಗಳಲ್ಲಿ ವಿಭಿನ್ನ ರೀತಿಯಲ್ಲಿ ನಡೆಯುತ್ತದೆ.

ನವರಾತ್ರಿಯ ಸಂದರ್ಭದಲ್ಲಿ ಹತ್ತು ದಿನಗಳ ಕಾಲ ನಡೆಯುವ ದಸರಾ ಹಬ್ಬಕ್ಕೆ ತನ್ನದೇ ಆದ ಪೌರಾಣಿಕ ಐತಿಹ್ಯವಿದೆ. ಪ್ರಾರಂಭದಲ್ಲಿ ವರುಣ ದೇವರನ್ನು ಓಲೈಸಲು ಆಚರಿಸುತ್ತಿದ್ದ ಹಬ್ಬ ಕ್ರಮೇಣ ದುಷ್ಟ ಸಂಹಾರ–ಶಿಷ್ಟ ರಕ್ಷಣೆಯ ಪರಂಪರೆಗೆ ಸಿಲುಕಿ, ರಾಜಮನೆತನದ ಕೌಟುಂಬಿಕ ಹಬ್ಬವಾಗಿದ್ದ

ದಸರಾ ನಾಡಹಬ್ಬವಾಗಿ ಪರಿವರ್ತಿತವಾಯಿತೆಂದೂ ಹೇಳಲಾಗುತ್ತದೆ. ಚಾಮುಂಡೇಶ್ವರಿ ದೇವಿ ಮಹಿಷ ಎಂಬ ರಾಕ್ಷಸನನ್ನು ಕೊಲ್ಲುವ ಮೂಲಕ ದುಷ್ಟ ಶಕ್ತಿಗಳ ಸಂಹಾರ ಮಾಡಿದಳೆಂದು ನಂಬಲಾಗುತ್ತದೆ. ಮೈಸೂರಿನ ಹೆಸರೂ ಮಹಿಷನಿಂದಲೇ ಬಂದಿದೆ ಎಂದೂ ಹೇಳಲಾಗುತ್ತದೆ. ಈ ನಂಬಿಕೆ ಮತ್ತು ಪೌರಾಣಿಕ ಕಲ್ಪನೆಗಳ ಹಿನ್ನೆಲೆಯಲ್ಲೇ ಮೈಸೂರು ಸಂಸ್ಥಾನವನ್ನಾಳಿದ ರಾಜ ಒಡೆಯರು ತಮ್ಮ ಶೌರ್ಯ ಪರಾಕ್ರಮ ಪ್ರದರ್ಶಿಸಲು ವರ್ಷಕ್ಕೊಮ್ಮೆ ತಮ್ಮ ಸಕಲ ಶಸ್ತ್ರಾಸ್ತ್ರಗಳಿಗೂ ಪೂಜೆ ಮಾಡಿ ಶತ್ರುಗಳಿಗೆ ತಮ್ಮ ಶಕ್ತಿಯನ್ನು ತೋರಿಸುವ ತಂತ್ರವನ್ನೂ ಇಲ್ಲಿ ಕಾಣಬಹುದಾಗಿದೆ. ವಿಜಯನಗರ ರಾಜರ ಅವಧಿಯಲ್ಲಿ (ಕ್ರಿಶ 1336–1565) ದಸರಾ ಒಂದು ನಾಡಹಬ್ಬವಾಗಿ ಆಚರಿಸಲ್ಪಟ್ಟಿತು. ವಿಜಯನಗರದ ರಾಯಭಾರಿಯಾಗಿದ್ದ ಮೈಸೂರಿನ ರಾಜ ಒಡೆಯರ್ (1578–1617) 1610ರಲ್ಲಿ ಮೈಸೂರಿನಲ್ಲೂ ದಸರಾ ಆಚರಿಸುವ ಪರಂಪರೆಗೆ ನಾಂದಿ ಹಾಡಿದ್ದರು. ಕಂಠೀರವ ನರಸರಾಜ ಒಡೆಯರ್ ಕಾಲದಲ್ಲಿ (1648) ದಸರಾ ತನ್ನ ವೈಭವವನ್ನು ವೃದ್ಧಿಸಿಕೊಂಡಿತ್ತು. ಹೈದರ್ ಆಲಿ–ಟಿಪ್ಪು ಸುಲ್ತಾನ್ ಕಾಲದಲ್ಲಿ ಶ್ರೀರಂಗಪಟ್ಟಣದಲ್ಲಿ ನಡೆಯುತ್ತಿದ್ದ ದಸರಾ 1799ರಲ್ಲಿ ಮೂರನೆಯ ಕೃಷ್ಣರಾಜ ಒಡೆಯರ್‌ಅವಧಿಯಲ್ಲಿ ಮೈಸೂರಿಗೆ ವರ್ಗಾವಣೆಯಾಗಿತ್ತು. 1805ರಲ್ಲಿ ಪ್ರಥಮ ಬಾರಿಗೆ ಮೊಘಲರಿಂದ ಪ್ರೇರೇಪಿತರಾಗಿ ವಿಶೇಷ ರಾಜ ದರ್ಬಾರ್ ನಡೆಸಲಾರಂಭಿಸಿದ್ದರು. ದಸರಾ ಹಬ್ಬ ಒಂದು ನಾಡಹಬ್ಬವಾಗಿ ರಾಜವಂಶಜರ ಸಂಪ್ರದಾಯದಂತೆ ಬೆಳೆದುಬಂದು ಉಚ್ಛ್ರಾಯ ಹಂತ ತಲುಪಿದ್ದು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕಾಲದಲ್ಲಿ (1902–1940).

ಮೈಸೂರು ಅರಸರ ಸಿಂಹಾಸನದ ಹಿಂದೆಯೂ ಅನೇಕ ಕಥೆಗಳಿವೆ. ಚಿನ್ನದ ಈ ಸಿಂಹಾಸನ ಮಹಾಭಾರತದ ಧರ್ಮರಾಜನದ್ದೆಂದೂ, ಅದನ್ನು ವಿದ್ಯಾರಣ್ಯರು ರಾಜ ಒಡೆಯರಿಗೆ 1609ರಲ್ಲಿ ಬಳುವಳಿಯಾಗಿ ನೀಡಿದರೆಂದೂ ಹೇಳಲಾಗುತ್ತದೆ. ಮೊಘಲ್ ದೊರೆ ಔರಂಗಜೇಬ್ 1700ರಲ್ಲಿ ಚಿಕ್ಕದೇವರಾಜ ಒಡೆಯರಿಗೆ ನೀಡಿದ್ದರೆಂದೂ ಪ್ರತೀತಿ ಇದೆ. ಮತ್ತೆ ಕೆಲವರು ಪೌರಾಣಿಕ ದೊರೆ ವಿಕ್ರಮಾದಿತ್ಯನಿಗೆ ಸೇರಿದ ಸಿಂಹಾಸನವೆಂದೂ ಹೇಳುತ್ತಾರೆ. ನವರಾತ್ರಿಯ ಸಂದರ್ಭದಲ್ಲಿ ಪ್ರತಿದಿನವೂ ಸಂಜೆ ಸಿಂಹಾಸನಕ್ಕೆ ಸಕಲ ರಾಜಕುಟುಂಬ ಗೌರವದಿಂದ ಪೂಜೆ ಸಲ್ಲಿಸುತ್ತಿದ್ದರೆಂದು ಹೇಳಲಾಗುತ್ತದೆ. ವಿಜಯ ದಶಮಿಯ ದಿನದಂದು 750 ಕಿಲೋ ತೂಕದ ಚಿನ್ನದ ರತ್ನ ಖಚಿತ ಸಿಂಹಾಸನದಲ್ಲಿ ಮಹಾರಾಜರನ್ನು ಆಸೀನರಾಗಿಸಿ, ಆನೆಯ ಮೇಲೆ ಮೆರವಣಿಗೆ ಕರೆದೊಯ್ಯುವ ಜಂಬೂಸವಾರಿ ಜಾರಿಗೆ ಬಂದದ್ದೂ ಈ ಅವಧಿಯಲ್ಲೇ. ರಾಜಪ್ರಭುತ್ವ ಕೊನೆಗೊಂಡು ಭಾರತ ಸ್ವತಂತ್ರ ಗಣತಂತ್ರ ರಾಷ್ಟ್ರವಾದ ನಂತರ ಅಂಬಾರಿಯಲ್ಲಿ ಮಹಾರಾಜರ ಬದಲು ಚಾಮುಂಡೇಶ್ವರಿ ವಿಗ್ರಹವನ್ನು ಕೂಡಿಸುವ ಪರಂಪರೆ ಆರಂಭವಾಗಿತ್ತು. ಇಂದಿಗೂ ಅದೇ ಪರಂಪರೆ ಮುಂದುವರೆದಿದೆ.



## ಗತವೈಭವದ ಮೆಲುಕು :

ರಾಜಾ ಪ್ರತ್ಯಕ್ಷ ದೇವತಾ ಎಂಬ ಗಾಢವಾದ ನಂಬಿಕೆಯಿಂದ ತಮ್ಮನ್ನಾಳುವ ಅರಸರಿಗೆ ದೈವತ್ವವನ್ನೇ ದಯಪಾಲಿಸಿದ ಜನಸಾಮಾನ್ಯರಿಗೆ ದಸರಾ ಕೇವಲ ಒಂದು ನಾಡಹಬ್ಬ ಮಾತ್ರವಾಗಿರದೆ ತಮ್ಮ ಮಹಾರಾಜನನ್ನು ಪ್ರತ್ಯಕ್ಷವಾಗಿ ನೋಡಬಹುದಾದ ಸುಸಂದರ್ಭವೂ ಆಗಿತ್ತು. ಮಹಾರಾಜರ ದರ್ಶನ ಪಡೆಯಲೆಂದೇ ಲಕ್ಷಾಂತರ ಮಂದಿ ನವರಾತ್ರಿಯ ಸಂದರ್ಭದಲ್ಲಿ ಮೈಸೂರಿಗೆ ಆಗಮಿಸುತ್ತಿದ್ದುದು ಸಾಮಾನ್ಯವಾಗಿತ್ತು. ಈ ಅವಧಿಯಲ್ಲಿ ದಸರಾ ಒಂದು ನೈಜ ನಾಡಹಬ್ಬವಾಗಿ ಆಚರಿಸಲ್ಪಡುತ್ತಿತ್ತು. ಧಾರ್ಮಿಕತೆಗಿಂತಲೂ ಸಾಂಸ್ಕೃತಿಕ ವಿಭಿನ್ನತೆಗಳು ಮೇಳೈಸುತ್ತಿದ್ದವು. ಜಾತಿ–ಧರ್ಮ–ಭಾಷೆಗಳ ಎಲ್ಲೆ ಮರೆತು ಜನತೆ ಹಬ್ಬದಲ್ಲಿ ಭಾಗವಹಿಸುತ್ತಿದ್ದರು. ನವರಾತ್ರಿಯ ಸಂದರ್ಭದಲ್ಲಿ ಇಡೀ ಮೈಸೂರು ನಗರವನ್ನು ತಳಿರು ತೋರಣಗಳಿಂದ ಸಿಂಗರಿಸಲಾಗುತ್ತಿತ್ತು. ರಾಜ್ಯದ ಐತಿಹ್ಯವನ್ನೂ, ಗತವೈಭವವನ್ನೂ ಸಾರುವ ರೀತಿಯಲ್ಲಿ ಅನೇಕ ಕಲಾವಿದರು ತಮ್ಮ ಕಲಾಕುಂಚದಿಂದ ಚಿತ್ರಗಳನ್ನು ಬಿಡಿಸುತ್ತಿದ್ದರು.

ಕರ್ನಾಟಕದ ಪಾರಂಪರಿಕ ಕಲೆಗಳಾದ ಡೊಳ್ಳು ಕುಣಿತ, ಕಂಸಾಳೆ, ಸೋಮನ ಕುಣಿತ ಹೀಗೆ ಜನಪದ ಸಂಸ್ಕೃತಿಯ ಅನೇಕ ಕಲೆಗಳಿಗೆ ದಸರಾ ಕೇಂದ್ರ ಬಿಂದುವಾಗಿತ್ತು. ದೇಶದ ವಿವಿದೆಡೆಗಳಿಂದ ಆಗಮಿಸುತ್ತಿದ್ದ ರಾಜ ಮಹಾರಾಜರ ಎದುರು ತಮ್ಮ ಕಲೆಯನ್ನು ಪ್ರದರ್ಶಿಸುವುದೇ ಕಲಾವಿದರಿಗೆ ಉತ್ಕೃಷ್ಟ ಧ್ಯೇಯವಾಗಿರುತ್ತಿತ್ತು. ದಸರಾ ವೈಭವವನ್ನು ನೋಡಿ ಸವಿದವರೇ ಅದರ ವೈಭವವನ್ನು ವರ್ಣಿಸಲು ಸಾಧ್ಯ ಎನಿಸುತ್ತದೆ. ಅಂದಿನ ಪೀಳಿಗೆಯ ಹಿರಿಯರ ಮಾತುಗಳನ್ನೇ ಆಧರಿಸಿ ಹೇಳುವುದಾದರೆ ನವರಾತ್ರಿಯ ಸಂದರ್ಭ ಮೈಸೂರಿನ ಪ್ರತಿಯೊಂದು ಮನೆಯಲ್ಲೂ ಹಬ್ಬದ ವಾತಾವರಣ ಸೃಷ್ಟಿಯಾಗುತ್ತಿತ್ತೆಂದು ಹೇಳಬಹುದು. ಮೈಸೂರು ನಗರವನ್ನು ಸುಂದರ ತಾಣವನ್ನಾಗಿ ಮಾಡಲು ಹದಿಹರೆಯದವರಿಂದ ಹಿರಿಯರವರೆಗೂ ಎಲ್ಲರೂ ತಮ್ಮದೇ ಆದ ರೀತಿಯಲ್ಲಿ ಪಾಲ್ಗೊಳ್ಳುತ್ತಿದ್ದುದನ್ನು ಇಂದಿಗೂ ಸ್ಮರಿಸಲಾಗುತ್ತದೆ. ಮೈಸೂರಿನ ಒಡೆಯರು ಆಧುನಿಕ ಶೈಲಿಯ ಜೀವನವನ್ನೇ ಅಳವಡಿಸಿಕೊಂಡಿದ್ದರೂ, ದಸರಾ ಹಬ್ಬದ ಸಂದರ್ಭದಲ್ಲಿ ಆಧುನಿಕತೆಗಿಂತಲೂ ಪಾರಂಪರಿಕ–ಜನಪದ ಸೊಗಡು ಎದ್ದುಕಾಣುತ್ತಿತ್ತೆಂದು ಹಿರಿಯರು ಹೇಳುತ್ತಾರೆ.

ಮೈಸೂರು ಆಗಿನ್ನೂ ನಗರವಾಗಿ ಬೆಳೆದಿರಲಿಲ್ಲ. ನಗರ ಸಂಸ್ಕೃತಿಯೂ ಹೊಕ್ಕಿರಲಿಲ್ಲ. ಹಾಗಾಗಿ ಗ್ರಾಮೀಣ ಸಂಸ್ಕೃತಿಯ ಎಲ್ಲಾ ಲಕ್ಷಣಗಳೂ ದಸರಾ ಸಂದರ್ಭದಲ್ಲಿ ವ್ಯಕ್ತವಾಗುತ್ತಿತ್ತು. ಪಾರಂಪರಿಕ ನೃತ್ಯಗಳು, ಜನಪದ ಗಾಯನ, ಶಾಸ್ತ್ರೀಯ ಗಾಯನ, ಸಾಂಪ್ರದಾಯಿಕ ಕ್ರೀಡೆಗಳು ನಾಡಹಬ್ಬದಲ್ಲಿ ಮೇಳೈಸುತ್ತಿದ್ದವು. ಮಲ್ಲ ಯುದ್ಧ ಅಥವಾ ಕುಸ್ತಿ ಕ್ರೀಡೆಗೆ ಪ್ರಸಿದ್ಧವಾಗಿದ್ದ ಮೈಸೂರು ಗರಡಿ ಮನೆಗಳಲ್ಲಿ ಪಳಗಿದ ಪಟುಗಳ ಕುಸ್ತಿಯನ್ನು ನೋಡಲೆಂದೇ ಸಾವಿರಾರು ಜನ ಸೇರುತ್ತಿದ್ದರೆಂದು ಹೇಳಲಾಗುತ್ತದೆ. ಮೈಸೂರಿನ ಸುತ್ತ ಹರಡಿದ್ದ ದಟ್ಟ ಅರಣ್ಯಗಳಿಂದ ಬರುತ್ತಿದ್ದ ಬುಡಕಟ್ಟು ಜನಾಂಗದವರ ಕ್ರೀಡೆಗಳೂ ಅಂದಿನ ಕಾಲದ ವೈಭವದ ಭಾಗವಾಗಿದ್ದವು. ರಾಜ್ಯದ ವಿವಿಧೆಡೆಗಳಿಂದ ಬಂದು ಬಿಡಾರ ಹೂಡುತ್ತಿದ್ದ ನಾಟಕ ಕಂಪನಿಗಳು ವಿವಿಧ ಸಾಮಾಜಿಕ–ಪೌರಾಣಿಕ ನಾಟಕಗಳನ್ನು ಪ್ರದರ್ಶಿಸುತ್ತಿದ್ದವು. ಒಟ್ಟಾರೆ ಹೇಳುವುದಾದರೆ ಸ್ವಾತಂತ್ರ್ಯಪೂರ್ವದ ದಸರಾ ನಿಜವಾದ ನಾಡಹಬ್ಬವೇ ಆಗಿತ್ತು. ಆಗ ಮೈಸೂರು ಪ್ರವಾಸೀ ಕೇಂದ್ರವಾಗಿರಲಿಲ್ಲ. ಕರ್ನಾಟಕದ ವೈಭವವನ್ನು ಸೂಸುವ ಸಾಂಸ್ಕೃತಿಕ ನಗರಿಯಾಗಿತ್ತು. ಆದರೆ ಇದೇ ನಾಡಹಬ್ಬವೇ ಕ್ರಮೇಣ ಮೈಸೂರನ್ನು ಪ್ರವಾಸೋದ್ಯಮ ಕೇಂದ್ರವನ್ನಾಗಿ ಪರಿವರ್ತಿಸಿದ್ದನ್ನೂ ಅಲ್ಲಗಳೆಯಲಾಗುವುದಿಲ್ಲ.

❑ ನಾ.ದಿವಾಕರ

## ಡೆಪ್ಯುಟಿ ಕಮಿಷನರ್ ಆಫ್ ಪೋಲಿಸ್ ಆಗಿ ಶ್ರೀ ಬಿ.ಎಲ್. ಸುರೇಶ್ ಅವರಿಗೆ ಭಡ್ತಿ



ಶ್ರೀ ಬಿ.ಎಲ್. ಸುರೇಶ್ ಅವರು ಸುಮಾರು 10 ವರ್ಷಗಳಿಂದ ದೆಹಲಿ ಪೋಲಿಸ್ ಸೇವೆಯಲ್ಲಿ ಇದ್ದು ಇವರು ಪೋಲೀಸ್ ಚೀಫ್ ಆಫ್ ಡಿಯು–ದಮನ್ ಹಾಗೂ ದೆಹಲಿಯ ಎ.ಸಿ.ಪಿ. ಟ್ರಾಫಿಕ್, ಎ.ಸಿ.ಪಿ. ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಹಾಗೂ ಎ.ಸಿ.ಪಿ. ಲಜಪತ್ ನಗರ ಹಾಗೂ ಸ್ಪೆಶಲ್ ಬ್ರಾಂಚ್ ಎಸಿಪಿಯಾಗಿ ಸೇವೆ ಸಲ್ಲಿಸುತ್ತಿದ್ದ ಇವರು ಈಗ ಡೆಪ್ಯುಟಿ ಕಮಿಷನರ್ ಆಫ್ ಪೋಲೀಸ್, ಸ್ಪೆಶಲ್ ಬ್ರಾಂಚ್ ಸೇವೆಗೆ ಭಡ್ತಿ ಹೊಂದಿದ್ದಾರೆ. ದೆಹಲಿ ಕರ್ನಾಟಕ ಸಂಘ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹೃದಯ ಪೂರ್ವಕ ಅಭಿನಂದನೆಗಳು.

**ಸಿ.ಎಂ. ನಾಗರಾಜ**

## ಅನುವಾದಿತ ಕಥಾ ಸ್ಪರ್ಧೆಯಲ್ಲಿ ಕೃಷ್ಣಮೂರ್ತಿ ಕಲುಮಂಗಿ ಅವರಿಗೆ ಪ್ರಥಮ ಬಹುಮಾನ



ಖ್ಯಾತ ಲೇಖಕಿ ಹಾಗೂ ಶ್ರೇಷ್ಠ ಅನುವಾದಕಿಯಾಗಿದ್ದ ದಿವಂಗತ ಶ್ರೀಮತಿ ಶರ್ವಾಣಿ ಅವರ ಸವಿ ನೆನಪಿನಲ್ಲಿ ಪ್ರಿಯಾಂಕ ಪತ್ರಿಕೆಯ ಸಂಯೋಜನೆಯೊಂದಿಗೆ ಪ್ರತಿವರ್ಷವೂ ನಡೆಸಲಾಗುವ 'ಬೆನಕ ಸಾಹಿತ್ಯ ಸ್ಪರ್ಧೆ'ಯಲ್ಲಿ 2012 ನೇ ಸಾಲಿಗಾಗಿ ಕೃಷ್ಣಮೂರ್ತಿ ಕಲುಮಂಗಿ ಅವರಿಗೆ ಅತ್ಯುತ್ತಮ ಅನುವಾದಿತ ಕಥೆಯೆಂದು 'ತುಂಗಭದ್ರೆಯೂ ... ವಿಶಾಲಾಕ್ಷಿಯೂ' ಎಂಬ ಕಥೆಗಾಗಿ ಪ್ರಥಮ ಬಹುಮಾನ ದೊರಕಿದೆ. ಈ ಸ್ಪರ್ಧೆಗಾಗಿ ಕಲುಮಂಗಿ ಅವರು ತೆಲುಗಿನ ಖ್ಯಾತ ಕಥೆಗಾರರಾದ ರಂಗನಾಥ ರಾಮಚಂದ್ರ ರಾವು ಅವರ ಬಹುಮಾನಿತ ತೆಲುಗು ಕಥೆಯಾದ 'ನೇನುನ್ನಾಗಾ...' ಎಂಬ ಕಥೆಯನ್ನು ಅನುವಾದಿಸಿ ಕಳುಹಿಸಿದ್ದರು. ಬಹುಮಾನದ ರೂಪದಲ್ಲಿ ಕಲುಮಂಗಿ ಅವರು ಮೂರು ಸಾವಿರ ರೂಪಾಯಿಗಳು ಹಾಗೂ ಪ್ರಶಂಸಾ ಪತ್ರವನ್ನು ಪಡೆಯಲಿದ್ದಾರೆ. ಇದು ಅಖಿಲ ಭಾರತ ಮಟ್ಟದ ಸ್ಪರ್ಧೆಯಾಗಿದ್ದು ತೆಲುಗು, ತಮಿಳು, ಹಿಂದಿ, ಮರಾಠಿ ಭಾಷೆಗಳ ಕತೆಗಳು ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದವು.

ಶ್ರೀ ಕಲುಮಂಗಿ ಅವರು ಕನ್ನಡದಿಂದ ತೆಲುಗು ಭಾಷೆಗೆ ಹಾಗೂ ತೆಲುಗಿನಿಂದ ಕನ್ನಡ ಭಾಷೆಗೆ ಕಥೆಗಳನ್ನು, ಕವನಗಳನ್ನು ಅನುವಾದಿಸುವ ಕಾರ್ಯದಲ್ಲಿ ತೊಡಗಿಕೊಂಡಿದ್ದು ಅವರ ಬರಹಗಳು ಅನೇಕ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ.

ಈ ಸ್ಪರ್ಧೆಯಲ್ಲಿ ಅವರಿಗೆ ಈ ಬಹುಮಾನವು ಮೂರನೆಯ ಬಾರಿ ದೊರಕಿದ್ದು, ಈಗಾಗಲೇ ಎರಡು ಬಾರಿ ಬಹುಮಾನಗಳನ್ನು ಗೆದ್ದಿರುವರು. ಕಲುಮಂಗಿ ಅವರ ಶ್ರೀಮತಿ ತುಳಸಾ ಕಲುಮಂಗಿ ಅವರಿಗೆ ನಾಲ್ಕು ಬಾರಿ ಬಹುಮಾನಗಳು ದೊರಕಿವೆ.

ಈ ಬಾರಿಯ ಸ್ಪರ್ಧೆಗಾಗಿ ಪ್ರಖ್ಯಾತ ಕಥೆಗಾರರಾದ ಶ್ರೀ ಈಶ್ವರ ಚಂದ್ರ ಅವರು ನಿರ್ಣಾಯಕರಾಗಿದ್ದರು.

ದೆಹಲಿ ಕರ್ನಾಟಕ ಸಂಘದ ಸಕ್ರಿಯ ಸದಸ್ಯರಾದ ಕಲುಮಂಗಿ ಅವರು ಇದೀಗ ಮುಂಬೈನಲ್ಲಿ ನೆಲೆಸಿದ್ದಾರೆ. ಆತ್ಮೀಯರಾದ ಕಲುಮಂಗಿ ಅವರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾರ್ದಿಕ ಅಭಿನಂದನೆಗಳು.


# Saujanya Printing Press

**A HOUSE OF QUALITY PRINTING**

**D-47, Okhla Industrial Area, Phase-I,**
**New Delhi - 110 020**
**Phone : 40520770, 26815778**
**Mobile : 9811104398, 9811604398**
**e-mail : saujanyapp2010@gmail.com / hpgp2006@gmail.com**

**ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ**
**ಬಹುವರ್ಣದ ಸುಸಜ್ಜಿತ ಮುದ್ರಣಾಲಯ**

**ಸೌಜನ್ಯ ಪ್ರಿಂಟಿಂಗ್ ಪ್ರೆಸ್** ಮತ್ತು **ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್**

ನಾವು ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು, ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡುತ್ತೇವೆ.

ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು, ಬೈಂಡಿಂಗ್ ಕೆಲಸಗಳಿಗಾಗಿ ನಮ್ಮನ್ನು ದಯವಿಟ್ಟು ಸಂಪರ್ಕಿಸಿರಿ.

**ಮುದ್ರಣವೂ ಒಂದು ಕಲೆ, ಅದುವೇ ನಮ್ಮ ನೆಲೆ**

Delhi Karnataka Sangha's Abhimatha Monthly,
October -2012, Price Rs.1/- RNI Regn. No. 53405/91, DL-SW-15/4016/10-11-12
Printout Date : October 8th / 9th, Postal Date :10th / 11th, Total Pages-24



# ದಕ್ಷಿಣ ಭಾರತದ ಅಪ್ಪಟ ಕಾಟನ್ ಸೀರೆಗಳು
# ಕಾಟನ್ ಸಲ್ವಾರ್-ಕಮೀಜ್, ಮೈಸೂರು ಸಿಲ್ಕ್
# ಕಾಂಜೀವರಂ ಸಿಲ್ಕ್, ಮದುರೈ ಸ್ಪೆಶಲ್ ಕಾಟನ್ ಸೀರೆ,
# ಬೆಂಗಳೂರು ಕಾಟನ್ ಶರ್ಟ್‌ಗಳು
# ಹಾಗೂ


ಮಂಗಳೂರು ಧೋತರಗಳು, ಮೈಸೂರು ಅಗರಬತ್ತಿ, ಮೈಸೂರು ಸ್ಯಾಂಡಲ್ ಸೋಪ್

ಆಕರ್ಷಕ ಬೆಲೆಗಳಲ್ಲಿ

## ಮಾರಾಟ ಅಕ್ಟೋಬರ್ 16 ರಿಂದ ನವೆಂಬರ್ 15 ರವರೆಗೆ



## ದಸರಾ ಹಾಗೂ ದೀಪಾವಳಿ
## ಹಬ್ಬದ ಶುಭಾಶಯಗಳು



**10 ರಿಂದ 30% ರಿಯಾಯಿತಿ**



ಸ್ಥಳ

## ಪವಿತ್ರ ಸಿಲ್ಕ್ಸ್ ಆಂಡ್ ಫ್ಯಾಬ್ರಿಕ್ಸ್

ದೆಹಲಿ ಕರ್ನಾಟಕ ಸಂಘ, ರಾವ್ ತುಲಾರಾಂ ಮಾರ್ಗ

ಸೆಕ್ಟರ್-12, ಆರ್.ಕೆ.ಪುರಂ, ಹೊಸದೆಹಲಿ-110022

011-32429667, 9313869163, 931022273

ಸಮಯ : ಬೆಳಗ್ಗೆ 10.30ರಿಂದ ರಾತ್ರಿ 9.00ಗಂಟೆಯ ತನಕ


Editor: Smt.Usha Bharatadri, Printed & Published by C.M. Nagaraja General Secretary on behalf of Delhi Karnataka Sangha (R), Rao Tularam Marg, Sector-12, R.K.Puram, New Delhi-110022, Tel: 26109615 and printed at Saujanya Printing Press, C-95, Okhla Industrial Area, Phase-I, New Delhi-110020, Tel: 26815778, 40520770